**ಅಧ್ಯಕ್ಷರು** :- ಮಾನ್ಯ ಗೃಹ ಮಂತ್ರಿಗಳು ದಯವಿಟ್ಟು ಅದರ ಕಡೆ ಸ್ವಲ್ಪ ಗಮನ ಹರಿಸಿ. ಮಾನ್ಯ ಶೆಟ್ಟರ್‌ರವರೂ ಹೇಳಿದ್ದಾರೆ. ಸೋಮಶೇಖರ್‌ರವರೂ ಹೇಳಿದ್ದಾರೆ.

**ಶ್ರೀ ಆರಗ ಜ್ಞಾನೇಂದ್ರ** :- ಮೊನ್ನೆ ಒಬ್ಬರು ಲಾಂಚ್‌ಗೆ ಬರಲಿಕ್ಕೆ ಕ್ಯೂ ನಲ್ಲಿ ನಿಂತಿದ್ದಂಥವರಿಗೆ ಕಪಾಳಕ್ಕೆ ಹೊಡೆದು ಓಡಿಸಿಬಿಟ್ಟಿದ್ದಾರೆ ಒಬ್ಬ ಕಾನ್ಸ್‌ಟೇಬಲ್. ಅಲ್ಲಿಗೆ ಸೌಜನ್ಯವಿರುವ ಅಧಿಕಾರಿಗಳನ್ನು ನಿಯುಕ್ತಿ ಮಾಡಬೇಕು.

† **ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು)** :- ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಆತ್ಮಾನಂದರವರನ್ನು ತಡೆಯತಕ್ಕಂಥ ಕೆಲಸವನ್ನು ಉದ್ದೇಶಪೂರ್ವಕವಾಗಿ ಪೋಲೀಸರು ಮಾಡಿದ್ದಾರೆ ಎನ್ನತಕ್ಕಂಥ ಮಾಹಿತಿಯನ್ನು ಅವರು ಕೊಡುತ್ತಿದ್ದಾರೆ. ಹಾಗೆ, ಯಾವುದೇ ಅಧಿಕಾರಿ ಉದ್ದೇಶಪೂರ್ವಕವಾಗಿ ಮಾಡಿದ್ದರೆ, ಅವರ ಮೇಲೆ ಖಂಡಿತವಾಗಿ ಕ್ರಮವನ್ನು ಜರುಗಿಸುತ್ತೇನೆ ಮತ್ತು ಅವರ ವರ್ತನೆಯಿಂದ ಶಾಸಕರ ಮನಸ್ಸಿಗೆ ನೋವಾಗಿದೆ. ಅದಕ್ಕಾಗಿ ನಾನು ಅವರ ಕ್ಷಮೆಯನ್ನು ಕೇಳುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ತಾವು ಹಾಕಿಕೊಟ್ಟಂಥ ಮಾರ್ಗಸೂಚಿಗಳು ಏನಿವೆ, ಅದಕ್ಕನುಸಾರವಾಗಿ ಮತ್ತು ಸೆಕ್ಯುರಿಟಿ ಪರ್ಪಸ್ ವಿಚಾರವಾಗಿ ಎಷ್ಟು ಜನರನ್ನು ಒಳಗೆ ಬಿಡಬೇಕು ಮತ್ತು ಮೀಟಿಂಗ್‌ಗಳಿಗೆ ಯಾವ ರೀತಿಯಾಗಿ ಪಾಸ್ ಅನ್ನು ತೆಗೆದುಕೊಂಡು ಬರಬೇಕು ಅನ್ನತಕ್ಕಂಥ ಕಟ್ಟುನಿಟ್ಟಿನ ಸೂಚನೆಗಳು ಡಿ.ಪಿ.ಎ.ಆರ್. ನಿಂದ ಮತ್ತು ತಮ್ಮಿಂದ ಬಂದಿರುವುದನ್ನು ವಾಯ್‌ಲೇಟ್ ಮಾಡಿ ಏನಾದರೂ ಅಚಾತುರ್ಯ ನಡೆದಿದ್ದರೆ, ಖಂಡಿತವಾಗಿ ಅಂಥ ಅಧಿಕಾರಿಗಳ ಮೇಲೆ ನಾವು ಕ್ರಮವನ್ನು ಜರುಗಿಸುತ್ತೇವೆ. ಆದರೆ ನನ್ನ ಒಂದು ಮನವಿ ಎಂದರೆ, ಕಾನೂನಿನ ಅಡಿಯಲ್ಲಿ ನಾವು ಹಾಕಿಕೊಳ್ಳುವ ನಿಬಂಧನೆಗಳ ಇತಿಮಿತಿಯಲ್ಲಿ ನಾವೂ ಕೂಡ ನಡೆದುಕೊಳ್ಳಬೇಕು ಎನ್ನುವ ವಿನಂತಿಯನ್ನು ನಾನು ಮಾಡುತ್ತೇನೆ. ಈಗ ತಕ್ಷಣ ಸಂಬಂಧಪಟ್ಟ ಡಿ.ಸಿ.ಪಿ. ಯವರನ್ನು ಸಂಪರ್ಕಿಸಿ, ಯಾರು ಇದನ್ನು ಮಾಡಿದ್ದಾರೆ, ಅಲ್ಲಿ ಯಾರು ಇದ್ದರು, ಏಕೆ ಈ ರೀತಿಯಾಗಿ ನಡೆಯಿತು ಎಂದು ಎನ್‌ಕ್ವೈರಿ ಮಾಡಿಸಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಜರುಗಿಸುತ್ತೇವೆ.

## 6. ವಿತ್ತೀಯ ಕಾರ್ಯಕಲಾಪಗಳು

ಆಯವ್ಯಯ ಅಂದಾಜುಗಳು, 2004–05 (ಸಾಮಾನ್ಯ ಚರ್ಚೆ)

**ಅಧ್ಯಕ್ಷರು** :- ಈಗ 2004–05ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ ಮೊದಲಿಗೆ, ಮಾನ್ಯ ಜಗದೀಶ್ ಶೆಟ್ಟರ್‌ರವರು

**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಂಡನೆ ಮಾಡಿರುವ ಈ ಸಾಲಿನ ಬಜೆಟ್ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ಮೊಟ್ಟಮೊದಲು ತಮಗೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡುವುದಕ್ಕೆ ಮುಂಚೆ ಕೆಲವು ತಿಂಗಳುಗಳ ಹಿಂದೆ ಹೇಳಿದ್ದರು, ಮುಂದಿನ ಸಲ ಮಂಡಿಸುವ ಬಜೆಟ್ ಚುನಾವಣಾ ಬಜೆಟ್ ಎಂದು ಹೇಳಿದ್ದರು. ಆಗ ನಮ್ಮಲ್ಲಿ ಎಷ್ಟೋ ಪ್ರಶ್ನೆಗಳು ಎದ್ದಿದ್ದವು. ಚುನಾವಣಾ ಬಜೆಟ್ ಎಂದರೆ ಏನಾದರೂ ವಿಶೇಷವಾದ ಬಜೆಟ್ ಇರುತ್ತದೇನೋ ಎಂದು ಎಲ್ಲಾ ಕಡೆ ಚರ್ಚೆಯಾಗಿತ್ತು. ಮೊನ್ನೆ ಅವರು ಮಂಡನೆ ಮಾಡಿದಂಥ ಬಜೆಟ್‌ನ್ನು ನೋಡಿದಾಗ, ಹೌದು, ಅವರು ಕೆಲವು ತಿಂಗಳುಗಳ ಹಿಂದೆ, 'ನಾನು ಈ ಸಲ ಚುನಾವಣಾ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಬಜೆಟ್ಟನ್ನು ಮಂಡನೆ ಮಾಡುತ್ತೇನೆ ಎಂದು ಹೇಳಿದುದು ನಿಜ ಎಂದು ಕಾಣಿಸುತ್ತಿದೆ. ಒಂದು ಕಡೆ ಚುನಾವಣಾ ಬಜೆಟ್. ಅದರಲ್ಲಿ ಘೋಷಣೆಗಳ ಭರಾಟೆ, ಜನರನ್ನು ಆಕರ್ಷಣೆ ಮಾಡುವಂಥ ಹಲವಾರು ಹೊಸಹೊಸ ಯೋಜನೆಗಳು, ಹಿಂದೆ ಮಾಡಿದಂಥ ಹೊಸಹೊಸ ಯೋಜನೆಗಳು ಏನಾದವು? ಈ ರೀತಿಯಾದಂಥ ಘೋಷನೆಗಳು ಒಂದು ಕಡೆಯಾದರೆ, ಈ ಕಡೆ, ಚುನಾವಣೆಗೆ ಹೋಗುತ್ತಾರೋ, ಇಲ್ಲವೋ ಎನ್ನುವುದು ಈವರೆಗೆ ಇನ್ನೂ ನಿಗೂಢವಾಗಿದೆ. ಮುಖ್ಯಮಂತ್ರಿಗಳು ಏಕೆ ಈ ರೀತಿ ನಿಗೂಢವಾಗಿಡುತ್ತಿದ್ದಾರೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಈಗ ಅವರು ಇಲ್ಲಿ ಇಲ್ಲ. ದೆಹಲಿಗೆ ಹೋಗಿದ್ದಾರೆ. ಇವತ್ತು ಇಲ್ಲಿ ಬಜೆಟ್ ಮೇಲೆ ಚರ್ಚೆ ಪ್ರಾರಂಭವಾಗಿದೆ. ಪ್ರತಿಪಕ್ಷದ ನಾಯಕನಾಗಿ ನಾನು ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿದೆ. ಆದರೆ ಮುಖ್ಯಮಂತ್ರಿಗಳೇ ಇಲ್ಲಿ ಇಲ್ಲ. ನಿಜವಾಗಿ ಹೇಳಬೇಕೆಂದರೆ, ಪ್ರತಿಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇಲ್ಲಿ ಇರಬೇಕು. ದೆಹಲಿಗೆ ಹೋಗುವಂತಹ ಅಂಥ ತುರ್ತು ಏನಿತ್ತು?

**ಅಧ್ಯಕ್ಷರು** :- ಅವರು ನನಗೆ ಪತ್ರ ಕೊಟ್ಟು ಹೋಗಿದ್ದಾರೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :- ಮುಖ್ಯಮಂತ್ರಿಗಳೇ ಉತ್ತರ ಕೊಡುತ್ತಾರೆ. ಅವರು ಕಾರಣಾಂತರದಿಂದ ದೆಹಲಿಗೆ ಹೋಗಿದ್ದಾರೆ. ಎಲೆಕ್ಷನ್ ಕಮೀಷನ್ನಿನ ಆಯುಕ್ತರು ನಿನ್ನೆ ಹೊಸದಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅವರನ್ನು ಭೇಟಿ ಮಾಡಿ, ಅವರ ಜೊತೆ ಮಾತುಕತೆಯಾಡಿಕೊಂಡು ಬರುತ್ತಾರೆ. ಬಂದು ನಿಮಗೆ ಉತ್ತರ ಕೊಡುತ್ತಾರೆ. ನೀವು ಏನೇನು ಅಪೇಕ್ಷೆ ಪಡುತ್ತೀರೋ, ನಿಮ್ಮ ಅಪೇಕ್ಷೆಗಳ ಪ್ರಕಾರ ನಿಮಗೆ ಉತ್ತರ ಸಿಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್** :- ಅವರು ಉತ್ತರ ಕೊಡಲಿ. ಅವರು ಇಲ್ಲಿಯವರೆಗೆ ಯಾವ ರೀತಿ ಉತ್ತರ ಕೊಟ್ಟಿದ್ದಾರೆ ಎಂಬುದನ್ನು ನಾವು ನೋಡಿದ್ದೇವೆ.

**ಶ್ರೀ ಆರಗ ಜ್ಞಾನೇಂದ್ರ** :- ಇದುವರೆಗೆ ಅವರು ನಮ್ಮ ಅಪೇಕ್ಷೆಯ ಪ್ರಕಾರ ಉತ್ತರ ಕೊಟ್ಟಿಲ್ಲ. ಇದು ಕೊನೆಯ ಅಧಿವೇಶನ ಎಂದು ಆ ರೀತಿ ಕೊಡಬಹುದೇನೋ?

**ಶ್ರೀ ಜಗದೀಶ್ ಶೆಟ್ಟರ್** :- ಮುಖ್ಯಮಂತ್ರಿಗಳು ನಂತರ ಉತ್ತರ ಕೊಡಲಿ. ಅವರು ಉತ್ತರ ಕೊಡಲೇಬೇಕು. ಕೊಟ್ಟೇಕೊಡುತ್ತಾರೆ. ಆದರೆ ಪ್ರತಿಪಕ್ಷದ ನಾಯಕರು ಬಜೆಟ್ ಮೇಲೆ ಡಿಬೇಟ್ ಮಾಡುವಂಥ ಸಂದರ್ಭದಲ್ಲಿ, ಸಂಬಂಧಪಟ್ಟ ಖಾತೆಯ ಸಚಿವರೂ ಆದ ಮುಖ್ಯಮಂತ್ರಿಗಳು, ಬಜೆಟನ್ನು ಮಂಡನೆ ಮಾಡಿದಂಥ ಮುಖ್ಯಮಂತ್ರಿಗಳೇ ಇವತ್ತು ಅದರ ಮೇಲೆ ಡಿಬೇಟ್ ನಡೆಯುವಂಥ ಸಂದರ್ಭದಲ್ಲಿ ಹಾಜರಿರುವುದಿಲ್ಲ ಎಂದರೆ ಅವರಿಗೆ ಅಂಥ ತುರ್ತು ಕರೆ ಏನು ಬಂದಿತ್ತು ದೆಹಲಿಯಿಂದ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಒಂದಷ್ಟು ಯೋಜನೆಗಳನ್ನು ಕೇಂದ್ರದಿಂದ ಮಂಜೂರು ಮಾಡಿಸಿಕೊಂಡು ಬರಲು ಹೋಗಿದ್ದಾರೆ. ಅಥವಾ ಯಾರೋ ಡಿಗ್ನಿಟರೀಸ್ ಬಂದಿದ್ದಾರೆ, ಅರ್ಜೆಂಟಾಗಿ ಅವರ ಜೊತೆ ಮಾತನಾಡಬೇಕು ಎಂದು ಹೋಗಿದ್ದಾರೋ ಅಥವಾ ಯಾವ ಕೆಲಸದ ಸಲುವಾಗಿ ಹೋದರು ಎಂಬುದು ಗೊತ್ತಿಲ್ಲ. ಮಹತ್ವವಾದ ಇಲ್ಲಿನ ಡಿಬೇಟನ್ನು ಬಿಟ್ಟು, ಯಾವ ಮಹತ್ವದ ಕೆಲಸಕ್ಕೆ ಮುಖ್ಯಮಂತ್ರಿಗಳು ಹೋದರು ಎನ್ನುವ ಬಗ್ಗೆ ಮಾನ್ಯ ಖರ್ಗೆಯವರು ಹೇಳಬೇಕಾಗುತ್ತದೆ. ಆದರೆ ಅಂಥ ಮಹತ್ವದ ಕೆಲಸಗಳ್ಯಾವುದೂ ಇಲ್ಲ. ಯಾವುದೂ ಇಲ್ಲದೇ, ವಿನಾಕಾರಣವಾಗಿ ದೆಹಲಿಗೆ ಹೋಗುತ್ತಾರೆ ಎಂದರೆ, ಪ್ರಾಮುಖ್ಯವಾದ

ಡಿಬೇಟ್‌ನಲ್ಲಿ ಅವರು ಪರ್ಟಿಸಿಪೇಟ್ ಮಾಡುವುದಿಲ್ಲ ಎಂದರೆ ನಾವು ಮಾತನಾಡಿ ಏನು ಅರ್ಥ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಬೇಕಾದರೆ ಸದನವನ್ನು ಮುಂದಕ್ಕೆ ಹಾಕಿಬಿಡಿ. ಇನ್ನೊಂದು ದಿವಸ ತೆಗೆದುಕೊಳ್ಳೋಣ. ಮುಖ್ಯಮಂತ್ರಿಗಳು ನಾಳೆ ಬರಲಿ, ನಾಳೆ ತೆಗೆದುಕೊಳ್ಳೋಣ.

**ಶ್ರೀ ಎಸ್.ಎಸ್. ಪಾಟೀಲ್** :– ಯಾವುದೇ ಕೆಲಸವಿಲ್ಲ ಎನ್ನುವುದು ನಿಮಗೆ ಹೇಗೆ ಗೊತ್ತಾಯಿತು? ನಾನು ವಿಷಯ ಎನ್ನುವುದು ನಿಮಗೆ ಗೊತ್ತಿದೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಯಾವಾಗಲೂ ಕೂಡ ಒಬ್ಬರು ಹೊಸದಾಗಿ ಎಲೆಕ್ಷನ್ ಕಮೀಷನ್ ಅಧ್ಯಕ್ಷರಾದ ಮೇಲೆ ಸಾಮಾನ್ಯವಾಗಿ ಎಲ್ಲಾ ಪೊಲಿಟಿಕಲ್ ಪಾರ್ಟಿಗಳ ಮುಖಂಡರು, ಮುಖ್ಯಮಂತ್ರಿಗಳು ಹೋಗಿ ಅವರನ್ನು ಭೇಟಿ ಮಾಡತಕ್ಕಂಥಾದ್ದು ಒಂದು ಕರ್ಟಿಸಿ. ಅದು ಮಹತ್ವವಿಲ್ಲ ಎಂದರೆ ಆ ಮಾತು ಬೇರೆ. ಅದಕ್ಕೆ ಏನು ಮಹತ್ವವಿದೆ, ಏನಿಲ್ಲ ಎನ್ನುವುದಕ್ಕೆ ಅವರು ಬಂದ ಮೇಲೆ ಕ್ಲಾರಿಫಿಕೇಷನ್ ಕೊಡುತ್ತಾರೆ. ಈಗ, ವಿಶೇಷವಾಗಿ ಬಜೆಟ್ ಮೇಲೆ ತಮ್ಮ ಅನಿಸಿಕೆ ಏನಿದೆ, ಇಷ್ಟೊಂದು ಉತ್ತಮವಾದಂಥ ಬಜೆಟ್‌ನ್ನು ನಾವು ಕೊಟ್ಟಿದ್ದೇವೆ. ಅವರೇ ಹೇಳಿದ ಹಾಗೆ ಜನರಿಗೆ ಆಕರ್ಷಣೆ ಮಾಡತಕ್ಕಂಥ ಬಜೆಟ್ ಬರೀ ಆಕರ್ಷಣೆಯಲ್ಲ. ಜನರಿಗೆ ಉಪಯೋಗವಾಗತಕ್ಕಂಥ ಬಜೆಟ್, ಜನ ಒಪ್ಪಿಕೊಂಡಿರತಕ್ಕಂಥಾದ್ದು, ಇಡೀ ಕರ್ನಾಟಕದ ಜನತೆ ಆ ಬಜೆಟನ್ನು ಬಹಳ ಹೆಮ್ಮೆಯಿಂದ ಹೊಗಳಿದ್ದಾರೆ. ಅಂಥ ಒಂದು ಒಳ್ಳೆಯ ಬಜೆಟನ್ನು ನಾವು ಕೊಟ್ಟಿದ್ದೇವೆ. ತಾವೂ ಅದರ ಬಗ್ಗೆ ಒಂದು ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿ.

**ಶ್ರೀ ಎಸ್.ಎಸ್. ಪಾಟೀಲ್** :– ಒಳ್ಳೆಯ ಬಜೆಟ್ ಎಂದು ನೀವೇ ಹೇಳಬೇಡಿ. ಪತ್ರಿಕೆಗಳ ಎಡಿಟೋರಿಯಲ್‌ನಲ್ಲಿ ಬರೆದಿದ್ದಾರೆ. ನೀವು ಅವಷ್ಟನ್ನೂ ಓದಿ. ಅವುಗಳನ್ನು ಓದಿ ಹಾಗೆ ಕಾಣುತ್ತಿಲ್ಲ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ನಮ್ಮ ಪರವಾಗಿ ಬರೆದಿದ್ದರೆ, ಅದನ್ನು ನೀವು ಓದಿಕೊಳ್ಳಿ.

**ಶ್ರೀ ಎಸ್.ಎಸ್. ಪಾಟೀಲ್** :– ಮುಖ್ಯಮಂತ್ರಿಗಳು ಏಕೆ ದೆಹಲಿಗೆ ಹೋಗಿದ್ದಾರೆ ಎಂದು ಮಾನ್ಯ ಗೃಹ ಸಚಿವರು ಸೂಚ್ಯವಾಗಿ ಹೇಳಿದರು. ತಾವು, ಮುಖ್ಯಮಂತ್ರಿಗಳು ತಮಗೆ ಪತ್ರ ಬರೆದು ಹೋಗಿದ್ದಾರೆ ಎಂದು ಹೇಳಿದಿರಿ. ಅದರಲ್ಲಿ ಈ ವಿಷಯವನ್ನು ಬರೆದಿರಬೇಕಲ್ಲವೇ? ಈ ವಿಷಯಕ್ಕೇ ನಾನು ಹೋಗಿದ್ದೇನೆ ಎಂದು ಬರೆದಿದ್ದಾರೆ ಎನ್ನುವುದನ್ನು ಅಧ್ಯಕ್ಷರೇ ಹೇಳಬೇಕು. ತಾವು, ತಮ್ಮ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದಿರಿ.

**ಅಧ್ಯಕ್ಷರು** :– ಹೌದು, ನನಗೆ ಲೆಟರ್ ಬಂದಿದೆ.

**ಶ್ರೀ ಎಸ್.ಎಸ್. ಪಾಟೀಲ್** :– ಆ ಲೆಟರ್‌ನಲ್ಲಿ ಏನು ಬರೆದಿದ್ದಾರೆ? ಇವರು ಹೇಳಿದುದ್ದನ್ನು ಬರೆದಿದ್ದಾರೆಯೇ? ಕರ್ಟಿಸಿಗಾಗಿ ಚುನಾವಣಾ ಕಮೀಷನರ್‌ರವರನ್ನು ಭೇಟಿಯಾಗಲು ಹೋಗುತ್ತಿದ್ದೇನೆ ಎಂದು ಬರೆದಿದ್ದಾರೆಯೇ?

**ಅಧ್ಯಕ್ಷರು** :– ದೆಹಲಿಯಲ್ಲಿ ಕೆಲಸ ಇದೆ ಎಂದು ಬರೆದಿದ್ದಾರೆ. ಏನೇನು ಕೆಲಸವಿದೆ ಎಂದು ಹೇಳಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** :– ಅವರು ಏಕೆ ಹೋಗಿದ್ದಾರೆ ಎನ್ನುವುದು ಶೆಟ್ಟರಿಗೆ ಗೊತ್ತಿದೆ.

**ಅಧ್ಯಕ್ಷರು** :– ಆಯಿತು, ಶೆಟ್ಟರ್‌ರವರೇ ನೀವು ಮುಂದುವರೆಸಿ.

ಶ್ರೀ ಜಗದೀಶ್ ಶೆಟ್ಟರ್ :- ಚುನಾವಣಾ ಆಯುಕ್ತರನ್ನು ಭೇಟಿಯಾಗಲು ಹೋಗಿದ್ದಾರೆ. ಅವರನ್ನು ಅಭಿನಂದನೆ ಮಾಡಲು ಹೋಗಿದ್ದಾರೆ ಎಂದು ಹೇಳಿದರು. ಇನ್ನೂ ಒಂದೆರಡು ದಿವಸದ ನಂತರ ಅಲ್ಲಿಗೆ ಹೋದರೂ ನಡೆಯುತ್ತಿತ್ತು. ಅದು ಬೇರೆ ವಿಷಯ. ಆದರೆ ಅವರು ಏಕೆ ದೆಹಲಿಗೆ ಹೋಗಿದ್ದಾರೆ ಎನ್ನುವುದು ಖರ್ಗೆಯವರಿಗೆ ಗೊತ್ತಿದೆ. ಆದರೆ ಅವರು ಅದನ್ನು ಹೇಳಲು ತಯಾರಿಲ್ಲ ಅಷ್ಟೇ.

(ಈ ಹಂತದಲ್ಲಿ ಯು.ಆರ್. ಸಭಾಪತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಒಂದು ಕಡೆ, ಲೋಕಸಭೆ ಚುನಾವಣೆ ಡಿಕ್ಲೇರ್ ಆದ ಹಾಗೆ ಆಯಿತು. ಅದಕ್ಕೆ ಚುನಾವಣಾ ಆಯೋಗದವರು ಡೇಟ್ ಫಿಕ್ಸ್ ಮಾಡಬೇಕು ಅಷ್ಟೇ. ಈ ಕಡೆ ಸೈಮಲ್ಟೇನಿಯಸ್‌ಲಿ ಅದರ ಜೊತೆಗೇ ವಿಧಾನಸಭೆಗೆ ಚುನಾವಣೆಯನ್ನು ಮಾಡುತ್ತಾರೆಯೋ, ಇಲ್ಲವೋ ಎನ್ನುವುದು ಮುಖ್ಯಮಂತ್ರಿಗಳ ಬಾಯಿಂದ ಬರುತ್ತಿಲ್ಲ. ಮಾನ್ಯ ಖರ್ಗೆಯವರು, ಲೋಕಸಭಾ ಚುನಾವಣೆಯ ಜೊತೆಗೇ ನಾವು ವಿಧಾನಸಭೆಯ ಚುನಾವಣೆಯನ್ನೂ ಮಾಡುತ್ತೇವೆ, ಅದು ಅನಿವಾರ್ಯ ಎಂದು ಸ್ಪಷ್ಟವಾಗಿ ಹೇಳಿದರು. ನಿಮ್ಮ ರಾಜ್ಯಾಧ್ಯಕ್ಷರೂ ಪದೇ ಪದೇ ಅದನ್ನೇ ಹೇಳುತ್ತಾರೆ. ಅವರು, 9ನೇ ತಾರೀಖು ವಿಧಾನಸಭೆ ವಿಸರ್ಜನೆಯಾಗುತ್ತದೆ ಎಂದು ಹೇಳಿದರು. ಅದನ್ನು ಮುಂದಕ್ಕೆ ಹಾಕಿದರು. ನಂತರ 12ನೇ ತಾರೀಖು ವಿಸರ್ಜನೆ ಎಂದು ಹೇಳಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳನ್ನು ಕೇಳಿದರೆ, ಅವರು ಅದನ್ನು ನಿಗೂಢವಾಗಿಟ್ಟಿದ್ದಾರೆ. ಅದನ್ನು ನಾವು ನೋಡುತ್ತೇವೆ. ವಿಚಾರ ಮಾಡುತ್ತೇವೆ ಎಂದು ಮುಗುಂ ಆಗಿ ಹೇಳುತ್ತಾರೆ. ಏಕೆ ಅದನ್ನು ಇಷ್ಟೊಂದು ನಿಗೂಢವಾಗಿಟ್ಟಿದ್ದಾರೆ ಅದರಲ್ಲಿ ನಿಗೂಢವಾಗಿಡುವಂಥಾದ್ದು ಏನಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕೇ ಅವರು ದೆಹಲಿಗೆ ಹೋಗಿದ್ದರೆ, ಇರಲಿ, ಅದನ್ನು ಹೇಳಿ. ನಿಮ್ಮ ಪಕ್ಷದ ನಾಯಕಿಯನ್ನು, ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನು ಭೇಟಿಯಾಗಲು, ಅದರ ಬಗ್ಗೆ ಚರ್ಚೆ ಮಾಡಲು ಹೋಗಿದ್ದಾರೆ ಎಂದು ಹೇಳಲಿ. ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಆದರೆ ತಾವು ಒಂದು ಕಡೆ, ವಿಧಾನಸಭೆಯ ಚುನಾವಣೆಯಾಗುತ್ತದೆ ಎನ್ನುವ ವಾತಾವರಣವನ್ನು ಸೃಷ್ಟಿ ಮಾಡುತ್ತಿದ್ದೀರಿ. ಏಕೆಂದರೆ, ಈಗಾಗಲೇ ಸರ್ಕಾರೀ ಕಟ್ಟಡಗಳ ಉದ್ಘಾಟನೆಗಳು ನಡೆಯುತ್ತಿವೆ. ಕಳೆದ 5ನೇ ತಾರೀಖು 12.00 ಗಂಟೆಗೆ ಇಲ್ಲಿ ಬಜೆಟನ್ನು ಮಾಡಬೇಕಿತ್ತು. ಅಂದು, ಅಪೂರ್ಣವಾದಂಥ 'ವಿಕಾಸಸೌಧ'ದ ಉದ್ಘಾಟನೆ ಮಾಡಿದರು. ಮಾನ್ಯ ಧರ್ಮಸಿಂಗ್‌ರವರು ನಮ್ಮನ್ನು ಕರೆದಿದ್ದರು. ಮಾನ್ಯ ಧರ್ಮಸಿಂಗ್‌ರವರು ಮತ್ತು ಸರ್ಕಾರದಿಂದ ಪ್ರತಿಪಕ್ಷದ ನಾಯಕರನ್ನು ಕರೆದ ಮೇಲೆ ನಾವು ಒಂದು ಸೌಜನ್ಯದಿಂದ ಹೋಗಿದ್ದೆವು. ಅಪೂರ್ಣವಾದ ಕಟ್ಟಡ ಎಂದು ನಮಗೂ ಗೊತ್ತಿದೆ. ಆದರೆ ಒಂದು ಸೌಜನ್ಯ ಇರುತ್ತದೆಯಲ್ಲಾ ಅದಕ್ಕೆ ಧಕ್ಕೆ ಆಗಬಾರದೆಂದು ನಾವು ಹೋಗಿ ಆ ಕಾರ್ಯಕ್ರಮದಲ್ಲಿ ಪಾರ್ಟಿಸಿಪೇಟ್ ಮಾಡಿದ್ದೆವು. ಅಪೂರ್ಣವಾದ ಕಟ್ಟಡವನ್ನು ಉದ್ಘಾಟನೆ ಮಾಡಿದಿರಿ. ವಿಧಾನಸಭೆಯ ವಿಸರ್ಜನೆ ಮಾಡತಕ್ಕಂಥದ್ದು ಅವಶ್ಯಕತೆಯಿಲ್ಲ ಎಂದು ಮುಖ್ಯಮಂತ್ರಿಗಳಿಗೆ ಅನಿಸಿದರೆ, ಇನ್ನೂ ಸರ್ಕಾರದ ಅವಧಿ 7-8 ತಿಂಗಳು ಇದೆ. ವಿಕಾಸಸೌಧ ಆಗಸ್ಟ್ ತಿಂಗಳಿಗೆ ಪೂರ್ಣ ಆಗುತ್ತಿತ್ತು. ಆವಾಗ ಅದರ ಉದ್ಘಾಟನೆಯನ್ನು ಮಾಡಬಹುದಾಗಿತ್ತು. ಆದರೆ ಅರಾತುರಿಯಿಂದ 5ನೇ ತಾರೀಖು ಉದ್ಘಾಟನೆ ಆಗಲಿ. ಏಕೆಂದರೆ ಎಲೆಕ್ಷನ್ ಬರುತ್ತದೆ, ಎಲೆಕ್ಷನ್ ಒಳಗೆ ಆ ಕಟ್ಟಡಕ್ಕೆ ಒಂದು ಕಲ್ಲು ಬೀಳಲಿ ಅನ್ನುವಂಥ ಉದ್ದೇಶದಿಂದ ಮಾಡಿದ್ದೀರಿ. ಅದೂ ಆಗಲಿ. ಏಕೆಂದರೆ ನೀವು ಕಟ್ಟಿಸಿದಿರಿ ಉದ್ಘಾಟನೆ ಮಾಡಿರಿ ಬೇಡ ಎಂದು ಹೇಳುವುದಿಲ್ಲ. ಆದರೆ

ಜನರಲ್ಲಿ ಈ ಒಂದು confusion ಅನ್ನು ಏಕೆ create ಮಾಡುತ್ತಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮೂರು ಸ್ಟೇಟ್‌ಮೆಂಟ್‌ಗಳು ಬರುತ್ತಿವೆ. ಶ್ರೀ ಖರ್ಗೆಯವರ ಸ್ಟೇಟ್‌ಮೆಂಟ್ ಅನಿವಾರ್ಯ. ಆ ಮೇಲೆ ಮಾನ್ಯ ಜನಾರ್ಧನ ಪೂಜಾರಿಯವರ ಸ್ಟೇಟ್‌ಮೆಂಟ್‌ನಲ್ಲಿ 12ನೇ ತಾರೀಖು ವಿಧಾನಸಭೆ ವಿಸರ್ಜನೆ ಮಾಡುತ್ತೇವೆಂದು ಹೇಳುತ್ತಾರೆ. ಹಾಗೆಯೇ ಮುಖ್ಯಮಂತ್ರಿಗಳಿಂದ 'No' ಎಂದು ಬರುತ್ತಿದೆ. ಅಂದರೆ ಈ ರೀತಿ ಏಕೆ ಗೊಂದಲದ ವಾತಾವರಣವನ್ನು ನಿರ್ಮಾಣ ಮಾಡಿಟ್ಟಿದ್ದೀರಿ? ಅನ್ನುವಂಥದ್ದನ್ನು ಕೇಳುತ್ತಿದ್ದೇನೆ. ಏಕೆಂದರೆ ಇವತ್ತು ಶಾಸಕರು ಬಹಳ ಜನ ಅಧಿವೇಶನಕ್ಕೆ ಬಂದಿಲ್ಲ. ಅವರಿಗೆಲ್ಲಾ ಈಗಾಗಲೇ ಗೊತ್ತಾಗಿಬಿಟ್ಟಿದೆ. ಚುನಾವಣೆ ಬರುತ್ತಿದೆ, ನಮ್ಮ ಕ್ಷೇತ್ರಗಳಿಗೆ ಹೋಗೋಣ. ಯಾವ ಉಳಿದ ಕೆಲಸಗಳು ಇವೆ ಕಾಮಗಾರಿ ಪೂಜೆ ಮಾಡುವುದು ಇವೆಲ್ಲಾ ಸ್ಟಾರ್ಟ್ ಆಗಲಿ ಎಂದು ಹೋಗಿಬಿಟ್ಟಿದ್ದಾರೆ. ಆದರೆ ಈ ಸರ್ಕಾರದ ಕಡೆಯಿಂದ ಯಾವುದೇ ಕ್ಲಾರಿಟಿ ಇಲ್ಲ. ಲೋಕಸಭೆಯಲ್ಲಿ ಏನು ಮಾಡಿದ್ದಾರೆ ಎನ್ನುವುದನ್ನು ಬೇಕಾದರೆ ತಾವೆಲ್ಲಾ ನೋಡಿ. 29ನೇ ತಾರೀಖು ಲೋಕಸಭೆಯಲ್ಲಿ ಅಧಿವೇಶನಕ್ಕೆ ಕರೆದು. ಅದಕ್ಕೆ ಮುಂಚೆ ಕ್ಯಾಬಿನೆಟ್ decision ತೆಗೆದುಕೊಂಡು ನಾವು 6ನೇ ತಾರೀಖು ರಾಷ್ಟ್ರಪತಿಯವರನ್ನು ಭೇಟಿ ಮಾಡಿ ವಿಸರ್ಜನೆ ಮಾಡುತ್ತೇವೆಂದು clearcut ಆಗಿ ಹೇಳಿದರು. ಆ ರೀತಿ ಈ ರಾಜ್ಯಸರ್ಕಾರದಲ್ಲಿ ಸ್ಪಷ್ಟವಾದ ಕ್ಲಿಯರ್‌ಕಟ್ ನೀತಿ ಏಕೆ ಇಲ್ಲ ಎಂದು ಕೇಳುತ್ತಿದ್ದೇನೆ. ಈ ರೀತಿ ಏಕೆ ಗೊಂದಲ ಎಂದು ಕೇಳುತ್ತಿದ್ದೇನೆ. ಬಹುಶಃ ನಿಮ್ಮ ಕಾಂಗ್ರೆಸ್‌ನಲ್ಲಿ ಇದೇ ರೀತಿ ಪ್ರತೀ ಸಲವೂ ಗೊಂದಲವಾಗುತ್ತಿದೆ. ಈ ಗೊಂದಲ ಇರಬಾರದು. ಅದಕ್ಕೊಂದು ನಿರ್ಣಯ ಕೈಗೊಳ್ಳಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :- ನಮ್ಮಲ್ಲಿ ಏನೂ ಅಂಥ ಗೊಂದಲ ಇಲ್ಲ. ನಾವು ಯಾವಾಗಲೂ ಹೇಳುವುದನ್ನು ಸ್ಪಷ್ಟವಾಗಿಯೇ ಹೇಳುತ್ತೇವೆ. ನಿಮ್ಮಲ್ಲಿ ಕೂಡ ಹೇಗೆ ಬಂತು? ಹೇಗೆ ಬಂತು ಎಂದರೆ ನಿಮ್ಮಲ್ಲಿ ಕೂಡ ಪ್ರಮೋದ್ ಮಹಾಜನ್‌ರವರ ಬಾಯಿಂದ ಬಂದ ಮೇಲೆ ಸನ್ಮಾನ್ಯ ವಾಜಪೇಯಿರವರು ಆಮೇಲೆ ಹೇಳಿದರೇ ಹೊರತಾಗಿ ಮೊದಲೇ ಪ್ರಮೋದ್‌ಮಹಾಜನ್ ರವರ ಮುಖಾಂತರ ಈ ಸುದ್ಧಿಯನ್ನು ಹೊರಕ್ಕೆ ಬಿಟ್ಟರು. ಹಾಗಾಗಿ ಪಕ್ಷದ ದೃಷ್ಟಿಯಿಂದ ಜನಾರ್ಧನ ಪೂಜಾರಿಯವರು ಹೇಳುತ್ತಾರೆ. ಸರ್ಕಾರದ ವಿಸರ್ಜನೆ ಯಾವಾಗ ಎನ್ನುವುದನ್ನು ಮುಖ್ಯಮಂತ್ರಿಗಳು ಹೇಳುತ್ತಾರೆ. ಅದಕ್ಕಾಗಿ ಇಲ್ಲಿ ಗೊಂದಲ ಏನಿದೆ? ಕೊನೆಗೆ ನಾವು ನೀವು ಎಷ್ಟೇ ಡೇಟ್ ಫಿಕ್ಸ್ ಮಾಡಿದರೂ ಎಲೆಕ್ಷನ್ ಯಾವಾಗ ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳಲು ಎಲೆಕ್ಷನ್ ಕಮಿಷನ್‌ರವರು ಇರುತ್ತಾರೆ. ಅದಕ್ಕಾಗಿ ಎಲೆಕ್ಷನ್ ಕಮೀಷನ್‌ರವರು ಏನು ಮಾಡುತ್ತಾರೆ ಎನ್ನುವುದನ್ನು ನಾವು ನೀವು ಕಾದು ನೋಡೋಣ. ಅದು ನಿರ್ಣಯ ತೆಗೆದುಕೊಳ್ಳುವವರು ಅವರು. ಅಂತಿಮ ನಿರ್ಣಯ ಎಲೆಕ್ಷನ್ ಕಮಿಷನ್ ಮುಂದೆ ಇರುತ್ತದೆ. ಇಬ್ಬರು ರೆಡಿ ಆಗೋಣ. ಯಾರು ಅಧಿಕಾರಕ್ಕೆ ಬರಬೇಕೆಂದು ಜನ ತೀರ್ಮಾನ ಕೊಡುತ್ತಾರೋ ಅದನ್ನು ರಿಸಲ್ಟ್ ಬಂದ ಮೇಲೆ ನೋಡೋಣ. ವಿಕಾಸಸೌಧ ಉದ್ಘಾಟನೆಯಲ್ಲಿ ನಿಮ್ಮದು, ಧರ್ಮಸಿಂಗ್‌ರವರದ್ದು, ಶೆಟ್ಟರದ್ದು ಎಲ್ಲರ ಹೆಸರು ಇದೆ. ನಮ್ಮದು ಅಲ್ಲಿ ಹೆಸರು ಇದೆಯಾ? ಅದಕ್ಕೆ ನಿಮ್ಮೆಲ್ಲರ ಹೆಸರು ಇರಬೇಕೆಂದು ಆ ಉದ್ಘಾಟನೆಯನ್ನು ಮಾಡಿಸಿದ್ದು. ಈ ಫೋರ್ ವೇ ಲೈನ್ ಅನ್ನು 35 ಕಿಲೋಮೀಟರ್‌ನಷ್ಟು ಮಾತ್ರ ಮಾಡಿದ್ದಾರೆ. ನಿಜವಾಗಿ ನೋಡಿದರೆ ಬೆಂಗಳೂರಿನಿಂದ ಬೆಳಗಾಂ ವರೆಗೆ ಪೂರ್ಣ ಆದಮೇಲೆ ಉದ್ಘಾಟನೆ

ಮಾಡಬೇಕಾಗಿತ್ತು. ಆದರೆ ಅಲ್ಲಿ ಮಾಡಿದೆಷ್ಟು? ಧರ್ಮಸಿಂಗ್ ಸಾಹೇಬರು ಮತ್ತು ಖಂಡೋರಿಯವರು ಸೇರಿ 35 ಕಿಲೋಮೀಟರ್ ಉದ್ದದ ರಸ್ತೆಯನ್ನು ನಿನ್ನೆ ಉದ್ಘಾಟನೆ ಮಾಡಿ ಇವತ್ತು ಬಂದಿದ್ದಾರೆ. So, ಉದ್ಘಾಟನೆಗಳು ಹೀಗೆ ನಡೆಯುತ್ತಿರುತ್ತವೆ.

ಛೇರ್ಮನ್ :– ಮಾನ್ಯ ಶೆಟ್ಟರೆ, ವಿಧಾನಸಭೆ ವಿಸರ್ಜನೆ ಮಾಡಬೇಕೇ ಅಥವಾ ಬೇಡವೇ ಎನ್ನುವುದರ ಬಗ್ಗೆ ವಿರೋಧಪಕ್ಷದ ನಾಯಕರಾಗಿ ತಮ್ಮ ನಿರ್ದಿಷ್ಟವಾದ ಅಭಿಪ್ರಾಯವೇನು?

ಶ್ರೀ ಜಗದೀಶ್ ಶೆಟ್ಟರ್ :– ನಮ್ಮ ಪಕ್ಷದ ನಿಲುವು ಈಗಾಗಲೇ ಸ್ಪಷ್ಟವಾಗಿದೆ. ಲೋಕಸಭೆ ವಿಸರ್ಜನೆಯಾಗಿದೆ. ಚುನಾವಣೆಗೆ ನಾವು ಜನರ ಮುಂದೆ ಹೋಗಲಿಕ್ಕೆ ತಯಾರಾಗಿದ್ದೇವೆ. ಅದರ ಜೊತೆಗೆ ವಿಧಾನಸಭೆಯನ್ನೂ ಸಹ ವಿಸರ್ಜನೆ ಮಾಡಿ. ವಿಧಾನಸಭೆಯ ಚುನಾವಣೆಯನ್ನೂ ಸಹ ಎದುರಿಸಲಿಕ್ಕೆ ಭಾರತೀಯ ಜನತಾ ಪಾರ್ಟಿ ರೆಡಿ ಇದೆ. ಜನರು ತೀರ್ಮಾನ ಕೊಡಲಿಕ್ಕೂ ರೆಡಿಯಾಗಿದ್ದಾರೆ. ಎರಡೂ ಕಡೆ ಬಿಜೆಪಿ ಪರವಾಗಿ ತೀರ್ಪು ಕೊಡಲಿಕ್ಕೆ ತಯಾರಾಗಿದ್ದಾರೆ. ಅದಕ್ಕಾಗಿ ಆದಷ್ಟು ಬೇಗ ಚುನಾವಣೆ ಆಗಲಿ ಎನ್ನುವ ನಿಲುವು ನಮ್ಮ ಪಕ್ಷದ ಕಡೆಯಿಂದ ಇದೆ. ಮೊನ್ನೆಯ ದಿವಸ ಸದನದಲ್ಲಿ ಬಜೆಟ್‌ನ್ನು ಮಂಡನೆ ಮಾಡಿದರು. ಅದರಲ್ಲಿ ಅವರು ಯಾವುದೇ ಹೊಸ ತೆರಿಗೆ ಇಲ್ಲ ಎಂದು ಹೇಳಿದರು. ಆದರೆ ಬಜೆಟ್‌ಗಿಂತ ಮೊದಲಿನಲ್ಲಿಯೇ ತೆರಿಗೆ ಹಾಕಿರುವುದು ಜನ ಲಕ್ಷ್ಯದಲ್ಲಿದೆ. ಮೊನ್ನೆ ಜನವರಿ ತಿಂಗಳಿನಲ್ಲಿ ಹೊಸದಾಗಿ ತೆರಿಗೆಯನ್ನು ಹಾಕಿಬಿಟ್ಟಿದ್ದಾರೆ. ಹೊಸದಾಗಿ ತೆರಿಗೆ ಇಲ್ಲವೆಂದು ಹೇಳುವಂಥದ್ದು, ಹಾಗೆಯೇ ಹಳೆಯ ತೆರಿಗೆಗಳು ಮುಂದುವರಿಯುತ್ತಿವೆ. ಅದರಲ್ಲೇನೂ ಬಹಳಷ್ಟು differences ಆಗುವುದಿಲ್ಲ. ಇದನ್ನು ಯಾವುದೇ ಒಂದು ಸ್ಪಷ್ಟತೆ ಇಲ್ಲದಂಥ ಬಜೆಟ್ ಎಂದು ನಾನು ಹೇಳಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ಬಹಳಷ್ಟು ಜ್ವಲಂತ ಸಮಸ್ಯೆಗಳು ಇವೆ. 4 ವರ್ಷದಿಂದ ಬರಗಾಲ ತಾಂಡವವಾಡುತ್ತಿದ್ದು ಅದೇ ವಾತಾವರಣ ಈಗಲೂ ಮುಂದುವರೆದಿದೆ. ಮಳೆ ಇಲ್ಲ, ರೈತರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಏನಾದರೂ ವಿಶೇಷವಾದ ಪರಿಹಾರನ್ನು ಕೊಡುವಂಥದ್ದು ಇಲ್ಲ. ಬೆಳೆವಿಮೆ ಹಣ ಬಿಡುಗಡೆ ಆಗಿಲ್ಲ. ನೇಕಾರರ ಪ್ಯಾಕೇಜನ್ ಅನ್ನು ಅನೌನ್ಸ್ ಮಾಡಿದ್ದಿರಿ. ಆದರಿಂದ ನೇಕಾರರಿಗೆ ಯಾವುದೇ ರೀತಿಯ ಪರಿಹಾರ ಇವತ್ತಿನವರೆಗೆ ಸಿಕ್ಕಿಲ್ಲ. ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುವಂಥದ್ದು ಏನು ಬಾಕಿ ಇದೆ ಅದು ಇನ್ನೂ ಬಿಡುಗಡೆಯಾಗಿಲ್ಲ. ಆನ್‌ಲೈನ್ ಲಾಟರಿ ನಿಷೇಧ ಆಗಬೇಕಾಗಿತ್ತು. ನಿಷೇಧ ಮಾಡುತ್ತೇವೆಂದು ಹೇಳಿದ್ದಿರಿ, ಆದರೆ ಅದು ಇನ್ನೂ ನಿಷೇಧ ಆಗಿಲ್ಲ. ಕಬ್ಬು ಬೆಳೆಗಾರರಿಗೆ ಬಾಕಿ ಏನು ಕೊಡಬೇಕಾಗಿತ್ತು ಅದರ ಪೇಮೆಂಟ್ ಇನ್ನು ಆಗಿಲ್ಲ. ಸಕ್ಕರೆ ಕಾರ್ಖಾನೆಗಳು ಇವತ್ತು ಮುಚ್ಚಿಹೋಗುವಂಥ ಪರಿಸ್ಥಿತಿಗೆ ಬಂದಿವೆ. ಸಾಲ ಜಾಸ್ತಿಯಾಗುತ್ತಿದೆ. ಸಾಲ ಮರುಪಾವತಿ ಬಗ್ಗೆ ಇದರಲ್ಲಿ ವಿಚಾರ ಇಲ್ಲ. ಸ್ವಯಂಘೋಷಿತ ಆಸ್ತಿ ತೆರಿಗೆ ಬಗ್ಗೆ ಗೊಂದಲ, ರೈತರಿಗೆ ಬರಗಾಲ ಕಾಮಗಾರಿಯಲ್ಲಿ ಕೆಲಸ ಇಲ್ಲ. ಕುಡಿಯುವ ನೀರಿನ ಹಾಹಾಕಾರ ಎಲ್ಲಾ ಕಡೆಯೂ ಇದೆ. ನೀರಾವರಿ ಯೋಜನೆಗಳು ಕಂಪ್ಲೀಟ್ ಆಗುತ್ತಿಲ್ಲ. ಅದಕ್ಕಾಗಿ ಹೆಚ್ಚು ಹಣವನ್ನು ವಿನಿಯೋಗ ಮಾಡುತ್ತಿಲ್ಲ. ಹೀಗಾಗಿ ಇವತ್ತು ಪ್ರತಿಯೊಂದು ಹಂತದಲ್ಲಿ ಸರ್ಕಾರ ಏನು ವಿಫಲತೆಯನ್ನು ಹೊಂದಿದೆ, ಜನರ ಸಮಸ್ಯೆಗಳಿಗೆ ಸ್ಪಂದನ ಕೊಡುತ್ತಿಲ್ಲ. ಅಂಥ ಏನೋ ಒಂದು ಬಜೆಟ್ ಮಂಡನ ಮಾಡಿದ್ದೀರಿ. ಈ ಬಜೆಟ್‌ನಲ್ಲಿ ಯಾವುದೇ ಒಂದು ಹೊಸದಾದಂಥ ಅಂಶಗಳು ಇಲ್ಲ. ಕಳೆದ 4 ವರ್ಷಗಳಲ್ಲಿ ಕೆಲವೊಂದು ಯೋಜನೆಗಳನ್ನು ಏನು ಮಾಡಿದಿರಿ ಅದರ ಹೇಳಿಕೆಗಳು ಘೋಷಣೆಗಳು ಮಾತ್ರ ಇವತ್ತು ಬಜೆಟ್‌ನಲ್ಲಿ ಇರುವಂಥದ್ದು.

ಅಂಥ ನಿರಾಶಾದಾಯಕವಾದಂಥ ಬಜೆಟ್ ಇದಾಗಿದೆ. ಯಾವುದೇ ಹೊಸದಾದಂಥ ವಿಚಾರಗಳು, ಹೊಸದಾದಂಥ ಗುರಿ, ಮತ್ತು ಕರ್ನಾಟಕದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಎಲ್ಲಾ ವರ್ಗಗಳ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಮಾಡದೆ, ಯಾವುದೇ ಒಂದು ಗೊತ್ತುಗುರಿಯಿಲ್ಲದಂಥ ಬಜೆಟ್ ಮಂಡನೆ ಆಗಿದೆ ಎಂದು ಬಹಳ ಖೇದದಿಂದ ನಾನು ಹೇಳಬೇಕಾಗುತ್ತದೆ. ಹಾಗೆಯೇ ಚುನಾವಣಾ ಸಂದರ್ಭದಲ್ಲಿ ಜನರನ್ನು ಆಕರ್ಷಣೆ ಮಾಡಲಿಕ್ಕೆ ಮತದಾರರನ್ನು ಆಕರ್ಷಣೆ ಮಾಡಲಿಕ್ಕೆ ಯಾವ ರೀತಿ ಹೊರಟಿದ್ದೀರೋ, ಆದರೆ ಅದರಲ್ಲಿ ನೀವು ವಿಫಲತೆಯನ್ನು ಕಾಣುತ್ತೀರಿ. ಏಕೆಂದರೆ ಚುನಾವಣೆಗೆ ಸಮಯ ಇರುವುದು ಇನ್ನು ಕೇವಲ ಎರಡು ತಿಂಗಳು. ನೀವು ಘೋಷಣೆ ಮಾಡಿದಂಥ ಯೋಜನೆಗಳು ಇಂಪ್ಲಿಮೆಂಟ್ ಆಗಬೇಕಾದರೆ ಒಂದು ವರ್ಷ ಬೇಕೋ ಎರಡು ವರ್ಷ ಬೇಕೋ ಗೊತ್ತಿಲ್ಲ. ಏಕೆಂದರೆ 4 ವರ್ಷದ ಹಿಂದೆ ನೀವು ಮಾಡಿದಂಥ ಯೋಜನೆಗಳ ಘೋಷಣೆಗಳು ಇವತ್ತಿವರೆಗೂ ಅನುಷ್ಠಾನ ಆಗುತ್ತಿಲ್ಲ. ನೀವು ಬಜೆಟ್‌ನಲ್ಲಿ ಹಲವಾರು ಯೋಜನೆಗಳ ಮುಖಾಂತರ ಜನರನ್ನು ಆಕರ್ಷಣೆ ಮಾಡಲಿಕ್ಕೆ ಏನು ಘೋಷಣೆಗಳನ್ನು ಮಾಡಿದಿರಿ. ಅದೇ ರೀತಿ ಬೇರೆ ರೀತಿಯಿಂದಲೂ ಇವತ್ತು ಜನರನ್ನು ಆಕರ್ಷಣೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಆ ರಾಜಕಾರಣದ ವ್ಯವಸ್ಥೆಯಲ್ಲಿ ಜನರನ್ನು ಕರೆದುಕೊಂಡು ಬರುವಂಥದ್ದು ಸಭೆಗಳಿಗೆ ಸೇರಿಸುವಂಥದ್ದು ಅದಕ್ಕೂ ಹೊಸ ಹೊಸ ಆಕರ್ಷಣೆಗಳನ್ನು ನೀವು ಚಾಲೂ ಮಾಡಿದಿರಿ. 'ನಂಗಾನಾಚು' ಪ್ರಕರಣ. ಈ ಪ್ರಕರಣದಿಂದ ಎಲ್ಲರೂ ತಲೆತಗ್ಗಿಸುವಂಥದ್ದು ಆಗಿದೆ. ಮಂಡ್ಯಾ ಜಿಲ್ಲೆ ಮುಖ್ಯಮಂತ್ರಿಗಳ ಜಿಲ್ಲೆಯಾಗಿದೆ. ನಾಗಮಂಗಲದಲ್ಲಿ ನಿಮ್ಮ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರೇ ಆಯೋಜನೆ ಮಾಡಿದಂಥ ಕಾಂಗ್ರೆಸ್ ಸಭೆ. ಅಲ್ಲಿ ಏನಾಯಿತು? ಅರೆನಗ್ನ ನೃತ್ಯ (ಕ್ಯಾಬರೆ), ಬೆಂಗಳೂರಿನಲ್ಲಿ ನಿಮ್ಮ ಸರ್ಕಾರ ಕ್ಯಾಬರೆ ಡ್ಯಾನ್ಸ್ ಅನ್ನು ನಿಷೇಧ ಮಾಡಿತು. ಆದರೆ ನಾಗಮಂಗಲದಲ್ಲಿ ಬಹಿರಂಗವಾಗಿ ಕಾಂಗ್ರೆಸ್ಸಿನ ಸಭೆಯಲ್ಲಿ ಕ್ಯಾಬರೆ ಡ್ಯಾನ್ಸ್ ಮಾಡಲಾಗುತ್ತದೆ. ಅಂದರೆ ಕಾಂಗ್ರೆಸ್‌ನ ಸಂಸ್ಕೃತಿ ಎಲ್ಲಿಗೆ ಬಂತು? ಆ ಕಾಂಗ್ರೆಸ್ ಸಂಸ್ಕೃತಿ, 100 ವರ್ಷಗಳಷ್ಟು ಹಳೆಯದಾದಂಥ ಪಕ್ಷ, ಮಹಾತ್ಮ ಗಾಂಧೀಜಿಯವರು, ಸುಭಾಶ್ ಚಂದ್ರಬೋಸರು, ನೆಹರುರವರು, ಇಂದಿರಾಗಾಂಧಿಯವರು ಅವರುಗಳೆಲ್ಲಾ ಕಟ್ಟಿ ಬೆಳೆಸಿದಂಥ ಕಾಂಗ್ರೆಸ್ ಪಕ್ಷ, ರಾಣಿ ಚೆನ್ನಮ್ಮನವರ ಹೆಸರು ಹೇಳುತ್ತೀರಿ, ಜಾನ್ಸಿ ರಾಣಿ ಲಕ್ಷ್ಮೀಬಾಯಿರವರ ಹೆಸರನ್ನು ಹೇಳುತ್ತೀರಿ, ನಿಮ್ಮ ಕಾಂಗ್ರೆಸ್ ಅಧ್ಯಕ್ಷರು ಮಹಿಳೆಯರಾಗಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಮಹಿಳೆಯರಿಂದಲೇ ಅಸಭ್ಯ ನರ್ತನ, ಅರೆನಗ್ನ ನೃತ್ಯ ಅದಕ್ಕೆ ಇವತ್ತು ನಿಮ್ಮ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ? ನಿಮ್ಮ ಸರ್ಕಾರ ಏನು ಹೇಳುತ್ತದೆ ಎನ್ನುವುದರ ಬಗ್ಗೆ ಸ್ಪಷ್ಟವಾಗಬೇಕಾಗುತ್ತದೆ. ಇದು ತಲೆತಗ್ಗಿಸುವಂಥ ವಿಚಾರವಾಗಿದೆ. ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಈ ರೀತಿಯಾಗಿ ಅಸಭ್ಯವಾದಂಥ ವರ್ತನೆ ಅಸಭ್ಯವಾದಂಥ ನೃತ್ಯ, ಬಹಶಃ ಇದನ್ನು ಯಾರೂ ಒಪ್ಪಲಿಕ್ಕಿಲ್ಲ. ಶ್ರೀ ಜನಾರ್ಧನ ಪೂಜಾರಿಯವರು ಅವರನ್ನು ನಾವು ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಪದವಿಯಿಂದ ತೆಗೆದು ಹಾಕಿದೆವು. ಇದು ಹೀಗೆ ಆಗಬಾರದಿತ್ತು. ಎಂದು ಹೇಳಿದರು. ಇದು ಅಲ್ಲಿಗೆ ಮುಗಿಯಿತು.

**1.20 ಪಿಎಂ**

ಇದು ಹೀಗಾಗಬಾರದಾಗಿತ್ತು. ಅನಂತರ ಜಿಲ್ಲಾ ಅಧ್ಯಕ್ಷರು ಒಂದು ಹೇಳಿಕೆಯನ್ನು ಕೊಟ್ಟರು, ಇಲ್ಲಾ ನಾವು ಸ್ಟೇಜ್ ಮೇಲೆ ಹತ್ತುವುದಕ್ಕೆ ಮುಂಚೆಯೇ ಅದು ಮುಗಿದು ಹೋಗಿತ್ತು ಎಂದು ಹೇಳಿದರು.

ನಾವು ಸಭೆಯಲ್ಲಿ ಭಾಗವಹಿಸುವುದಕ್ಕೆ ಮುಂಚೆಯೇ ಅಲ್ಲಿ ಡ್ಯಾನ್ಸ್‌ನ್ನು ಮುಗಿಸಿಬಿಟ್ಟಿದ್ದರು. ಇದರ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅಲ್ಲಿ ಜಿಲ್ಲಾಧ್ಯಕ್ಷರು ಮತ್ತು ನಿಮ್ಮ ಜವಾಬ್ದಾರಿಯುತವಾದ ಸಚಿವರಿಬ್ಬರು ಆ ಸಭೆಯಲ್ಲಿದ್ದಾರೆ. ಅವರ ಮುಂದೆ ಇವೆಲ್ಲವು ನಡೆದುಹೋಗಿದೆ. ಅವರೆಲ್ಲರೂ ಸುಮ್ಮನೆ ನೋಡಿಕೊಂಡು ಕುಳಿತಿದ್ದಾರೆ. ಹಾಗಾದರೆ ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಇವತ್ತಿನವರೆವಿಗೂ ಸ್ಪಷ್ಟನೆ ಇಲ್ಲ. ಇಲ್ಲಿ ಬೆಂಗಳೂರಿನಲ್ಲಿ ಕ್ಯಾಬರ್ ನಿಷೇಧ, ಕ್ಯಾಬರೆಯನ್ನು ನಡೆಸಿದರೆ ಕೇಸ್‌ನ್ನು ಹಾಕುತ್ತೇವೆ. ಹಾಗಾದರೆ ನಿಮ್ಮ ಕಾಂಗ್ರೆಸ್ ಜಿಲ್ಲಾಧ್ಯಕ್ಷರೆ ಇವಷ್ಟು ಸಭೆಯಲ್ಲಿ ಬಹಿರಂಗವಾಗಿ ಕ್ಯಾಬರೆ ಡ್ಯಾನ್ಸ್‌ನ್ನು ಮಾಡಿಸುತ್ತಾರೆ. ಅವರ ಮೇಲೀನಾದರೂ ಕ್ರಿಮಿನಲ್ ಕೇಸ್‌ನ್ನು ಹಾಕಿದ್ದೀರಾ? ನಿಮ್ಮ ಮಂತ್ರಿಗಳಿಂದ ರಾಜೀನಾಮೆಯನ್ನು ಇವತ್ತು ತೆಗೆದುಕೊಂಡಿದ್ದೀರಾ? ಇಲ್ಲಾ. ಅಂದರೆ ಯಾವ ಒಂದ ಕೀಳುಮಟ್ಟಕ್ಕೆ ಹೋಗುತ್ತಿದ್ದೀರಿ, ಸಭೆಯಲ್ಲಿ ಜನರನ್ನು ಆಕರ್ಷಣೆ ಮಾಡುವ ಸಲುವಾಗಿ, ಜನರನ್ನು ಕೂಡಿಸುವುದಕ್ಕೆ ಯಾವ ರೀತಿಯಾಗಿ ಕೀಳುಮಟ್ಟಕ್ಕೆ ಹೋಗುತ್ತಿದ್ದೀರಿ, ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಡುತ್ತೇನೆ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೀರೋ, ಅಥವಾ ಮಂತ್ರಿಗಳಿಂದ ರಾಜೀನಾಮೆಯನ್ನು ತೆಗೆದುಕೊಳ್ಳುತ್ತೀರೋ, ಅದನ್ನು ಅವರಿಗೆ ಬಿಡುತ್ತೇನೆ. ಇದರ ಬಗ್ಗೆ ಅವರು ಒಂದು ಶಬ್ದ ರೆಸ್ಪಾನ್ಸ್ ಕೊಟ್ಟಿಲ್ಲ. ಏಕೆಂದರೆ ಇಂತಹ ಸಮಸ್ಯೆಗಳು ಬಂದಾಗ ಮುಖ್ಯಮಂತ್ರಿಗಳು ಯಾವಾಗಲೂ ಮೌನ, ಅದರ ಬಗ್ಗೆ ಏನು ಹೇಳುವುದಿಲ್ಲ. "ಮೌನಂ ಸಮ್ಮತಿ ಲಕ್ಷಣಂ" ಎಂದು ಹೇಳುತ್ತಾರೆ. ಯಾವ ರೀತಿಯಾಗಿ ಇಲ್ಲಿ ನಡೆಯುತ್ತಿದೆ. ಇನ್ನೊಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ .... ಅದು ಬರುತ್ತದೆ. ಇದು ಬರುತ್ತದೆ. ಎಲ್ಲದರ ಬಗ್ಗೆಯೂ ಕೂಡ ಹೇಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇದು ಕೊನೆಯ ಅಧಿವೇಶನವಾಗಿದೆ. ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ, ಏನು ಲೋಪದೋಷಗಳಿವೆ, ಏನು ಮಾಡಬೇಕಾಗಿದೆ ಅದರ ಬಗ್ಗೆ ತಮ್ಮ ಜವಾಬ್ದಾರಿಯಿದೆ, ತಾವು ರಾಜ್ಯದ ಹಿತದೃಷ್ಟಿಯಿಂದ, ವಿರೋಧಪಕ್ಷದ ನಾಯಕರಾಗಿ. ನಾವು ಬಜೆಟ್ ಏನೂ ಮಂಡನೆ ಮಾಡಿದ್ದೇವೆ. ಅದರಲ್ಲಿ ಏನಾಗಿದೆ ಎಂಬುದರ ಬಗ್ಗೆ ಹೇಳಿ. ಇದಕ್ಕೆ ಉಲ್ಲೇಖ ಮಾಡಬಾರದು ಎನ್ನತಕ್ಕಂತಹ ಹಕ್ಕನ್ನು ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಪ್ರತ್ಯೇಕವಾದ ನೋಟೀಸ್‌ನ್ನು ಕೊಟ್ಟು ಇದರ ಬಗ್ಗೆಯೂ ಕೂಡ ತಾವು ಮಾತನಾಡಿ. ಆದರೆ ಬಜೆಟ್ ಬಗ್ಗೆ ಮೊದಲು ಮಾತನಾಡುವ ಬಗ್ಗೆ ಜನರು ನಿರೀಕ್ಷೆ ಮಾಡುತ್ತಿದ್ದಾರೆ. ಈಗಾಗಲೇ ನಾವು ಏನು ಮಾಡಬೇಕೆಂಬುದರ ಬಗ್ಗೆ ಬಜೆಟ್‌ನಲ್ಲಿ ಕೊಟ್ಟಿದ್ದೇವೆ. ಅದರ ಬಗ್ಗೆ ತಾವು ಮಾತನಾಡಿ, ಇದರ ಬಗ್ಗೆಯೂ ತಾವು ಪ್ರತ್ಯೇಕವಾಗಿ ನೋಟೀಸ್ ಕೊಟ್ಟು ಮಾತನಾಡಿ ಯಾರೂ ಬೇಡವೆಂದು ಹೇಳುತ್ತಾರೆ?

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೆ, ನಾನು ಬಜೆಟ್ ಮೇಲೆಯೂ ಮಾತನಾಡುತ್ತೇನೆ. ಈ ಎಲ್ಲಾ ವಿಷಯದ ಬಗ್ಗೆಯೂ ಕೂಡ ಮಾತನಾಡುತ್ತೇನೆ. ಸರ್ಕಾರ ಹೇಗೆ ನಡೆದಿದೆ. ಸರ್ಕಾರ ಹೇಗೆ ನಡೆದುಕೊಂಡು ಹೋಗುತ್ತಿದೆ, ಬಜೆಟ್ ಅಧಿವೇಶನದಲ್ಲಿ ಎಲ್ಲದರ ಬಗ್ಗೆಯೂ ಕೂಡ ಚಿಂತನೆಯನ್ನು ಮಾಡಬೇಕಾಗುತ್ತದೆ. ಇದೇ ವಿಚಾರ ಮಾತನಾಡಬೇಕು. ಅದೇ ವಿಚಾರ ಮಾತನಾಡಬೇಕು ಎನ್ನುವುದಲ್ಲ. ಇದನ್ನೂ ಕೂಡ ಮಾತನಾಡಬೇಕಾಗುತ್ತದೆ. ಬಜೆಟ್ ಮೇಲೆ...

**ಶ್ರೀ ಧರ್ಮಸಿಂಗ್** :- ಆ ರೀತಿಯಾದ ಸಂದರ್ಭ ಬರದೆ ಇರಲಿ.

**ಶ್ರೀ ಜಗದೀಶ್ ಶೆಟ್ಟರ್** :- ಇಲ್ಲಾ, ಹಾಗೆಯೇ ಸ್ಟಾರ್ಟ್ ಮಾಡಬೇಕಾಗುತ್ತದೆ. ಆ ರೀತಿ ಮಾಡಿದರೆ ನಿಮಗೆ ಬಿಸಿ ಹತ್ತುತ್ತದೆ. ಇಲ್ಲದಿದ್ದರೆ ಸರ್ಕಾರಕ್ಕೆ ಬಿಸಿ ಹತ್ತುವುದಿಲ್ಲ. ಇಲ್ಲಿ "ಆಂಧ್ರ ಯುವತಿಯ ಅಳಲು" "ಜಾತ್ರೆಯಲ್ಲಿ ಅಶ್ಲೀಲ ನೃತ್ಯ" ಶಿಡ್ಲಘಟ್ಟದಲ್ಲಿ ಇದೇ ಪರಿಸ್ಥಿತಿಯಾಗಿದೆ. ಅಲ್ಲಿ 7 ಜನ ಮಹಿಳೆಯರು, ಅರೆ ನಗ್ನ ನೃತ್ಯ, ಇವು ದಿನನಿತ್ಯವೂ ನಡೆಯುತ್ತಿದೆ. ಇದರ ಬಗ್ಗೆ ಪೊಲೀಸ್‌ರಿಂದ ಯಾವುದೇ ಕ್ರಮವಿಲ್ಲ. ಇವತ್ತು ರಾಜ್ಯ ಸರ್ಕಾರ ಏನು ಆಡಳಿತವನ್ನು ನಡೆಸುತ್ತಿದೆ, ಇದು ಆಡಳಿತದ ವೈಖರಿ ಎಂದು ಹೇಳಬೇಕಾಗುತ್ತದೆ. ಮತ್ತೊಂದು ವಿಷಯದ ಬಗ್ಗೆ ಹೇಳುವುದಾದರೆ, ಮೊನ್ನೆ ಇವರು ಧಾರವಾಡದಲ್ಲಿ ಒಂದು ಸಮಾವೇಶವನ್ನು ಮಾಡಿದರು. ಅದಕ್ಕಾಗಿ ಮಾನ್ಯ ಧರ್ಮಸಿಂಗ್‌ರವರಿಗೆ ಹೇಳುತ್ತಿದ್ದೇನೆ. ನೀವು ಯಾವ ರೀತಿಯಾಗಿ ಆಡಳಿತವನ್ನು ನಡೆಸುತ್ತಿದ್ದೀರಿ ಎಂಬುದನ್ನು ತೋರಿಸಲು ಇವೆಲ್ಲವನ್ನೂ ನಾನು ಪ್ರಸ್ತಾಪ ಮಾಡುತ್ತಿದ್ದೇನೆ ಪಂಚಾಯಿತಿ ಸಂಸ್ಥೆಗಳ ಒಂದು ಸಭೆ, ಅದು ಸರ್ಕಾರದ ಸಭೆಯಾಗಿದೆ. ಅಲ್ಲಿ ನಿಮ್ಮ ಅಧ್ಯಕ್ಷರನ್ನು ಕರೆಸಿದ್ದೀರಿ, ಅಲ್ಲಿ ಒಂದು ಜಿ.ಓ.ವನ್ನೂ ಕೂಡ ಹೊರಡಿಸಿದ್ದೀರಿ, ಆ ಗೌರ್ನಮೆಂಟ್ ಆರ್ಡರ್ ಕಾಪಿಯನ್ನು ನಿಮಗೆ ಕೊಡುತ್ತೇನೆ. ಅಲ್ಲಿ ಕರೆದು ಏನು ಮಾಡಿದ್ದೀರೆಂಬುದು ಗೊತ್ತಾಗುತ್ತದೆ. ಅಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಿದ್ದೀರಿ, ಅಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಇರಬಹುದು ಅಥವಾ ಸೆಕ್ರೆಟರಿ ತಾಲ್ಲೂಕು ಪಂಚಾಯಿತಿ ಸೆಕ್ರೆಟರಿ ಅವರೆಲ್ಲರಿಗೂ ಒಂದು ಆದೇಶ, ಈ ಸಮಾವೇಶಕ್ಕೆ ಎಲ್ಲರನ್ನೂ ಕರೆದುಕೊಂಡು ಬರುವಂತಹದ್ದು, ಎಲ್ಲರನ್ನೂ ಕಂಪಲ್‌ಸರಿಯಾಗಿ ಕರೆದುಕೊಂಡು ಬರಬೇಕು. ಆಮೇಲೆ ಅವರಿಗೆ ಟಿ.ಎ. ಡಿ.ಎ. ಕೊಡಬೇಕು. ಅದಕ್ಕಾಗಿ ಒಂದು ಜಿ.ಓ. ಹಿಂದೆ ಬಹುಶಃ ಯಾವುದೇ ಸಂದರ್ಭದಲ್ಲಿ ಈ ರೀತಿಯಾದಂತಹ ಜಿ.ಓ. ಆಗಿರುವುದನ್ನು ನಾನು ನೋಡಿಲ್ಲ. ಅಲ್ಲಿಗೆ ಲಕ್ಷಾಂತರ ಜನರನ್ನು ಸರ್ಕಾರದ ವೆಚ್ಚದಲ್ಲಿ ಕರೆದುಕೊಂಡು ಧಾರವಾಡದ ಬೇಲೂರಿನಲ್ಲಿ ಕಾಂಗ್ರೆಸ್ ಸಮಾವೇಶಕ್ಕೆ, ನಾನು ಅಲ್ಲಿಗೆ ಹೋಗಲಿಲ್ಲ. ಅದಕ್ಕೆ ನಾವು ಬಹಿಷ್ಕಾರವನ್ನು ಹಾಕಿದ್ದೇವೆ. ನೀವು ಕಾಂಗ್ರೆಸ್ ಸಮಾವೇಶವನ್ನು ಮಾಡಿಕೊಳ್ಳಿ. ನಿಮಗೆ ಯಾರು ಬೇಡ ಎನ್ನುವುದಿಲ್ಲ. ಕ್ಯಾಬರೆ ಡ್ಯಾನ್ಸ್ ಇಟ್ಟುಕೊಳ್ಳಿ, ಎಲ್ಲಾ ಮಾಡಿಕೊಳ್ಳಿ, ಆದರೆ ಸರ್ಕಾರದ ವೆಚ್ಚದಲ್ಲಿ ಬೇಲೂರಿನಲ್ಲಿ ಸಮಾವೇಶ

**ಶ್ರೀ ಎಸ್.ಎಸ್. ಪಾಟೀಲ್** :- ಅವರು ಕ್ಯಾಬರೆ ಡ್ಯಾನ್ಸ್ ಮಾಡಿಸಿ ಏನೋ ಮಾಡಿಸಿಕೊಂಡರಲ್ಲಾ?

**ಶ್ರೀ ಜಗದೀಶ್ ಶೆಟ್ಟರ್** :- ಅವರು ಮಾಡಿಸಿಕೊಳ್ಳುವುದಕ್ಕೆ ಹತ್ತಿರದಲ್ಲಾ, ಕ್ಯಾಬರೆ ಡ್ಯಾನ್ಸ್ ಮಾಡಿಕೊಂಡು ಸಮಾವೇಶವನ್ನು ಮಾಡಿಕೊಳ್ಳಿ.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)** :- ಮಾನ್ಯ ಪಾಟೀಲರೆ, ಆ ವಿಷಯದ ಬಗ್ಗೆ ಈಗಾಗಲೇ ಸಂಬಂಧಪಟ್ಟವರು ಡಿನೈ ಮಾಡಿದ್ದಾರೆ.

**ಶ್ರೀ ಆರಗ ಜ್ಞಾನೇಂದ್ರ** :- ಕನ್ನಡ ಸಂಸ್ಕೃತಿ ಸಚಿವರು ಇದ್ದಾರಲ್ಲಾ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :- ಇಲ್ಲಿ ಚರ್ಚೆ ಮಾಡುವುದು ಬೇಡ, ಅದಕ್ಕೆ ಸಂಬಂಧಪಟ್ಟಂತೆ ಅಲ್ಲೆಲ್ಲಾ ಡಿನೈ ಮಾಡಿದ್ದಾರೆ. ಯಾರಿದ್ದರು, ಇಲ್ಲಾ ಎನ್ನತಕ್ಕಂಥದ್ದು ಅಲ್ಲಿಯವರು ಹೇಳಿದ್ದಾರೆ. ಪುನಃ ಪದೇಪದೇ ಆ ವಿಚಾರವನ್ನು ಹೇಳುವುದು ಬೇಡ. ಇದೇನೂ ವಿಶ್ವ ಸುಂದರಿ ಸ್ಪರ್ಧೆಯನ್ನು ನಿಮ್ಮ ಹಾಗೇ ನಾವು ಮಾಡಿದ್ದೇವಾ? ಅದು ಏನೋ ಲೋಕಲ್ ಲೆವೆಲ್‌ನಲ್ಲಿ ನಡೆದಿದೆ.

ವಿಶ್ವಸುಂದರಿ ಸ್ಪರ್ಧೆ ನೀರಿಲ್ಲ ಎಂದರೆ ಬೇರೆ ಕುಡಿಯಿರಿ ಎಂದವರು ರಸ್ತೆಯಲ್ಲಿ ಗುಂಡಿ ಬಿದ್ದಿದೆ ಎಂದರೆ, ಬಂಡಿ ಮೇಲೆ ಹೋಗು ಎನ್ನುವವರು ನೀವು ಏತಕ್ಕಾಗಿ ಮಧ್ಯದಲ್ಲಿ ಮಾತನಾಡುತ್ತೀರಿ? ಅವರು ಏನು ಹೇಳುತ್ತಾರೆ ನೋಡೋಣ.

**ಶ್ರೀ ಎಸ್.ಎಸ್. ಪಾಟೀಲ್** :- ಸನ್ಮಾನ್ಯ ಅಧ್ಯಕ್ಷರೆ, ವಿಶ್ವ ಸುಂದರಿ ಎಂದು ಮಾನ್ಯ ಗೃಹ ಸಚಿವರು ಏನು ಹೇಳುತ್ತಾರೆ, ನಾನು ವಿಶ್ವಸುಂದರಿಯನ್ನು ನೋಡುವುದಕ್ಕೆ ಹೋಗಿದ್ದೆ. ಇಲ್ಲಾ ಎಂದು ಹೇಳಲಿಲ್ಲ ಅಪತ್ತೂ ಕೂಡ ಇದರ ಬಗ್ಗೆ ಹೇಳಿದ್ದೇನೆ. ಮೊನ್ನೆ ಏನು ಕ್ಯಾಬರೆಯನ್ನು ನಡೆಸಿದ್ದಿರಲ್ಲಾ ಅದು ಅದಕ್ಕಿಂತ ವರ್ಸ್ ಇದ್ದಿಲ್ಲ ಮೊನ್ನೆ ಕ್ಯಾಬರೆಯನ್ನು ಮಾಡಿಸಿದ್ದಿರಲ್ಲಾ ಹೇಗಿತ್ತೆಂದು ಅವರೇ ಹೇಳಿಬಿಡಲಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :- ಒಂದು ಸ್ಟೇಟ್‌ಮೆಂಟ್ ಮಾಡಿದ್ದರು ಏನೆಂದರೆ, ಅದು ವಿಶ್ವ ಸುಂದರಿಯರದ್ದಾಗಿತ್ತು. ನಿಮ್ಮಂತಹ ಕುರೂಪಿಗಳಿಗೆ ಇಲ್ಲ ಎಂದು ನೀವು ಅಜಿಟೇಷನ್ ಮಾಡಿದಂತಹ ಹೆಚ್ಚು ಮಕ್ಕಳಿಗೆ ಹೇಳಿದಿರಿ.

**ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು)** :- ಮಾನ್ಯ ಪಾಟೀಲರೆ, ವಿಶ್ವಸುಂದರಿ ಸ್ಪರ್ಧೆಗೆ ಹೋಗಿ ನೋಡುವಂತಹ ಹುಚ್ಚು ನಿಮಗ್ಯಾಕೆ ಬಂತು ಅಂತಾ.

**ಶ್ರೀ ಎಸ್.ಎಸ್. ಪಾಟೀಲ್** :- ವಿಶ್ವ ಸುಂದರಿ ಸ್ಪರ್ಧೆಯನ್ನು ನೋಡುವಂತಹ ಬುದ್ಧಿ ಏತಕ್ಕಾಗಿ ಬಂತೆಂದರ, ನಾನು ಪೇಪರ್‌ನಲ್ಲಿ ಈ ಬಗ್ಗೆ ನೋಡಿದ್ದೆ, ಕ್ಯಾಬರೆಯನ್ನು ಮಾಡಿಸುತ್ತಾರೆಂದು ನಾನು ಹೋಗಿದ್ದೆ. ಮೊನ್ನೆ ನೀವು ಹೇಳಿದ್ದಿರಲ್ಲಾ, ಶ್ರೀಮತಿ ಸೋನಿಯಾಗಾಂಧಿಯವರು ಬರುತ್ತಾರೆ, ಎಲ್ಲರನ್ನೂ ಕಂಪಲ್‌ಸರಿಯಾಗಿ ಕರೆದುಕೊಂಡು ಬರಬೇಕೆಂದು ಹೇಳಿದ್ದರಲ್ಲಾ, ಕೆಲವರು ಪಾಪ, ಸೋನಿಯಾಗಾಂಧಿಯವರನ್ನು ನೋಡುವುದಕ್ಕೆ ಹೋಗಿದ್ದರು. ಇರಲಿ ಒಬ್ಬ ವಿರೋಧ ಪಕ್ಷದ ನಾಯಕಿ ಎಂದು. ಅವರು ನೋಡಲೇ ಇಲ್ಲ, ಅವರು 8–8 ಕಿಲೋಮೀಟರ್ ದೂರದಲ್ಲಿದ್ದರು, ಅಲ್ಲಿ ಹೋಗಿ ಯಾರೂ ನೋಡಲೇ ಇಲ್ಲಾ. ನೀವೇ ಅಷ್ಟು ಮುಂದಿಹೋಗಿ ನೋಡಿರುವವರು. ಉಳಿದವರು ಯಾರೂ ಕೂಡ ನೋಡಲೇ ಇಲ್ಲಾ. ನಮ್ಮ ರಾಷ್ಟ್ರದ ಒಬ್ಬ ನಾಯಕಿಯನ್ನು ನೋಡಬೇಕೆಂಬ ಅಭಿಲಾಷೆಯಿಂದ ಜನ ಅಲ್ಲಿಗೆ ಹೋಗಿದ್ದರು.

**ಶ್ರೀ ಆರಗ ಜ್ಞಾನೇಂದ್ರ** :- ಕೆಟ್ಟಿರುವಂತಹ ಬೋರವೆಲ್‌ಗಳಿಗೆ ವಾಷರ್ ಹಾಕಿ ರಿಪೇರಿ ಮಾಡುವುದಕ್ಕೆ 250 ರೂಪಾಯಿಗಳು ಇಲ್ಲದಿರುವಂತಹ ಪಂಚಾಯಿತಿಗಳಲ್ಲೂ ಸುಮಾರು 5 ರಿಂದ 6 ಸಾವಿರ ಸಾಲ ಮಾಡಿ ಖರ್ಚು ಮಾಡಿಕೊಂಡು ಕರೆದುಕೊಂಡು ಬಂದಿದ್ದೀರಲ್ಲಾ, ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಅಲ್ಲಿ ಇವರನ್ನು ಏತಕ್ಕಾಗಿ ಕರೆದುಕೊಂಡು ಹೋಗಬೇಕಾಗಿತ್ತು.

**ಛೇರ್ಮನ್** :- ಸಬ್ಜೆಕ್ಟ್ ಎಲ್ಲವೂ ಕೂಡ ಡಿವಿಯೇಟ್ ಆಗುತ್ತಿದೆ. ದಯವಿಟ್ಟು ಎಲ್ಲರೂ ಕೂಡ ಸಬ್ಜೆಕ್ಟ್‌ಗೆ ಬನ್ನಿ.

**ಶ್ರೀ ಜಗದೀಶ್ ಶೆಟ್ಟರ್** :- ನಾನು ಆ ಸಮಾವೇಶದ ಬಗ್ಗೆ ಹೇಳುತ್ತೇನೆ. ಇವರು ಒಂದು ಜಿ.ಓ.ವನ್ನು ಹೊರಡಿಸಿದರು. ಜನವರಿ 10ನೇ ತಾರೀಖಿಗೆ ಒಂದು ಜಿ.ಓ.ವನ್ನು ಹೊರಡಿಸಿದ್ದಾರೆ. ಏನೆಂದರೆ, ಹುಬ್ಬಳ್ಳಿಯಲ್ಲಿ ನಡೆಯಲಿರುವ ಪಂಚಾಯಿತ್ ರಾಜ್ ಸದಸ್ಯರ ಸಮಾವೇಶಕ್ಕೆ ಪಂಚಾಯತ್‌ರಾಜ್ ಸದಸ್ಯರು ಹಾಜರಾಗಲು ಸರ್ಕಾರದಿಂದ ಅನುಮತಿಯನ್ನು ನೀಡಲಾಗಿದೆ. ಏನೆಂದರೆ, ಈ ಬೃಹತ್ ಸಮಾವೇಶಕ್ಕೆ ಸದಸ್ಯರನ್ನು ಒಟ್ಟಾಗಿ ಕರೆಯುತ್ತಿರುವ

ಜವಾಬ್ದಾರಿಯನ್ನು ಸಂಬಂಧಪಟ್ಟಂತಹ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಲಾಗಿದ್ದು, ಗ್ರಾಮ ಪಂಚಾಯಿತಿಗಳ ಕಾರ್ಯದರ್ಶಿಗಳು ಗ್ರಾಮಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ, ಸದಸ್ಯರುಗಳಿಗೆ ಕರ್ನಾಟಕ ಪಂಚಾಯತ್‌ರಾಜ್, ಅವರುಗಳಿಗೆ ಸಂಬಂಧಪಟ್ಟಹಾಗೆ ಪ್ರಯಾಣ ಭತ್ಯೆ.ಹಾಗು ದಿನಭತ್ಯೆ ನಿಯಮಗಳು-94ರ ಅನ್ವಯ ಲಭ್ಯವಿರುವಂತಹ ಭತ್ಯೆಗಳನ್ನು ಡ್ರಾ ಮಾಡಿ ಸಂಬಂಧಪಟ್ಟಂತಹ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡತಕ್ಕದ್ದು. ಈ ರೀತಿಯಾದಂತಹ ಜೆ.ಓ. ಹೊರಡಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಗೂ ಕೂಡ ಇದೇ ರೀತಿಯಾದಂತಹ ಒಂದು ಸೂಚನೆ. ಆಮೇಲೆ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳಿಗೂ ಕೂಡ ಇದೇ ರೀತಿಯಾದಂತಹ ಸೂಚನೆ ಕೊಟ್ಟಿದ್ದಾರೆ. ನಂತರ ನಗರಸಭೆಗಳಿಗೂ ಕೂಡ ಬಂತು. ಕಾರ್ಪೋರೇಷನ್‌ಗೆ ಕೂಡ ಬಂತು, ಈ ರೀತಿಯಾಗಿ ಒಂದು ರಾಜಕೀಯ ಪಕ್ಷ, ಇವತ್ತು ತಾನು ಸರ್ಕಾರವನ್ನು ನಡೆಸುತ್ತೇನೆಂದು ತಿಳಿದುಕೊಂಡು ಜೆ.ಓ.ವನ್ನು ಹೊರಡಿಸಿ, ಇವತ್ತು ಕಾಂಗ್ರೆಸ್ ಸಮಾವೇಶಕ್ಕೆ ಈ ರೀತಿಯಾಗಿ ಆಹ್ವಾನ ಮಾಡಿದ್ದು, ಮತ್ತು ಈ ರೀತಿಯಾಗಿ ಸದಸ್ಯರನ್ನು ಅಲ್ಲಿಗೆ ಕರೆದುಕೊಂಡು ಹೋಗಿರುವುದು, ಇದು ಪ್ರಜಾತಂತ್ರ ವ್ಯವಸ್ಥೆಗೆ ವಿರುದ್ಧವಾದದ್ದು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದಕ್ಕೆ ಹತ್ತಾರು ಕೋಟಿ ರೂಪಾಯಿಗಳು ಖರ್ಚಾಗಿದೆ ಎನ್ನುವಂತಹದ್ದು ನಮಗೆ ಬಂದಿರುವಂತಹ ಮಾಹಿತಿಯಾಗಿದೆ. ಈ ಟಿಎ ಮತ್ತು ಡಿ.ಎ. ಅಲ್ಲಿ ಕರೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿದಕ್ಕಾಗಿ ಇವತ್ತು ಎಷ್ಟು ಖರ್ಚಾಗಿದೆ ಎನ್ನುವುದನ್ನು ಇವತ್ತು ಸರ್ಕಾರ ಸಾರ್ವಜನಿಕವಾಗಿ ಬಹಿರಂಗಪಡಿಸಬೇಕಾಗುತ್ತದೆ. ಸಾರ್ವಜನಿಕರ ಹಣವನ್ನು ಈ ರೀತಿಯಾಗಿ ಲೂಟಿ ಮಾಡುವಂತಹದ್ದು ಸರಿಯಲ್ಲ. ಅದನ್ನು ಕಾಂಗ್ರೆಸ್ ಪಕ್ಷವೇ ಈ ಹಣವನ್ನು ತುಂಬಿ ಕೊಡಬೇಕಾಗುತ್ತದೆ. ಅದನ್ನು ಕಾಂಗ್ರೆಸ್ ಪಕ್ಷದಿಂದ ವಸೂಲು ಮಾಡಬೇಕಾಗುತ್ತದೆ ಎಂಬ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ ಇವತ್ತು ನಿಮಗೆ ಅನುದಾನವನ್ನು ಕೊಡುವುದಕ್ಕಾಗುತ್ತಿಲ್ಲ. ಈ ಒಂದು ಕೆಳಹಂತದ ಅಧಿಕಾರ ವಿಕೇಂದ್ರಿಕರಣ ಬೇಲೂರು ಘೋಷಣೆ ಎಂದು ನಿಮ್ಮ ಬಜೆಟ್ ಭಾಷಣದಲ್ಲಿ ಬಂದಿದೆ. ಏನು ಬೇಲೂರು ಘೋಷಣೆ? ಪಂಚಾಯತ್ ರಾಜ್ ವ್ಯವಸ್ಥೆಗೆ ಈ ಸರ್ಕಾರ ಏನು ಅನುದಾನ ಕೊಡುತ್ತಿದೆ, ಇದಕ್ಕೆ ಏನಾದರೂ ಹೆಚ್ಚಿನ ಅಧಿಕಾರ ಅಥವಾ ಅನುದಾನ ಕೊಡುವಂಥ ವ್ಯವಸ್ಥೆ ಮಾಡಿದಿರೋ ಹೇಗೆ? ಮುಖ್ಯಮಂತ್ರಿಗಳು, ಇನ್ನು ಮೇಲೆ ನೇರವಾಗಿ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಐದು ಲಕ್ಷ ರೂ.ನ ಚೆಕ್ ಕೊಡುತ್ತೇವೆಂದು ಹೇಳಿದರು. ಎಲ್ಲಿದೆ ಅದು? ಮೂರು ತಿಂಗಳಾಯಿತು ಹೇಳಿ, ಮೈಸೂರಿನಲ್ಲಿ ಹೇಳಿದಿರಿ, ಬೆಂಗಳೂರಿನಲ್ಲಿ ಹೇಳಿದಿರಿ, ಹಾಗಾದರೆ ನೇರವಾಗಿ ಐದು ಲಕ್ಷ ರೂಪಾಯಿಗಳ ಅನುದಾನವನ್ನು ಕೊಡುವಂಥ ವ್ಯವಸ್ಥೆ ಎಲ್ಲಿ ಬಂದಿದೆ? ಸುಮ್ಮನೆ ಘೋಷಣೆ ಮಾಡಿಬಿಡುವುದು. ಇಲ್ಲಿಯವರೆವಿಗೂ ಕೇವಲ ಒಂದು ಲಕ್ಷ ರೂಪಾಯಿ ಹಣ ಬಂದಿದೆ. ಕೇವಲ ಒಂದು ಲಕ್ಷ.

**ಛೇರ್ಮನ್** :- ಮೂರುವರೆ ಲಕ್ಷ ರೂ ಬಂದಿದೆ.

**ಶ್ರೀ ಜಗದೀಶ್ ಶೆಟ್ಟರ್** :- ಮೂರೂವರೆ ಲಕ್ಷ ರೂ ಎಲ್ಲಿ ಬಂದಿದೆ? ಅದು ನಮಗೆ ಗೊತ್ತಿಲ್ಲ ಅದು ಮಾನ್ಯ ಸಭಾಪತಿಯವರ ಕ್ಷೇತ್ರಕ್ಕೆ ಬಂದಿದ್ದರೆ ಬಹುಶಃ ಅವರು ಏನಾದರೂ ಒತ್ತಾಯ ಮಾಡಿರಬಹುದು.

**ಛೇರ್ಮನ್** :- ಇಲ್ಲ, ಇಲ್ಲ, ಆರೀತಿ ಇಲ್ಲ ಮೂರೂವರೆ ಲಕ್ಷ ರೂ ಬಂದಿದೆ.

**ಶ್ರೀ ಜಗದೀಶ್ ಶೆಟ್ಟರ್** :- ಆದರೆ ಇಲ್ಲಿಯವರೆವಿಗೂ ನನಗೆ ಬಂದಿರುವ ಮಾಹಿತಿ ಪ್ರಕಾರ ಕೇವಲ ಒಂದು ಲಕ್ಷ ರೂ ಬಂದಿದೆ. ಡಿಸೆಂಬರ್ 31 ರೊಳಗಾಗಿ ಐದು ಲಕ್ಷ ರೂಪಾಯಿ ಅನುದಾನ ಕಳುಹಿಸುತ್ತೇವೆಂದು ಹೇಳಿದಿರಿ, ಹಾಗಾದರೆ ಕಳುಹಿಸಿದ್ದೀರಾ? ಅಂದರೆ ಹೇಳುವುದು ಒಂದು ಮಾಡುವುದು ಒಂದು, ಇವತ್ತು ಈ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ನೀತಿ ಏನು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇವತ್ತೇನು ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡಣೆ ಮಾಡಿದ್ದಾರೆ, ಈ ಹೊಸದಾಗಿ ತೆರಿಗೆ ಇಲ್ಲವೆಂದು ಹೇಳುತ್ತಾರೆ, ಆದರೆ ಕಳೆದ ವರ್ಷ ಮುಂಗಡ ಪತ್ರ ಮಂಡನೆ ಮಾಡಿದ ಮೇಲೂ ಜೂನ್ ಒಂದನೇ ತಾರೀಖಿಗೆ ಏಕಾಏಕಿ ಮೂಲವಾದಂಥ ತೆರಿಗೆ ದರವನ್ನು ಶೇಕಡ ಒಂದರಿಂದ ಶೇಕಡ ಮೂರರಷ್ಟು ಎಲ್ಲಾ ಐಟ್ಸಂ ಮೇಲೆ ಏರಿಸಿದಿರಿ. ಹೋದ ಸಲ ಬಜೆಟ್ ಮಂಡನೆ ಮಾಡಿದಿರಿ, ಜೂನ್ ಒಂದನೇ ತಾರೀಖಿಗೆ ಮೂಲವಾದಂಥ ತೆರಿಗೆಯ ದರದ ಮೇಲೆ ಶೇಕಡ ಒಂದರಿಂದ ಶೇಕಡ ಮೂರರಷ್ಟು ಏರಿಸಿದಿರಿ. ಅದರಿಂದ ನಮ್ಮ ರಾಜ್ಯದ ಬಹಳಷ್ಟು ಮಾರ್ಕೆಟ್ ಬೇರೆ ಪ್ರದೇಶಕ್ಕೆ ತಮಿಳುನಾಡು ಹಾಗೂ ಆಂಧ್ರಪ್ರದೇಶಕ್ಕೆ ಹೋಗಿದ್ದು ನಮ್ಮ ಕಣ್ಣು ಮುಂದಿದೆ. ಆ ರೀತಿ ಏರಿಕೆ ಮಾಡಿದಾಗ ನಾವು ವಿರೋಧ ಮಾಡಿದೆವು. ಯಾವುದೇ ಒಂದು ವಿಶೇಷ ಅಧಿವೇಶನ ಕರೆಯಲಿಲ್ಲ. ಅದಕ್ಕೆ ಒಪ್ಪಿಗೆ ತೆಗೆದುಕೊಳ್ಳಲಿಲ್ಲ ಸದನದ ಒಪ್ಪಿಗೆ ತೆಗೆದುಕೊಳ್ಳದೇ ಏಕಾಏಕಿ ಶೇಕಡ ಒಂದರಿಂದ ಶೇಕಡ ಮೂರಕ್ಕೇರಿಸಬಿಟ್ಟಿರಿ. ಅದರಿಂದ ಬಹಳಷ್ಟು ನಮ್ಮ ರಾಜ್ಯದ ನಾಗರೀಕರಿಗೆ ಹಾಗೂ ವರ್ತಕರಿಗೆ ತೊಂದರೆಯಾಗಿದ್ದನ್ನು ನಾವು ಇವತ್ತು ನೋಡುತ್ತಿದ್ದೇವೆ ಅದರ ಪರಿಣಾಮಗಳನ್ನು ನಾವು ಇಂದು ನೋಡುತ್ತಿದ್ದೇವೆ. ಅದರ ಬಗ್ಗೆ ಸರ್ಕಾರ ಏನೂ ಹೇಳುತ್ತಿಲ್ಲ. ಮುಂದೆ ಜನವರಿ ತಿಂಗಳಲ್ಲಿ ರಸ್ತೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ನೆಪ ಹೇಳಿ ಕೃಷಿ ಉತ್ಪನ್ನ ಶೇಕಡ 15 ರಷ್ಟು ತೆರಿಗೆಯನ್ನು ಹೆಚ್ಚಿಗೆ ಮಾಡಿದಿರಿ. ಯಾವುವೆಂದರೆ ಪೆಟ್ರೋಲ್, ಮೋಟಾರ್ ವಾಹನ ಮತ್ತು ಸ್ಟ್ಯಾಂಪ್ ಡ್ಯೂಟಿ ಇದರ ಮೇಲೆ ಶೇಕಡ 15ರಷ್ಟು ಮೊನ್ನೆ ಜಾಸ್ತಿ ಮಾಡಿದಿರಿ. ನಂತರ ಕೃಷಿ ಉತ್ಪನ್ನ ಮಾರುಕಟ್ಟೆಯ ಮೇಲೆ ಶೇಕಡ 50 ರಷ್ಟು ಹೆಚ್ಚಿಗೆ ತೆರಿಗೆಯನ್ನು ಮಾಡಿದಿರಿ. ಅದರ ಬಗ್ಗೆ ಸರ್ಕಾರದ ಉತ್ತರ ಏನು? ಅದರಿಂದ ಇವತ್ತು ಆಯಾಯ ರಂಗಗಳ ಮೇಲಾದಂಥ ಭಾರ, ಇದರ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ? ಈಗ ಹೇಳಿದರು ನಾವು ಯಾವುದೇ ಹೊಸ ತೆರಿಗೆ ಇಲ್ಲದೇ ಬಜೆಟ್ ಮಂಡನೆ ಮಾಡಿದೆವು ಎಂದು ಹೇಳಿದರು. ಆದರೆ ಜನವರಿಯಲ್ಲಿ ಹೊಸದಾಗಿ ತೆರಿಗೆ ಹಾಕಿದಿರಿ, ಹಿಂದಿನ ಬಜೆಟ್ ಮಂಡನೆಯಾದ ಮೇಲೆ ಜೂನ್ ತಿಂಗಳಲ್ಲಿ ತೆರಿಗೆಯನ್ನು ಹೆಚ್ಚಿಗೆ ಮಾಡಿದಿರಿ. ಹೀಗಾಗಿ ಇವತ್ತು ನೀವು ಏನು ಹೊಸದಾಗಿ ತೆರಿಗೆ ಇಲ್ಲವೆಂದು ಏನು ಹೇಳುತ್ತೀರಿ, ಆದರೆ ಆ ತೆರಿಗೆಯ ಭಾರ ಈಗಾಗಲೇ ನಮ್ಮ ಜನರ ಮೇಲೆ ಬಿದ್ದಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ಎಲ್ಲಾ ತೆರಿಗೆಗಳಿಂದ ಮೂರು ಸಾವಿರ ಕೋಟಿ ರೂಪಾಯಿ ಹೆಚ್ಚಾಗುವುದು ಎಂದು ಹೇಳಿದಿರಿ, ಆದರೆ ಮೂರು ಸಾವಿರ ಕೋಟಿ ರೂಪಾಯಿ ಈ ತೆರಿಗೆಗಳಿಂದ ಜಾಸ್ತಿ ಆದಾಯ ನಮ್ಮ ರಾಜ್ಯಕ್ಕೆ ಬರುತ್ತದೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಇಷ್ಟು ಹಣದಲ್ಲಿ ಕೇವಲ 304 ಕೋಟಿ ರೂ ಮಾತ್ರ ಯೋಜನಾ ಹೂಡಿಕೆಗಳಿಗೆ, ಯೋಜನಾ ವೆಚ್ಚಗಳಿಗೆ, ನೀವು

ಹಣ ಕೊಡುತ್ತಿದ್ದೀರಿ, ಹಾಗಾದರೆ ಉಳಿದಿರುವ 2700 ಕೋಟಿ ರೂ. ಏನು ಇದೆ ಅದನ್ನು ಯೋಜನೇತರ ವೆಚ್ಚಕ್ಕೆ ನೀವು ಹಣ ಖರ್ಚು ಮಾಡುತ್ತಿದ್ದೀರಿ. 2700 ಕೋಟಿ ರೂಪಾಯಿ ನಾನ್‌ಪ್ಲಾನಿಂಗ್‌ಗೆ, ಕೇವಲ 304 ಕೋಟಿ ರೂಪಾಯಿ ಮಾತ್ರ ಪ್ಲಾನಿಂಗ್‌ಗೆ ಖರ್ಚು ಮಾಡುತ್ತಿದ್ದೀರಿ, ಹಾಗಾದರೆ ಈ ರೀತಿ ಮಾಡುವಂಥದ್ದು ಬಹಳ ದುರಂತ, ಒಂದು ಆರ್ಥಿಕ ದೃಷ್ಟಿಯಿಂದ, ಒಂದು ಆರ್ಥಿಕ ಬ್ಯಾಲೆನ್ಸ್ ದೃಷ್ಟಿಯಿಂದ ಇದು ಬಹಳ ದುರಂತ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹೀಗಾಗಿ ರಾಜ್ಯ ಸರ್ಕಾರ ಇವತ್ತೇನು ಈ ಬಜೆಟ್ ಮಂಡನೆ ಮಾಡಿದೆ. ಮತ್ತು ಕೇಂದ್ರ ಸರ್ಕಾರದ ಬಜೆಟ್ ಮಂಡನೆಯಾಗಿದೆ. ಕೇಂದ್ರ ಸರ್ಕಾರದ ಇವತ್ತಿನ ಸಾಧನೆಗಳಿಂದ, ಕೇಂದ್ರ ಸರ್ಕಾರದ ನಾಲ್ಕು ವರ್ಷಗಳ ಸಾಧನೆಯಿಂದ ಇವತ್ತು ವಿವಿಧ ರಂಗಗಳಲ್ಲಿ ಮಾಡಿದಂಥ ಪ್ರಗತಿಯಿಂದ, ಇವತ್ತೇನು ದೇಶದಲ್ಲಿ ಫೀಲ್ ಗುಡ್ ಫ್ಯಾಕ್ಟರ್ ಎನ್ನುವಂಥ ವಾತಾವರಣ ಸೃಷ್ಟಿಯಾಗಿದೆ. ಆದರೆ ನಿಮ್ಮ ಬಜೆಟ್ ಹಾಗೂ ನಾಲ್ಕು ವರ್ಷಗಳ ವೈಫಲ್ಯದಿಂದ ಫೀಲ್ ಬ್ಯಾಡ್ ಫ್ಯಾಕ್ಟರ್, ಫೀಲ್ ಬ್ಯಾಡ್ ಇವತ್ತು ಜನರಲ್ಲಿ ಆಗುತ್ತಿದೆ. ನಮ್ಮ ರಾಜ್ಯ ಸರ್ಕಾರದ ಬಗ್ಗೆ ಇವತ್ತು ಫೀಲ್ ಬ್ಯಾಡ್ ಎಂದು ಜನರಲ್ಲಿ ಅನ್ನಿಸುತ್ತಿದೆ. ಹೀಗಾಗಿ ಕೇಂದ್ರ ಸರ್ಕಾರಕ್ಕೂ ಹಾಗೂ ರಾಜ್ಯ ಸರ್ಕಾರದ ಆಡಳಿತಕ್ಕು ಏನು ವ್ಯತ್ಯಾಸ ಇದೆ ಎನ್ನುವುದು ಜನರಲ್ಲಿ ಭಾವನೆ ಬರುತ್ತಿದೆ. ಏನಾದರೂ ಮತ್ತೆ ಕೇಂದ್ರ ಸರ್ಕಾರಕ್ಕೆ ಹೋಗುವುದು, ಇವತ್ತು ಏನಾಗಿದೆ ಎಂದರೆ, ಬಹಳಷ್ಟು ತೊಂದರೆಯಾಯಿತು ಎಂದರೆ ಮತ್ತೆ ಕೇಂದ್ರ ಸರ್ಕಾರ, 'ಪುನಃ ಕೇಂದ್ರ ಸರ್ಕಾರದ ನೆರವು ತೆಗೆದುಕೊಳ್ಳುವುದು ಮತ್ತೆ ಬೆಳಿಗ್ಗೆಯಿಂದ ಸಂಜೆಯವರೆವಿಗೂ ಕೇಂದ್ರ ಸರ್ಕಾರವನ್ನು ಬಯ್ಯುವುದು. ಕೇಂದ್ರ ಸರ್ಕಾರ ಅದನ್ನು ಮಾಡಲಿಲ್ಲ. ಇದನ್ನು ಮಾಡಲಿಲ್ಲ. ಹೀಗೆ ಬಯ್ಯುವುದು ನಿಮಗೆ ಕಾಮನ್ ಆಗಿದೆ. ಆದರೆ ಅಪ್ರೀಸಿಯೇಷನ್ ನಿಮ್ಮ ಕಡೆಯಿಂದ ಬರುತ್ತಿಲ್ಲ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಇವರು ಫೀಲ್ ಗುಡ್ ಎಂದು ಹೇಳುತ್ತಾರೆ. ಅದೇನೋ ನಮಗೆ ಗೊತ್ತಿಲ್ಲ. ನಾವು ಹೇಳುವುದು ಏನೆಂದರೆ ಫೀಲ್ ಗಾಡ್ ಎಂದು ಹೇಳಬೇಕಷ್ಟೆ.

**ಶ್ರೀ ಜಗದೀಶ್ ಶೆಟ್ಟರ್** :– ಇವತ್ತು ಏನಾಗಿದೆ ಎಂದರೆ, ಫೀಲ್ ಗುಡ್ ಫ್ಯಾಕ್ಟರ್ ಒಬ್ಬ ಜನ ಸಾಮಾನ್ಯ ಸಹಿತ ಫೀಲ್ ಗುಡ್ ಫ್ಯಾಕ್ಟರ್ ಆ ಅನುಭವ ಇವತ್ತು ಜನರಿಗೆ ಬರುತ್ತಿದೆ. ಆದರೆ ಕಾಂಗ್ರೆಸ್‌ನವರಿಗೆ ಆ ರೀತಿ ಅನ್ನಿಸುವುದೇ ಇಲ್ಲ. ಏಕೆಂದರೆ, ಅವರೆಲ್ಲಾ ಬ್ಯಾಡ್ ನೋಡಿದ್ದಾರೆ. ಇಷ್ಟು ವರ್ಷಗಳ ಕಾಲ ರಾಷ್ಟ್ರದ ಆಳ್ವಿಕೆ ಮಾಡಿದರು ಅದರೂ ಅವರಿಗೆ ಆ ಫೀಲ್ ಗುಡ್ ಫ್ಯಾಕ್ಟರ್ ವಾತಾವರಣ ಸೃಷ್ಟಿ ಮಾಡಲಿಕ್ಕೆ ಆಗಲಿಲ್ಲ. ಹೀಗಾಗಿ ಅವರಿಗೆ ಏನು ಮಾಡಿದರೂ ಅದು ಫೀಲ್ ಬ್ಯಾಡ್ ಎಂದು ಅನ್ನಿಸುತ್ತದೆ. ಇವತ್ತು ರಾಜ್ಯ ಸರ್ಕಾರ ಕೂಡ ಫೀಲ್ ಬ್ಯಾಡ್ ಎನ್ನುವಂಥ ವಾತಾವರಣ ರಾಜ್ಯದಲ್ಲಿ ಇದೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

**ಛೇರ್ಮನ್** :– ಮಾನ್ಯ ಶೆಟ್ಟರ್ ಅವರೇ ಈಗ ಊಟದ ವೇಳೆಯಾಯಿತು ಈಗ ಸಭೆಯು ಮುಂದೂಡಲ್ಪಟ್ಟು ಮತ್ತೆ ಮೂರು ಗಂಟೆಗೆ ಸೇರುವುದು.

(ಸಭೆಯು ಒಂದು ಗಂಟೆ ಮೂವತ್ತಾರು ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮೂರು ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

**ಸದನವು ಮಧ್ಯಾಹ್ನ 3.30 ನಿಮಿಷಕ್ಕೆ ಸಮಾವೇಶಗೊಂಡಿತು**

**ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.**

**ವಿತ್ತೀಯ ಕಾರ್ಯಕಲಾಪಗಳು 2004-05ನೇ ಆಯವ್ಯಯ ಅಂದಾಜಿನ ಮೇಲೆ ಸಾಮಾನ್ಯ ಚರ್ಚೆ (ಮುಂದುವರಿದುದು)**

† **ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** :- ಈ ಒಂದು ಬಜೆಟ್ ಬಗ್ಗೆ ಮೊದಲು ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿರುವ ಸಂದರ್ಭದಲ್ಲಿ ರಾಜ್ಯದ ನಿರೀಕ್ಷಿತ ಜಮೆ ಮೂರು ಸಾವಿರ ಕೋಟಿ ರೂಪಾಯಿಗಳ ಬಗ್ಗೆ ಹೇಳಿದ್ದೇನೆ. ಆದರೆ ಪ್ಲಾನಿಂಗ್ ಎಕ್ಸಪೆನ್ಸಸ್ ಎಂದು ಕೇವಲ 304 ಕೋಟಿ ರೂಪಾಯಿಗಳೆಂದು ತೋರಿಸುತ್ತಿದ್ದಾರೆ ಮತ್ತು ಉಳಿದ 2700 ಕೋಟಿ ರೂಪಾಯಿಗಳ ಬಾಕಿ ಬಗ್ಗೆ ಬಜೆಟಿನಲ್ಲಿ ಸ್ಪಷ್ಟತೆ ಇಲ್ಲ. ಪ್ಲಾನಿಂಗ್ ಎಕ್ಸಪೆಂಡಿಚರ್ ಸಲುವಾಗಿ ಕೇವಲ 304 ಕೋಟಿ ರೂಪಾಯಿ, ಆದರೆ ಉಳಿದ 2,400 ಕೋಟಿ ರೂಪಾಯಿಗಳ ಬಗ್ಗೆ ಏನಾಯಿತು ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. ಮುಂಗಡ ಪತ್ರದಲ್ಲಿ 3,426 ಕೋಟಿ ರೂಪಾಯಿಗಳು ಹಾಗೂ ಮುಂದಿನ ವರ್ಷ 4,819 ಕೋಟಿ ರೂಪಾಯಿಗಳು ತೆರಿಗೆಯೇತರ ಸಂಪನ್ಮೂಲ ಬರುವುದಾಗಿ ತಿಳಿಸಿದ್ದಾರೆ. ಆದರೆ 4,819 ಕೋಟಿ ರೂಪಾಯಿಗಳು ಯಾವುದು? ಎಲ್ಲಿಂದ ಈ ಹಣ ಬರುತ್ತದೆಂಬ ಬಗ್ಗೆ ಸ್ಪಷ್ಟತೆ ಇಲ್ಲ. ಯಾವ ಆದಾಯದಿಂದ ಬರುತ್ತಿದೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟತೆಯನ್ನು ಬಜೆಟ್ಟಿನಲ್ಲಿ ಎಲ್ಲಿಯೂ ನೀಡಿಲ್ಲ. ಹೀಗಾಗಿ ಇದು ಯಾವ ತೆರಿಗೆ ಎಂಬ ಬಗ್ಗೆ ಸ್ಪಷ್ಟತೆಯನ್ನು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇವತ್ತು ತಿಳಿಸಬೇಕಾಗುತ್ತದೆ. ಜೂನ್ ಒಂದನೇ ತಾರೀಖು ಕೆಲವೊಂದು ಶೇಕಡ 1 ರಿಂದ 3 ರಷ್ಟು ತೆರಿಗೆಯನ್ನು ಇನ್‌ಕ್ರೀಸ್ ಮಾಡಿದ ಬಗ್ಗೆ ಮತ್ತು ಶೇಕಡ 15ರಷ್ಟು ಎ.ಪಿ.ಎಂ.ಸಿ. ಸೆಸ್ ಇನ್‌ಕ್ರೀಸ್ ಮಾಡಿರುವ ಬಗ್ಗೆ ಹೀಗೆ ಕೆಲವೊಂದು ವಿಷಯಗಳನ್ನು ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ರಾಜ್ಯದ ಸಾಲ ಮುವತ್ತೊಂದು ಸಾವಿರ ಕೋಟಿ ರೂಪಾಯಿಗಳು ಇದೆ. ಈಗಾಗಲೇ ಸಾಕಷ್ಟು ಸಾಲವನ್ನು ಮಾಡಿದ್ದೇವೆ, ಮತ್ತೆ ಹೊಸ ಸಾಲವನ್ನು ಮಾಡುವ ಅವಶ್ಯಕತೆ ಇಲ್ಲವೆಂಬ ಮಾತನ್ನು ಹೇಳಿ, ವಿಶ್ವಬ್ಯಾಂಕ್‌ನಿಂದ ಸಾಲವನ್ನು ಪಡೆಯುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಹಲವಾರು ಅಡೆತಡೆಗಳನ್ನು ಮಾಡಿದೆ ಎಂದು ಕೇಂದ್ರ ಸರ್ಕಾರನ್ನು ಮಾನ್ಯಮುಖ್ಯಮಂತ್ರಿಗಳು ಟೀಕೆ ಮಾಡಿದ್ದಾರೆ. ಆದರೆ ಇವತ್ತು ಕೇಂದ್ರಸರ್ಕಾರವನ್ನು ಟೀಕೆ ಮಾಡಲಿಕ್ಕೆ ಯಾವುದೇ ವಿಷಯಗಳಿಲ್ಲ. ಆದರೆ ಇವತ್ತು ವಿನಾಕಾರಣ ಚುನಾವಣಾ ಬರುತ್ತಿದೆ ಎಂಬ ದೃಷ್ಟಿಕೋನದಲ್ಲಿ ಕೇಂದ್ರಸರ್ಕಾರವು ಅಡೆತಡೆ ಮಾಡಿದೆ ಎಂದು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರವು ಯಾವ ವಿಷಯದಲ್ಲಿ ಅಡೆತಡೆ ಮಾಡಿದ್ದಾರೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಸ್ಪಷ್ಟೀಕರಣ ಮಾಡಬೇಕಾಗಿದೆ. ಏಕೆಂದರೆ ಈಗಾಗಲೇ ಸರ್ಕಾರದ ದಾಖಲೆಯ ಪ್ರಕಾರವೇ ರಾಜ್ಯ ಸರ್ಕಾರದ ಸಾಲ ಈಗ ಮುವತ್ತೊಂದು ಸಾವಿರ ಕೋಟಿ ರೂಪಾಯಿಗಳು, ಮತ್ತು ಒಂದು ಕಡೆ ನಾವು ಈಗ ಹೊಸ ಸಾಲ ಮಾಡುವ ಪರಿಸ್ಥಿತಿಯಲ್ಲಿಲ್ಲ. ವಿಶ್ವಬ್ಯಾಂಕ್‌ನಿಂದ ಸಾಲವನ್ನು ಪಡೆಯುವುದಿಲ್ಲ. ಈಗಾಗಲೇ ರಾಷ್ಟ್ರೀಕೃತ ಬ್ಯಾಂಕ್‌ಗಳು, ಹಲವಾರು ಆರ್ಥಿಕ ಸಂಸ್ಥೆಗಳು ಸಾಲವನ್ನು ಕೊಡಲಿಕ್ಕೆ ಕ್ಯೂ ಹಚ್ಚಿ ನಿಂತಿದ್ದಾರೆ ಹೀಗಾಗಿ ವಿಶ್ವಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲವೆಂದು ಮೂರು

---

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

– ನಾಲ್ಕು ತಿಂಗಳುಗಳ ಹಿಂದೆ ಮುಖ್ಯಮಂತ್ರಿಗಳು ನೀಡಿದ ಪತ್ರಿಕಾ ಹೇಳಿಕೆ ಪತ್ರಿಕೆಗಳಲ್ಲಿ ಬಂದಿತ್ತು. ಹಾಗಾದರೆ ಈ ಬಜೆಟಿನಲ್ಲಿ ಕೇಂದ್ರಸರ್ಕಾರದ ಬಗ್ಗೆ ಈ ಟೀಕೆ ಏಕೆ ಎನ್ನುವ ಬಗ್ಗೆ ಸ್ಪಷ್ಟೀಕರಣವನ್ನು ಮುಖ್ಯಮಂತ್ರಿಗಳು ನೀಡಬೇಕಾಗುತ್ತದೆ. ಮುವತ್ತೊಂದು ಸಾವಿರ ಕೋಟಿ ರೂಪಾಯಿಗಳ ಸಾಲದ ಮರುಪಾವತಿ ತುಂಬುವ ಬಗ್ಗೆ ಬಡ್ಡಿ ತುಂಬುವ ಬಗ್ಗೆ ರಾಜ್ಯಸರ್ಕಾರ ಯೋಜನೆ ಏನು? ಈಗಾಗಲೇ ಎಷ್ಟು ಮರುಪಾವತಿ ಆಗಿದೆ? ಮುಂದಿನ ಮರುಪಾವತಿಯ ಚಿಂತನೆ ಹೇಗೆ ಮುಂದಿನ ದಿಕ್ಸೂಚಿ ಹೇಗೆ? ಇದರ ಬಗ್ಗೆ ಸ್ಪಷ್ಟನೆಯನ್ನು ಇವತ್ತು ಹೇಳಿಲ್ಲ. ಹೀಗಾಗಿ ಒಂದು ಕಡೆ ಸಾಲ ಮಾಡುವ ಅವಶ್ಯಕತೆ ಇಲ್ಲವೆಂದು ಹೇಳುವುದು, ಮತ್ತೊಂದು ಕಡೆ ವಿಶ್ವಬ್ಯಾಂಕ್‌ನಿಂದ ಸಾಲ ಪಡೆಯುವಾಗ ಕೇಂದ್ರ ಸರ್ಕಾರವು ಅಡೆತಡೆ ಮಾಡಿದೆ ಎಂದು ಬಜೆಟಿನಲ್ಲಿ ಹೇಳುವುದು. ಅಂದರೆ ಕೇವಲ ಕೇಂದ್ರಸರ್ಕಾರವನ್ನು ಟೀಕೆ ಮಾಡುತ್ತಾ, ಚುನಾವಣೆ ಹಿನ್ನೆಲೆಯಲ್ಲಿ ಈ ಟೀಕೆ ಮಾಡಿದ್ದಾರೆ ವಿನಃ ಇದರಲ್ಲಿ ಬೇರೆ ಅರ್ಥವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೇಂದ್ರಸರ್ಕಾರ ಇವತ್ತು ಎಷ್ಟೋ ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಇರಬಹುದು, ಕುಡಿಯುವ ನೀರಿನ ಯೋಜನೆಗಳು ಇರಬಹುದು, ಇದಕ್ಕಾಗಿ ಕೇಂದ್ರಸರ್ಕಾರ ನೀಡಿದ ಅನುದಾನವನ್ನು ರಾಜ್ಯಸರ್ಕಾರ ಸರಿಯಾಗಿ ಉಪಯೋಗಿಸಿಲ್ಲವೆಂಬ ಪರಿಸ್ಥಿತಿಯಲ್ಲಿದೆ ಎಂಬ ಬಗ್ಗೆ ಹಿಂದಿನ ಸದನದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಕೊಟ್ಟಿದ್ದೇವೆ. ಬಂದಂಥ ಅನುದಾನವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲಾರದಂಥ ಸರ್ಕಾರ ಇದು. ಇನ್ನು ಹೊಸದಾಗಿ ಸಾಲ ಮಾಡವಂಥಾದ್ದಕ್ಕೆ ಅರ್ಥ ಇಲ್ಲ ಎನ್ನುವಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಮತ್ತೊಂದು ಇಲ್ಲಿ ಪ್ರಮುಖವಾಗಿ ನಾನು ಪ್ರಸ್ತಾಪ ಮಾಡುವಂಥಾದ್ದು ಏನೆಂದರೆ ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರ ಏನು ಹೇಳಿತ್ತು? ಬಜೆಟ್‌ನಲ್ಲಿ ಏನು ಯೋಜನೆಗಳನ್ನು ಹಾಕಿಕೊಂಡಿತ್ತು ಮತ್ತು ಇವತ್ತು ಅದರ ಫಲಿತಾಂಶ ಏನಾಗಿದೆ? ಇದರ ಬಗ್ಗೆಯೂ ಕೂಡ ಇವತ್ತು ಕಂಪೇರಿಟಿವ್ ಸ್ಟಡಿ ಮಾಡಬೇಕಾಗುತ್ತದೆ. ಅಂದಾಗ ಸರ್ಕಾರದ ನಿಜವಾದ ಒಂದು ಸ್ಪಷ್ಟತೆ, ಸರ್ಕಾರದ ಪ್ರಾಮಾಣಿಕತನದ ಬಗ್ಗೆ ನಾವು ಏನಾದರೂ ಒಂದು ನಿರ್ಧಾರಕ್ಕೆ ಬರಲಿಕ್ಕೆ ಸಾಧ್ಯತೆ ಇದೆ. 2000–01ರ ಬಜೆಟ್‌ನಲ್ಲಿ ಕೆಲವೊಂದು ನೀರಾವರಿ ಯೋಜನೆಗಳ ಬಗ್ಗೆ ಸರ್ಕಾರ ಹೇಳಿದ್ದು ಏನು? 2000–01ರ ಬಜೆಟ್‌ನಲ್ಲಿ ಬೆಣ್ಣೆತೊರೆ, ಮುಲ್ಲಾಮಾರಿ ಇತ್ಯಾದಿ ಯೋಜನೆಯನ್ನು ಮಾರ್ಚ್ 31ರೊಳಗಾಗಿ ಕಾರ್ಯಾರಂಭ ಮಾಡಲಿವೆ ಎಂದು ಹೇಳಿದರು. ಇವು ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬರುವಂಥಾದ್ದು. ಮುಂದೆ 2002–03ನೇ ಸಾಲಿನ ಬಜೆಟ್‌ನಲ್ಲಿ ಬೆಣ್ಣೆತೊರೆ–ಮುಲ್ಲಾಮರಿ ಇತ್ಯಾದಿ ಯೋಜನೆಗಳನ್ನು 2002–03ನೇ ಸಾಲಿನಲ್ಲಿ ಸಮರ್ಪಿಸುವುದು ಎಂದರು. ಆದರೆ ಸಮರ್ಪಣೆ ಆಗಲಿಲ್ಲ. 2003–04ರ ಬಜೆಟ್‌ನಲ್ಲಿ ಇದನ್ನು ಮತ್ತೆ ರೆಫರ್ ಮಾಡುತ್ತಾರೆ. ಮುಲ್ಲಾಮಾರಿ ಮತ್ತು ಬೆಣ್ಣೆತೊರೆ ಯೋಜನೆಗಳನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವರ್ಗಾಯಿಸಿ 2003–04ನೇ ಸಾಲಿನಲ್ಲಿ ಸಂಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದಾರೆ ಅಂದರೆ ಮೂರು ವರ್ಷಗಳಿಂದ ಸತತವಾಗಿ ಈ ಯೋಜನೆ ಬಗ್ಗೆ ಹೇಳಿದರು. ಆದರೆ ಫಲಿತಾಂಶ ಮಾತ್ರ ಶೂನ್ಯ. ಮುಂದೆ ಜಲಸಂವರ್ಧನ ಯೋಜನೆ. ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಮಾಡಿ ಈ ಜಲ ಸಂವರ್ಧನ ಯೋಜನೆಯನ್ನು ಮುಖ್ಯಮಂತ್ರಿಗಳು ಜಾರಿಗೆ ತಂದರು. 'ವಿಶ್ವಬ್ಯಾಂಕಿನ ನೆರವಿನಿಂದ ಜಲಸಂವರ್ಧನ ಯೋಜನೆ" ಇದು 2000–01ರ ಬಜೆಟ್‌ನಲ್ಲಿ ಹೇಳಿದ್ದು. 'ವಿಶ್ವಬ್ಯಾಂಕ್ ನೆರವಿನಿಂದ ಜಲಸಂವರ್ಧನ ಎನ್ನುವ

ಯೋಜನೆಯನ್ನು ರೂಪಿಸಲಾಗಿದೆ. ಆರಂಭಿಕವಾಗಿ ಈ ಯೋಜನೆಯಡಿ 25 ಸಾವಿರ ಕೆರೆಗಳ ಹೂಳು ತೆಗೆದು ಮುಂದಿನ ಐದು ವರ್ಷಗಳಲ್ಲಿ ಪುನರುಜ್ಜೀವನಗೊಳಿಸಲಾಗುವುದು' ಎಂದು ಇದನ್ನು 2000–01ರ ಬಜೆಟ್‌ನಲ್ಲಿ ಹೇಳಿದರು. ಎಂದರೆ 25 ಸಾವಿರ ಕೆರೆಗಳು ಎಂದು ಹೇಳಿದ್ದು ಮುಂದೆ ಏನಾಯಿತು? 2001–02ರ ಬಜೆಟ್‌ನಲ್ಲಿ 'ಕಳೆದವರ್ಷ ನಾನು ಜಲಸಂವರ್ಧನ ಯೋಜನೆಯನ್ನು ಜಾರಿಗೊಳಿಸಿದ್ದನ್ನು ಗೌರವಾನ್ವಿತ ಸದಸ್ಯರು ನೆನಪು ಮಾಡಿಕೊಳ್ಳಬಹುದು. ಜಲಸಂವರ್ಧನ ಸಂಘವನ್ನು ನೋಂದಾಯಿಸಲಾಗಿದೆ. ಐದುಸಾವಿರ ಗ್ರಾಮ ಕೆರೆಗಳ ಪುನಶ್ಚೇತನವನ್ನು ಮುಂಬರುವ ಐದು ವರ್ಷಗಳಲ್ಲಿ ಒಟ್ಟಾರೆ ಒಂದು ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು' ಎಂದು ಹೇಳಿದರು. ಮೊದಲು ಹೇಳಿದ್ದು 25 ಸಾವಿರ ಕೆರೆಗಳು. ಒಂದೇ ವರ್ಷದ ಬಜೆಟ್‌ನಲ್ಲಿ ಅದು ಐದು ಸಾವಿರಕ್ಕೆ ಇಳಿಯಿತು. ಅಂದರೆ ಇವರು ಯಾವ ರೀತಿ ಸರ್ಕಾರವನ್ನು ನಡೆಸುತ್ತಿದ್ದಾರೆ? ಇದು ಜನರಿಗೆ ಮರಳು ಮಾಡುವಂಥಾದ್ದು. ನಾನು ಏಕೆ ಮೊದಲು ಇದು ಚುನಾವಣಾ ಬಜೆಟ್ ಎಂದು ಏಕೆ ಹೇಳಿದೆನೆಂದರೆ ಇದು ಕೇವಲ ಸುಳ್ಳು ಭರವಸೆಗಳನ್ನು ಜನರಿಗೆ ಕೊಡುವುದು ಆಗಿದೆ. ಇನ್ನು ಎರಡು ತಿಂಗಳಲ್ಲಿ ಚುನಾವಣೆಗೆ ಹೋಗುತ್ತಿದ್ದಾರೆ. ನೂರೆಂಟು ಕನಸುಗಳನ್ನು ಜನರಿಗೆ ಕೊಟ್ಟು ಹಾಗೆಯೇ ಇವರು ಹೋಗಿಬಿಡುವುದು. ಆದರೆ ಇದು ಏನೂ ಆಗುವುದಿಲ್ಲ. ಇಲ್ಲಿ ಬಜೆಟ್‌ನಲ್ಲಿ ಇದ್ದುದನ್ನು, ನಾಲ್ಕು ವರ್ಷಗಳ ಹಿಂದೆ ಹೇಳಿದ್ದನ್ನು ಇವರಿಗೆ ಮಾಡುವುದಕ್ಕೆ ಆಗಲಿಲ್ಲ. 25 ಸಾವಿರ ಕೆರೆ ಇದ್ದದ್ದು ಅದು ನಂತರ ಐದು ಸಾವಿರಕ್ಕೆ ಇಳಿಯಿತು. ಹೋಗಲಿ, ಈ ಐದು ಸಾವಿರ ಕೆರೆಗಳನ್ನಾದರೂ ಮಾಡಿದರಾ? ಅದೂ ಇಲ್ಲ. 2002–03ರ ಬಜೆಟ್‌ನಲ್ಲಿ ಹೇಳುತ್ತಾರೆ – 'ಸಮುದಾಯದ ಸಹಭಾಗಿತ್ವದೊಂದಿಗೆ ಜಲಸಂವರ್ಧನ ಯೋಜನಾ ಸಂಘವನ್ನು ಸ್ಥಾಪಿಸಲಾಗಿದೆ. ಅನುಸರಣಾ ವರದಿ, ಜನಗಳ ಸಹಭಾಗಿತ್ವದೊಂದಿಗೆ ಕೆರೆಗಳ ಪುನರುಜ್ಜೀವನಗೊಳಿಸುವ ಕಾರ್ಯವನ್ನು ಕೈಗೊಂಡಿದ್ದು 26 ಕೆರೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಎಂದು ಇದೆ. ಅಂದರೆ ಮೊದಲು ಇಪ್ಪತ್ತೈದು ಸಾವಿರ ಕೆರೆಗಳು, ನಂತರ ಐದು ಸಾವಿರ ಕೆರೆಗಳು, ಮುಂದೆ ಕೇವಲ ಇಪ್ಪತ್ತಾರು ಕೆರೆಗಳು. ಈ ಸರ್ಕಾರ ಯಾವರೀತಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ ಸಾಕು.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಮಾನ್ಯ ವಿರೋಧಪಕ್ಷದ ನಾಯಕರೇ, ತಪ್ಪು ಮಾಹಿತಿ ಹೋಗಬಾರದು. ಮಾನ್ಯ ಅಧ್ಯಕ್ಷರೆ, ತಮಗೂ ಕೂಡ ಅದು ಗೊತ್ತಿದೆ. ಏಕೆಂದರೆ ಜಲಸಂವರ್ಧನೆ ಯೋಜನೆಯಲ್ಲಿ ಒಂದು ಸಾವಿರ ಕೆರೆಗಳು ಇದ್ದು ಅದರಲ್ಲಿ ಐದುನೂರು ಕೆರೆಗಳು ಕೇವಲ ಕೋಲಾರ ಜಿಲ್ಲೆಯೊಂದರಲ್ಲೇ ಇವೆ.

**ಅಧ್ಯಕ್ಷರು** :– ಒಟ್ಟು 2024 ಕೆರೆಗಳು.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಅದು ಒಟ್ಟು ತೆಗೆದುಕೊಳ್ಳತಕ್ಕಂಥಾದ್ದು. ಅದರಲ್ಲಿ ಒಂದು ಸಾವಿರ ಕೆರೆಗಳಲ್ಲಿ ಪ್ರಥಮ ಹಂತದಲ್ಲಿ ಐದು ನೂರು ಕೆರೆಗಳು ಕೋಲಾರ ಜಿಲ್ಲೆಯೊಂದರಲ್ಲೇ ಇವೆ. ಉಳಿದಂಥ ಎಂಟು ಜಿಲ್ಲೆಗಳಲ್ಲಿ ಅವು ಕೆಲವು ಕಡೆ ಹತ್ತು – ಐದು ಈ ರೀತಿಯಾಗಿವೆ ಮತ್ತು ಕೆಲವು ಕಡೆ ಮೂರು ಇವೆ. ಅದು ಕೊಪ್ಪಳ ಇರಬಹುದು. ತುಮಕೂರು ಇರಬಹುದು ಅಥವಾ ಬೇರೆಬೇರೆ ಕಡೆ ಇರಬಹುದು. ಅದು ವರ್ಲ್ಡ್‌ಬ್ಯಾಂಕ್ ಸಹಾಯದಲ್ಲಿ ತೆಗೆದುಕೊಂಡಿರುವಂಥಾದ್ದು.

ಇದನ್ನು ಮೂರು ಹಂತಗಳಲ್ಲಿ ಹಂತಹಂತವಾಗಿ ತೆಗೆದುಕೊಳ್ಳಬೇಕೆಂದು ಇದ್ದು ಹೋದವರ್ಷ ಒಂದುನೂರು ಕೆರೆ ಮತ್ತು ಈ ವರ್ಷ ಇನ್ನೂರು ಕೆರೆಗಳು ಅದನ್ನು ಎನ್‌ಜಿಓಗಳ ಮುಖಾಂತರ ತೆಗೆದುಕೊಳ್ಳಲಾಗಿದ್ದು, ಇದು ಯಾವುದೇ ಇಲಾಖೆಯ ಮೂಲಕ ಅಲ್ಲ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರು ಇದ್ದಾರೆ. ಅವರ ನೇತೃತ್ವದಲ್ಲೇ ಇದು ನಡೆಯತಕ್ಕಂಥಾದ್ದು. ಅದಕ್ಕೆ ಎನ್.ಜಿ.ಓ.ಗಳು ಎಲ್ಲಿ ಆಕ್ಟೀವ್ ಆಗಿ ಬಂದಿದ್ದಾರೆ, ಅಲ್ಲಿ ಆ ಕೆಲಸ ಪ್ರಾರಂಭವಾಗಿದೆ. ಎಲ್ಲಿ ಎನ್.ಜಿ.ಓ.ಗಳು ಸ್ವಲ್ಪ ಹಿಂದೇಟು ಹಾಕುತ್ತಿದ್ದಾರೆ. ಅಲ್ಲಿ ನಿಧಾನವಾಗಿದೆ. ಏಕೆಂದರೆ ಅವರು ಸುಮಾರು ಐದು ಪರ್ಸೆಂಟ್ – ಹತ್ತು ಪರ್ಸೆಂಟ್.........

**ಅಧ್ಯಕ್ಷರು** :– ಒಟ್ಟು 12 ಪರ್ಸೆಂಟ್ ಕಟ್ಟಬೇಕು. ಯಾರೂ ಮುಂದೆ ಬರುತ್ತಿಲ್ಲ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಅಷ್ಟು ಅವರು ಕಾಂಟ್ರಿಬ್ಯೂಶನ್ ಕೊಡಬೇಕೆಂದು ಇದೆ. ಅದಕ್ಕಾಗಿ ಎನ್.ಜಿ.ಓ.ಗಳು ಬರಲಾರದ್ದಕ್ಕೆ ಹಿಂದೇಟು ಆಗಿದೆ. ಅದಕ್ಕಾಗಿ ಇದು 25 ಸಾವಿರ ಕೆರೆಗಳಿಗೆ ಹೋಲಿಸತಕ್ಕದ್ದು, ಮತ್ತು ನೀವು ಹೇಳತಕ್ಕದ್ದಕ್ಕೂ ಸಂಬಂಧ ಇಲ್ಲ. ಜಲಸಂವರ್ಧನ ಯೋಜನೆ ಏನಿದೆ ಅದು ಪ್ರತ್ಯೇಕವಾದ ಯೋಜನೆ. ವರ್ಲ್ಡ್ ಬ್ಯಾಂಕ್‌ನ ಅಸಿಸ್ಟೆನ್ಸ್‌ನಲ್ಲಿ ಇದು ಸಿಕ್ಕಿದ್ದು ಸುಮಾರು 635 ಕೋಟಿ ರೂಪಾಯಿಗಳ ಯೋಜನೆ ಇದು. ಸುಮಾರು ಮುನ್ನೂರು ಕೋಟಿ ರೂನಲ್ಲಿ ಹೆಚ್ಚು ಕಡಿಮೆ ಅಗ್ರಿಕಲ್ಚರ್ ಯೂನಿವರ್ಸಿಟಿ, ಧಾರವಾಡ, ಬೆಂಗಳೂರು ಮತ್ತು ಎನ್.ಜಿ.ಓ.ಗಳು ಇವರು ಎಲ್ಲರೂ ಸೇರಿ ರಿಪೋರ್ಟ್ ತಯಾರು ಮಾಡತಕ್ಕಂಥಾದ್ದಕ್ಕೆ, ರೀಸರ್ಚ್ ಮಾಡತಕ್ಕಂಥಾದ್ದಕ್ಕೆ ಆ ಹಣವನ್ನು ಕೊಟ್ಟಿದ್ದಾರೆ. ಉಳಿದ 635 ಕೋಟಿ ರೂಪಾಯಿಗಳನ್ನು ಇಂಪ್ರೂವ್‌ಮೆಂಟ್‌ಗೆ ಕೊಟ್ಟಿದ್ದಾರೆ. ಅದರಲ್ಲಿ ತೋಟಗಾರಿಕೆ, ಕೃಷಿ ಮತ್ತು ಸಾಮಾಜಿಕ ಚಟುವಟಿಕೆ ಇವೆಲ್ಲಾ ಅದರಲ್ಲಿ ಬಂದಿವೆ. ಅದಕ್ಕಾಗಿ ತಾವು ದಯಮಾಡಿ ಒಂದು ಕಡೆ ಹೋಗಿ ಇನ್ನೊಂದು ಕಡೆ ಹೋಲಿಸುವುದಕ್ಕೆ ಹೋಗಬೇಡಿ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಟೀಕೆ ಮಾಡಿದರು ಅಂತ ಹೇಳಿ ಇದೆಲ್ಲಾ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಮಾನ್ಯ ಮುಖ್ಯಮಂತ್ರಿಗಳು ಟೀಕೆ ಮಾಡಿದ್ದು ಯಾವುದರ ಮೇಲೆಂದರೆ ವರ್ಲ್ಡ್ ಬ್ಯಾಂಕ್‌ನಿಂದ ನಮ್ಮ ಕೆ.ಪಿ.ಟಿ.ಸಿ.ಎಲ್. ಇಂಪ್ರೂವ್‌ಮೆಂಟ್‌ಗೆ ಒಂದು ಸಾವಿರ ಕೋಟಿ ರೂಪಾಯಿಗಳ ಸಹಾಯ ಮಾಡಬೇಕು. ಒಂದು ಲೋನ್ ಕೊಡುತ್ತೇವೆ ಎನ್ನತಕ್ಕಂಥಾದ್ದು ಇತ್ತು. ಅದು ನಾಲ್ಕು–ಐದು ಪರ್ಸೆಂಟ್‌ನಷ್ಟು ಬಹಳ ಕಡಿಮೆ ಬಡ್ಡಿದರದಲ್ಲಿ ಇರುವಂಥ ಸಾಲ. ಈ ರೀತಿಯಾಗಿ ನಮಗೆ ಕೊಡುತ್ತೇವೆ ಅನ್ನತಕ್ಕಂಥಾದ್ದನ್ನು ಕೊಡಿಸಿಕೊಡಲಿಲ್ಲ. ಆದರೆ ನಮಗಿಂತ ಹಿಂದಿದ್ದ ಆಂಧ್ರಪ್ರದೇಶದವರು ಮುತುವರ್ಜಿ ವಹಿಸಿಕೊಂಡು, ಅವರ ಬೆಂಬಲ ತೆಗೆದುಕೊಂಡು ಅವರು ಅದನ್ನು ತೆಗೆದುಕೊಂಡು ಹೋದರು. ನಮಗೆ ಮಾತ್ರ ಡಿನೈ ಮಾಡಿದರು. ಈ ಮಾತಿನಲ್ಲಿ ಅವರು ಹೇಳಿದ್ದಾರೆಯೇ ಹೊರತಾಗಿ ಟೀಕೆ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಟೀಕೆ ಮಾಡಿಲ್ಲ. ನ್ಯಾಯವಾಗಿ ನೀವು ಆಂಧ್ರಕ್ಕೆ ಕೊಟ್ಟಿರಿ, ನಮಗೆ ಕೊಡಲಿಲ್ಲ. ಅದೇರೀತಿಯಾಗಿ 45 ಲಕ್ಷ ಮೆಟ್ರಿಕ್ ಟನ್ ಅವರಿಗೆ ಕೊಟ್ಟಿರಿ, ನಮಗೆ ಬರೇ 9 ಲಕ್ಷ ಮೆಟ್ರಿಕ್ ಟನ್ ಕೊಟ್ಟಿರಿ. ಇದು ಅವರು ಮಾಡಿದ ಟೀಕೆ ಹೊರತಾಗಿ ನಾವು 2880 ಕೋಟಿ ರೂಪಾಯಿಗಳ ಮೆಮೊರಾಂಡಮ್‌ನ್ನು ಕೊಟ್ಟೆವು. ನಮಗೆ ಒಂದು ನಯಾಪೈಸೆಯೂ ಇಲ್ಲ. ಆದರೆ ಬಾಕಿಯವರ ಜೋಳಿಗೆ ಎಲ್ಲಾ ತುಂಬಿ ಹೋಯಿತು

ಎನ್ನುವಂಥ ಮಾತನ್ನು ಹೇಳಿದ್ದಾರೆಯೇ ಹೊರತಾಗಿ ಬರೀ ಟೀಕೆ ಮಾಡಬೇಕು ಎಂದು ಅವರು ಟೀಕೆ ಮಾಡಿಲ್ಲ.

**ಶ್ರೀ ಜಗದೀಶ್ ಶೆಟ್ಟರ್** :– ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಏನು ಬಜೆಟ್‌ನಲ್ಲಿ ಹೇಳಿದ್ದಾರೆ ಅದನ್ನು ನಾನು ರೆಫರ್ ಮಾಡುತ್ತಿದ್ದೇನೆ. ಅವರು ಯಾವರೀತಿ ಸುಳ್ಳು ಮಾಹಿತಿಗಳನ್ನು ಬಜೆಟ್‌ನಲ್ಲಿ ಕೊಡುತ್ತಿದ್ದಾರೆ, ಈ ಸರ್ಕಾರ ಕೊಡುತ್ತಿದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ಖರ್ಗೆಯವರು ಇದರ ಬಗ್ಗೆ ಆ ರೀತಿ, ಈ ರೀತಿ ಅಂತ ಹೇಳಿ ಏನೋ ಡಿಫೆಂಡ್ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಇವತ್ತು ಬಜೆಟ್‌ನಲ್ಲಿ ಇರುವಂಥ ಫ್ಯಾಕ್ಟ್ಸ್ ಏನಿವೆ ಅದನ್ನು ಮರೆಮಾಚುವುದಕ್ಕೆ ಯಾರ ಕಡೆಯಿಂದಲೂ ಆಗುವುದಿಲ್ಲ. ಹಾಗಾದರೆ 25 ಸಾವಿರ ಕೆರೆಗಳು ಅಂತ ಮೊದಲು ಏಕೆ ಹೇಳಬೇಕಾಗಿತ್ತು ಕಡೆಗೆ ಐದು ಸಾವಿರ ಕೆರೆಗೆ ಬಂದಿರಿ. ಅದು ಯಾಕೆ ಬಂದಿರಿ? ಇದರ ಬಗ್ಗೆ ವಿವರಣೆಯನ್ನು ಕೊಡಬೇಕಾಗಿತ್ತಲ್ಲಾ? ಈಗ ಇಂಪ್ಲಿಮೆಂಟ್ ಆಗುತ್ತಿರುವುದು ಬರೇ 26 ಕೆರೆಗಳು ಮಾತ್ರ! ಹಾಗಾದರೆ ವಿಶ್ವಬ್ಯಾಂಕ್ ನೆರವಿನ ಯೋಜನಾ ವೆಚ್ಚ 670 ಕೋಟಿ 59 ಲಕ್ಷ ರೂ.ಗಳು ಈಗ 2001–02 ಮತ್ತು 2002–03ರ ಮಾರ್ಚ್ 31ರವರೆಗೆ ನೀವು ಖರ್ಚು ಮಾಡಿದ್ದು ಎಷ್ಟು? ಅದು 1 ಕೋಟಿ 4 ಲಕ್ಷ ರೂಪಾಯಿ ಮಾತ್ರ. 670 ಕೋಟಿ ರೂ ಎಲ್ಲಿ? ನೀವು ಖರ್ಚು ಮಾಡಿದ್ದು 1 ಕೋಟಿ 4 ಲಕ್ಷ ರೂಪಾಯಿ ಎಲ್ಲಿ? ಹಾಗಾದರೆ ನಿಮ್ಮ ಸರ್ಕಾರದ ಪ್ರಾಮಾಣಿಕತನ ಎಲ್ಲಿದೆ?

**ಅಧ್ಯಕ್ಷರು** :– ಮಾನ್ಯ ಶೆಟ್ಟರ್‌ರವರೇ ಹಾಗಲ್ಲ. ಅವರು 12 ಪರ್ಸೆಂಟ್ ಕಟ್ಟಬೇಕು ಮತ್ತು ಇದಕ್ಕೆ ಒಂದು ಸಂಘ ಮಾಡಬೇಕು. ಅವರು ಯಾರೂ ಮುಂದೆ ಬರುತ್ತಿಲ್ಲ. 12 ಪರ್ಸೆಂಟ್ ಕಟ್ಟುವುದಕ್ಕೆ ಯಾರೂ ಮುಂದೆ ಬರುತ್ತಿಲ್ಲ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ 276 ಕೆರೆಗಳು ಸ್ಯಾಂಕ್ಷನ್ ಆಗಿವೆ. ಆದರೆ ಬರೇ 15 ಕೆರೆಗಳು ಮಾತ್ರ ಆಗಿವೆ. ಯಾರೂ ಮುಂದೆ ಬರುತ್ತಿಲ್ಲ.

**ಶ್ರೀ ಜಗದೀಶ್ ಶೆಟ್ಟರ್** :– ಇದು ರಿಯಾಲಿಟಿಯನ್ನು ಅರ್ಥಮಾಡಿಕೊಂಡು ಬಜೆಟ್ ಮಂಡನೆ ಮಾಡುವಾಗ ಇದೆಲ್ಲಾ ಹೇಳುವಂಥಾದ್ದು, ಸಾರ್ವಜನಿಕರಿಗೆ ಇದರ ಬಗ್ಗೆ ಜಾಗೃತಿ ಮಾಡುವಂಥ ಕೆಲಸ ಇದೆಲ್ಲಾ ಮಾಡಬೇಕು. ಅದನ್ನೇನೂ ಇವರು ಮಾಡುತ್ತಿಲ್ಲ. ಸುಮ್ಮನೆ ಹಾಗೆಯೇ ಎಲ್ಲಾ ಹೇಳುತ್ತಿದ್ದಾರೆ.

**ಅಧ್ಯಕ್ಷರು** :– ಈಗ ಎನ್.ಜಿ.ಓಸ್.ಗಳು ಮೋಟಿವೇಟ್ ಮಾಡುತ್ತಿದ್ದಾರೆ.

**ಶ್ರೀ ಜಗದೀಶ್ ಶೆಟ್ಟರ್** :– ಆ ರೀತಿ ಮಾಡುವುದರಿಂದ ಜನರಿಗೆ ತಪ್ಪು ಕಲ್ಪನೆ ಕೊಡುವಂಥಾದ್ದು ಆಗುತ್ತಿದೆ. ಅದಕ್ಕಾಗಿ ನಾನು ಇದನ್ನೆಲ್ಲಾ ಹೇಳುತ್ತಿದ್ದೇನೆ.

**ಅಧ್ಯಕ್ಷರು** :– ಸ್ವಲ್ಪ ನಿಧಾನವಾಗಿದೆ. ಅಷ್ಟೇ ಹೊರತಾಗಿ ಇದು ಆಗಿದೆ.

**ಶ್ರೀ ಜಗದೀಶ್ ಶೆಟ್ಟರ್** :– ಎಷ್ಟು ಕೆರೆ ಆಗಿದೆ ಅಂತ ಹೇಳಿ. ಇವತ್ತಿನವರೆಗೆ, ಈ ಕ್ಷಣದವರೆಗೆ ಈ ಯೋಜನೆಯಲ್ಲಿ ಎಷ್ಟು ಆಗಿದೆ ಎಂದು ಹೇಳಿಬಿಡಿ. ನಿಮಗೆ ಒಂದು ಟಾರ್ಗೆಟ್ ಇತ್ತಲ್ಲಾ, 25 ಸಾವಿರ ಕೆರೆಗಳು ಬೇಡ, ಐದು ಸಾವಿರ ಕೆರೆಗಳಲ್ಲಿ ಈಗ ಎಷ್ಟು ಆಗಿದೆ? ನೂರು ಕೆರೆಯಾದರೂ ಆಗಿದೆಯಾ?

**ಅಧ್ಯಕ್ಷರು** :– ಐದು ಸಾವಿರ ಕೆರೆ ಎಂದರೆ ನೀವು ರೈತಕಾಯಕ ಕೆರೆ ವಿಷಯ ಹೇಳುತ್ತಿದ್ದೀರಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಮಾನ್ಯ ಶೆಟ್ಟರ್‌ರವರೇ, ನಿಮಗೆ ಕನ್‌ಫ್ಯೂಶನ್ ಆಗಿದೆ. ರೈತಕಾಯಕ ಕೆರೆ ಬೇರೆ. ಈ ಜಲಸಂವರ್ಧನ ಯೋಜನೆಯಲ್ಲಿ ವಿಶ್ವಬ್ಯಾಂಕಿನಿಂದ 635

ಕೋಟಿ ರೂಪಾಯಿ ಖರ್ಚುಮಾಡಿ ಎರಡು ಸಾವಿರ ಕೆರೆಗಳನ್ನು ದುರಸ್ತಿ ಮಾಡುವುದು ಏನಿದೆ, ಅದರಲ್ಲಿ ಸಾವಿರ ಕೆರೆಗಳು ಕೋಲಾರ ಜಿಲ್ಲೆಯಲ್ಲೇ ಇವೆ. ಉಳಿದ ಸಾವಿರ ಕೆರೆಗಳು ಎಂಟು ಜಿಲ್ಲೆಗಳಲ್ಲಿವೆ.... ಅದರಲ್ಲಿ ಈಗಾಗಲೇ ಹೆಚ್ಚುಕಮ್ಮಿ 80 ಕೆರೆಗಳ ದುರಸ್ತಿ ಕೆಲಸ ಎಲ್ಲಿ ಮುಂದೆ ಬಂದಿದ್ದಾರೆ ಅಲ್ಲಿ ನಡೆದಿದೆ ಉಳಿದಂಥದ್ದು ಹಂತ ಹಂತವಾಗಿ ಎಲ್ಲಿ ಎನ್‌ಜಿಓ ರವರು ಮುಂದೆ ಬರುತ್ತಿದ್ದಾರೆ ಅಲ್ಲಿ ಪ್ರೋಗ್ರೆಸ್‌ನಲ್ಲಿದ್ದಾವೆ. ಅದಕ್ಕಾಗಿ ಇದನ್ನು ಬದಲಾವಣೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. 25 ಸಾವಿರ ಕೆರೆಗಳಿಗೂ ಇದಕ್ಕೂ ಸಂಬಂಧವಿಲ್ಲ.

**ಶ್ರೀ ಜಗದೀಶ್‌ಶೆಟ್ಟರ್** :– ನಾನು ಇದರ ಬಗ್ಗೆಯೇ ಹೇಳುತ್ತಿದ್ದೇನೆ. ಈ ಬಜೆಟ್‌ನಲ್ಲಿ ರೆಫರ್ ಮಾಡಿರುವುದಕ್ಕೇನು ಉತ್ತರ? ಬಜೆಟ್‌ನಲ್ಲಿ ಹೇಳುವುದು ಒಂದು ನಡೆಯುವುದು ಒಂದು ಅಂಥಾ ಅವರು ಹೇಳಲಿ. ಬಜೆಟ್‌ನಲ್ಲಿ 25 ಸಾವಿರ ಕೆರೆಗಳ ಬಗ್ಗೆ ಹೇಳಿದ್ದಾರಲ್ಲಾ? ಯಾವ ಆಧಾರದ ಮೇಲೆ 25 ಸಾವಿರ ಕೆರೆಗಳ ಬಗ್ಗೆ ಹೇಳಿದಿರಿ ನಂತರದ ಬಜೆಟ್‌ನಲ್ಲಿ ಐದು ಸಾವಿರ ಕೆರೆಗಳು ಎಂದು ಹೇಳಿದಿರಿ ಯಾವ ಅರ್ಥದಲ್ಲಿ ಹೇಳಿದಿರಿ?

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– 25 ಸಾವಿರ ಕೆರೆಗಳು ಈ ರಾಜ್ಯದಲ್ಲಿ ಇರತಕ್ಕದನ್ನು ಹಂತ ಹಂತವಾಗಿ ಕೈಗೆತ್ತಿಕೊಂಡು ಅಂತರ ಜಲವನ್ನು ಸಂಗ್ರಹಿಸತಕ್ಕದ್ದು ಅಥವಾ ದುರಸ್ತಿ ಮಾಡತಕ್ಕದ್ದು ಕರೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು, ಅದನ್ನು yearwise ಒಂದೊಂದು ಯೋಜನೆಯಲ್ಲಿ ಒಂದೊಂದು, ಜಲಸಂವರ್ಧನೆ ಯೋಜನೆ ಇರಬಹುದು, ಬರಗಾಲದಲ್ಲಿ ಇರಬಹುದು, ರೈತಕಾಯಕ ಕೆರೆ ಇರಬಹುದು, ರೆಗ್ಯುಲರ್ ಫಂಡ್‌ನಲ್ಲಿ ಇರಬಹುದು, ನಬಾರ್ಡ್‌ನಲ್ಲಿ ಇರಬಹುದು, so many schemes are there. ಒಂದರಲ್ಲಿ ನೂರು ಬರುತ್ತದೆ, ಒಂದರಲ್ಲಿ ಐವತ್ತು ಬರುತ್ತದೆ, ಹೀಗೆ ಮಾಡಿ ಇಡೀ ರಾಜ್ಯದಲ್ಲಿ ಇರತಕ್ಕ ಎಲ್ಲಾ ಕೆರೆಗಳನ್ನು ದುರಸ್ತಿ ಮಾಡತಕ್ಕ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದಕ್ಕೆ ನೀವು 25 ಸಾವಿರ ಕೆರೆಗಳೆಂದು ಹಿಡಿದುಕೊಂಡು ಕುಳಿತರೆ ನಾನು ಏನು ಮಾಡಲಿ?

**ಶ್ರೀ ಜಗದೀಶ್‌ಶೆಟ್ಟರ್** :– ನಿಮ್ಮ ಬಜೆಟ್‌ನಲ್ಲಿರುವುದನ್ನು ಹೇಳುತ್ತಿದ್ದೇನೆ. ನಾನು. ಬೇರೆ ಹೊಸದು ಏನೂ ಇಲ್ಲ. ಅವರು ಬಜೆಟ್‌ನಲ್ಲಿ ಜಲಸಂವರ್ಧನಾ ಯೋಜನೆಯೆಂದು ಸ್ಪೆಸಿಫಿಕ್ ಆಗಿ ಹೇಳಿದ್ದಾರೆ. ಕೆರೆಗಳ ಹೂಳನ್ನು ತೆಗೆಯುವುದೆಂದೂ ಹೇಳಿದ್ದಾರೆ. ಈಗ ಅದನ್ನು ಮತ್ತೆ ಬೇರೆ ಬೇರೆಯದಕ್ಕೆ ಡೈವರ್ಷನ್ ಮಾಡುವಂಥದ್ದು, ಬೇರೆ ಮಾತು ಹೇಳುವಂಥದ್ದೆಲ್ಲಾ ನಡೆಯುತ್ತಿದೆ. 2000–2001ರ ಬಜೆಟ್‌ನಲ್ಲಿ ಇನ್ನೊಂದು ವಿಷಯವನ್ನು ತಾವು ಹೇಳಿದ್ದೀರಿ. ಕರ್ನಾಟಕವೆಂದರೆ ಬೆಂಗಳೂರಲ್ಲ. ಕರ್ನಾಟಕ ಬೆಂಗಳೂರಿಗಿಂತ ವಿಶಾಲವಾದದ್ದು ಗಮನಸೆಳೆಯುವ ರಾಜ್ಯವೆಂದು ವಿಶ್ವಬ್ಯಾಂಕ್ ಪರಿಗಣಿಸಿದೆ. ಮುಂದಿನ ಐದು ವರ್ಷಗಳಲ್ಲಿ 12 ಸಾವಿರ ಕೋಟಿ ರೂಪಾಯಿಗಳನ್ನು ನೀಡುವಂಥ ದೃಢವಾದ ನಿಲುವನ್ನು ಸ್ಪಷ್ಟಪಡಿಸಿದೆ. ಈ 12 ಸಾವಿರ ಕೋಟಿ ರೂನಲ್ಲಿ ಎಷ್ಟು ಬಂತು ಎಂದು ಸರ್ಕಾರ ಉತ್ತರ ಹೇಳಲಿ. 12 ಸಾವಿರ ಕೋಟಿ ರೂ ಕೊಡುತ್ತೇವೆಂದು ವಿಶ್ವಬ್ಯಾಂಕ್‌ನವರು ಹೇಳಿದ್ದರು ಎಂದು 2000–01ರ ಬಜೆಟ್‌ನಲ್ಲಿ ಇದು ಬಂದಿದೆ. ಅದಕ್ಕೆ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಬೇಕಾಗುತ್ತದೆ. ಅನಂತರ ಎನ್‌ಡಿಡಿಬಿ ರಾಜ್ಯದಲ್ಲಿ ಡೈರಿ ಅಭಿವೃದ್ಧಿ ತೋಟಗಾರಿಕೆ, ಪಶುಸಂಗೋಪನಾ, ಸಾಮಾಜಿಕ ಅರಣ್ಯ, ಮುಂತಾದುವಕ್ಕೆ 505 ಕೋಟಿ ರೂಪಾಯಿ ಬಂಡವಾಳ ನೀಡಲು ಮುಂದೆ ಬಂದಿದೆ. ಹಾಗಾದರೆ ಆ 5050 ಕೋಟಿ ರೂನಲ್ಲಿ ಎಷ್ಟು ಬಂತು? ಇದರ ಬಗ್ಗೆ

ನಮಗೆ ಪ್ರಗತಿ ಕಾಣುತ್ತಿಲ್ಲ. ಆದ್ದರಿಂದ ಈ ಪ್ರಶ್ನೆಗಳನ್ನು ಸರ್ಕಾರದ ಮುಂದಿಡುತ್ತಿದ್ದೇನೆ. 505 ಕೋಟಿ ರೂ ಬಂತೋ ಇಲ್ಲವೋ? ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ? ಇನ್ನು ಎಷ್ಟು ಉಳಿದಿದೆ ಎಂಬ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. 2000–01ರ ಬಜೆಟ್‌ನ್ನು ನಾನು ರೆಫರ್ ಮಾಡುತ್ತಿದ್ದೇನೆ. ಅನಂತರ ಜಪಾನ್ ಸರ್ಕಾರವು ರಾಜ್ಯದ ವಿವಿಧ ಯೋಜನೆಗಳಿಗೆ 3600 ಕೋಟಿ ರೂಪಾಯಿಗಳ ಹೂಡಿಕೆಗೆ ಒಪ್ಪಿಗೆ ಕೊಟ್ಟಿದೆ. ಯಾವಾಗ ಕೊಟ್ಟಿದೆ? ಒಪ್ಪಂದ ಆಗಿತ್ತೋ ಹೇಗೆ? 3600 ಕೋಟಿ ರೂ ನಿಮಗೆ ಬಂತೋ ಹೇಗೆ? ಏಕೆಂದರೆ ಇದರ ಬಗೆಗೆ 2000–01ರ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಹಣ ಬಂತೋ ಹೇಗೆ? ಅಂದರೆ ಕೇವಲ ಘೋಷಣೆಗಳನ್ನು ಜನರಿಗೆ ನೂರೆಂಟು ಕನಸುಗಳನ್ನು ಬಿತ್ತುವಂಥ ಕೆಲಸ, ಆದರೆ ಅದರ ಅನುಷ್ಠಾನ, ಹಣದ ಹೂಡಿಕೆ ಯಾವುದೂ ಇಲ್ಲ. ಅನಂತರ ರಾಜ್ಯದ ಎಲ್ಲಾ 77 ಇಂಜಿನಿಯರಿಂಗ್ ಕಾಲೇಜುಗಳು ಮುಂದಿನ 12 ತಿಂಗಳುಗಳಲ್ಲಿ ನೆಟ್‌ವರ್ಕ್‌ಗೆ ಅಳವಡಿಸುವುದು. ಇದೂ ಸಹ ಏನೂ ಆಗಲಿಲ್ಲ. ಅನಂತರ ಸುರಕ್ಷಾ ಹೆರಿಗೆ, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಕನಿಷ್ಟ 100 ಸೆಕೆಂಡರಿ ಆಸ್ಪತ್ರೆಗಳು ವರ್ಷಾಂತ್ಯದ ವೇಳೆಗೆ ಸಜ್ಜುಗೊಳಿಸುವುದು. ಅದರಲ್ಲಿ ಎಷ್ಟು ಆದವು? ಇದಕ್ಕು ಉತ್ತರ ಇಲ್ಲ. ರಾಜ್ಯದಲ್ಲಿ ಒಂದು ನೂರು ಕೋಲ್ಡ್ ಸ್ಟೋರೇಜ್ ಜಾಲ ಸ್ಥಾಪನೆಗೆ ಯೋಜನೆ. ಅದು ಕನ್‌ಸ್ಟ್ರಕ್ಷನ್ ಆದುವೋ ಹೇಗೆ? ಆಗ ಕೋಲ್ಡ್ ಸ್ಟೋರೇಜ್ ಕಟ್ಟಿಸುತ್ತೇವೆಂದು ಬಹಳಷ್ಟು ಹೇಳಿದರು. ಅಲ್ಲಿ ಕಟ್ಟಿಸುತ್ತೇವೆ. ಒಂದೊಂದು ತಾಲ್ಲೂಕಿನಲ್ಲೂ ಕಟ್ಟಿಸುತ್ತೇವೆಂದು ಹೇಳಿದರು. ಆದರೆ ಅದು ಎಲ್ಲಿದೆ? ಅದರ ಪ್ರೋಗ್ರೆಸ್ ಎಲ್ಲಾಗಿದೆ? ಕೋಲ್ಡ್ ಸ್ಟೋರೇಜ್ ಎಷ್ಟು ಆಗಿದೆ ಎಂಬ ಬಗ್ಗೆ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ. 2002–03ರ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳ ಮಾದರಿ ಪಟ್ಟಣ ವಸತಿ ಬಡಾವಣೆಗಳ ಬಗ್ಗೆ ಹೇಳಿದರು. ಎಷ್ಟು ನಗರಗಳಲ್ಲಿ ಇದನ್ನು ಮಾಡಿದ್ದೀರಿ? ಬಹುಶಃ ಮಾಡಿದ್ದರೆ ಮಂಡ್ಯದಲ್ಲಿ ಮಾಡಿರಬೇಕು. ಮುಖ್ಯಮಂತ್ರಿಗಳ ಕ್ಷೇತ್ರ ಅದು, ಅಲ್ಲಿ ಮಾಡಿರಬೇಕು. ನಮಗಂತೂ ಬೇರೆ ಎಲ್ಲೂ ಕಾಣುತ್ತಿಲ್ಲ. ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ 100 ಕೋಟಿ ರೂಪಾಯಿ ಸ್ಥಾಪನೆ. ಅದರ ಅಕೌಂಟ್‌ನಲ್ಲಿ ಒಂದು ಪೈಸೆ ಏನಾದರೂ ಹಾಕಿದ್ದೀರಾ? ಪಾಪ ನಮ್ಮ ಶಾಸಕರು ಜನರ ಕೈಯಿಂದ ಬೈಯಿಸಿಕೊಳ್ಳಲು ಹತ್ತಿದ್ದಾರೆ. ಎಲ್ಲಾ ಶಾಸಕರಿಗೂ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಯಷ್ಟು ರಸ್ತೆಗಳ ಲಿಸ್ಟ್ ಮಾಡಿ ಕೊಡಿ ಎಂದು ಸೂಚನೆ ಬಂತು. ನಾವು ಒಂದು ಕೋಟಿ ಇಪ್ಪತ್ತೈದು ಲಕ್ಷಕ್ಕೆ ಎರಡೂವರೆ ಕೋಟಿ ರೂ ಲಿಸ್ಟ್‌ನ್ನು ಕೊಟ್ಟೆವು. ಕೊನೆಯ ವರ್ಷ ಚುನಾವಣೆಗೆ ಹೋಗುತ್ತಿದ್ದೇವೆ, ಕಡೆಗೆ ರಸ್ತೆಯ ಕೆಲಸವಾದರೂ ಆಗಲಿ ಎಂದು ನಾವು ಕಳುಹಿಸಿದರೆ ಇವತ್ತಿನವರೆಗೂ ಅದರ ಬಗ್ಗೆ ಏನೇನೂ ಸುದ್ದಿ ಇಲ್ಲ. ಪ್ರಧಾನ ಮಂತ್ರಿ ಅಟಲ್‌ಬಿಹಾರಿ ವಾಜ್‌ಪೇಯಿಯವರು ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆ ಮಾಡಿದರು. ಪ್ರತಿಯೊಂದು ತಾಲ್ಲೂಕಿಗೂ ಪ್ರತಿಯೊಂದು ವರ್ಷ ಒಂದೊಂದು ಕೋಟಿ ರೂಪಾಯಿ ಹಣವನ್ನು ಕೊಡುತ್ತಿದ್ದಾರೆ. ಹಣ ಬಿಡುಗಡೆಯಾಗಿ ರಸ್ತೆಗಳ ಕೆಲಸವಾಗಿ ನಮ್ಮ ಕಣ್ಣ ಮುಂದೆ ರಸ್ತೆಗಳು ಕಾಣಲು ಪ್ರಾರಂಭವಾಗಿದೆ. ಬಹುಶಃ ಅದನ್ನು ನೋಡಿ ನಮ್ಮ ಮುಖ್ಯಮಂತ್ರಿಗಳಿಗೂ ಸ್ಫೂರ್ತಿ ಬಂತು. ಪ್ರಧಾನ ಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆ, ಪ್ರಧಾನ ಮಂತ್ರಿಗಳ ಹೆಸರು ಬರುತ್ತಿದೆ, ಎನ್‌ಡಿಎ ಸರ್ಕಾರವನ್ನು ಜನರು ನೆನಸಿಕೊಳ್ಳಲು ಪ್ರಾರಂಭ ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ನೆನಸಿಕೊಳ್ಳಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಮಾಡಿದರು, ಆಗಲಿ, ಅದೇ ಉದ್ದೇಶವನ್ನು

ಇಟ್ಟುಕೊಂಡು ಮಾಡಿರಪ್ಪಾ. ಒಂದು ಕೋಟಿ ಇಪ್ಪತ್ತೈದು ಲಕ್ಷವನ್ನಾದರೂ ಕೊಡಿ, ಒಂದೊಂದು ಕ್ಷೇತ್ರದಲ್ಲಿ ಒಂದೆರಡು ರಸ್ತೆಗಳಾದರೂ ಆಗಲಿ. ನಾವು ಬಹಳ ಆಸೆಯನ್ನಿಟ್ಟುಕೊಂಡಿದ್ದೆವು. ಆದರೆ ಇದುವರೆಗೆ ಒಂದು ಪೈಸೆ ಬಿಡುಗಡೆ ಮಾಡಲಿಲ್ಲ.

**ಅಧ್ಯಕ್ಷರು** :– 20 ಲಕ್ಷ ರೂ ರಿಲೀಸ್ ಮಾಡಿದ್ದಾರೆ.

**ಶ್ರೀ ಜಗದೀಶ್‌ಶೆಟ್ಟರ್** :– ಎಲ್ಲಿ ರಿಲೀಸ್ ಮಾಡಿದ್ದಾರೆ? ನಮಗಂತೂ ಗೊತ್ತಿಲ್ಲ. ನಾವಂತೂ ನೋಡಿಲ್ಲ. ನಿಮ್ಮ ಕ್ಷೇತ್ರಕ್ಕೆನಾದರೂ ಮಾಡಿರಬೇಕು. ನಮ್ಮ ಕ್ಷೇತ್ರಕ್ಕಂತೂ 20 ಲಕ್ಷ ರೂಪಾಯಿ ಬಂದಿಲ್ಲ.

**ಅಧ್ಯಕ್ಷರು** :– ಎಲ್ಲಾ ಕ್ಷೇತ್ರಕ್ಕೂ ಮಾಡಿದ್ದಾರೆ.

**ಶ್ರೀ ಜಗದೀಶ್‌ಶೆಟ್ಟರ್** :– ಆ ಕಡೆ ಶಾಸಕರ ಅಭಿವೃದ್ಧಿ ನಿಧಿ ನಲವತ್ತು ಲಕ್ಷವಂತೂ ನಾಪತ್ತೆಯಾಯಿತು. ಶಾಸಕರು ಜನರ ಹತ್ತಿರ ಹೋಗಿ ಬೈಯಿಸಿಕೊಳ್ಳುವುದಾಗಿದೆ. ಜನರು ಬಂದು ಕೇಳುತ್ತಾರೆ. ಏನು ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಹೇಳುತ್ತಾರೆ, ನಿಮಗೆ 40 ರೂಪಾಯಿ ನಿಮಗೆ ಅನುದಾನ, ಎಂಪಿ ಫಂಡ್ ಹೇಗೆ ಮೂರು ನಾಲ್ಕು ಕೋಟಿ ರೂಪಾಯಿ ಇದೆ ಶಾಸಕರಿಗೆ 40 ಲಕ್ಷ ರೂಪಾಯಿ ಅನುದಾನ. ಹೋದ ವರ್ಷ ಬರಗಾಲ ಎಂದಿರಿ, ಬಡ್ಡಿ ಮನ್ನಾ ಎಂದಿರಿ, ಈ ವರ್ಷ 40 ಲಕ್ಷ ರೂ ನಾನು ಹೋದ ಸಲ ಅಧಿವೇಶನದಲ್ಲಿ ಕೇಳಿದ್ದೆವು. ಅದಕ್ಕೆ ನಾನು ಒತ್ತಾಯ ಮಾಡಿದ್ದಕ್ಕೆ ಕಾಂಗ್ರೆಸ್ ಶಾಸಕರೂ ಚಪ್ಪಾಳೆಯನ್ನು ತಟ್ಟಿದ್ದರು. ಆದರೆ ಅದರ ಬಗ್ಗೆ ಇವತ್ತು ಸುದ್ದಿಯೇ ಇಲ್ಲ. ಬಹುಶಃ ರೂಲಿಂಗ್ ಪಾರ್ಟಿ ಎಂಎಲ್‌ಎ ಗಳಿಗೆ ಬೇರೆ ವ್ಯವಸ್ಥೆಯನ್ನು ಮಾಡಿದ್ದಾರೆಂದು ನನಗನ್ನಿಸುತ್ತದೆ. ಅದರ ಬಗ್ಗೆ ಸಂಶಯ ಬರಲು ಪ್ರಾರಂಭವಾಗಿದೆ. ಏಕೆಂದರೆ ಆ 40 ಲಕ್ಷ ರೂ ನಾಪತ್ತೆಯಾಗಿದೆ.

**ಅಧ್ಯಕ್ಷರು** :– ಇಲ್ಲ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಮಾನ್ಯ ಅಧ್ಯಕ್ಷರೆ, ಆ ರೀತಿ ಮಾಡಬೇಕಾಗಿದ್ದರೆ ಅವರೇ ನಾವು ಆ ರೀತಿ ಮಾಡುವುದಿಲ್ಲ. ನಾವು ಏನು ಬರುತ್ತದೊ ಅದನ್ನು ಈಕ್ವಲ್ ಹಂಚುತ್ತೇವೆ.

**ಶ್ರೀ ಜಗದೀಶ್‌ಶೆಟ್ಟರ್** :– ಏನು ಈಕ್ವಲ್ ಹಂಚಿದ್ದೀರಿ ಎಂದು ಹೇಳಿಬಿಡುತ್ತೇನೆ. ಒಂದು ಕಡೆ ಈ ಹಣವೂ ಇಲ್ಲ. ಶಾಸಕರು 40 ಲಕ್ಷ ರೂಪಾಯಿಯದ್ದು ಲಿಸ್ಟ್ ಮಾಡಿ ಕೊಟ್ಟೆವು, ಅದು ಸುದ್ದಿ ಇಲ್ಲ, ಅನಂತರ ರೂರಲ್ ಏರಿಯಾ ರಸ್ತೆಯ ಅಭಿವೃದ್ಧಿಯ ಸಲುವಾಗಿ ಒಂದು ಕೋಟಿ ಇಪ್ಪತ್ತೈದು ಲಕ್ಷದ ಲಿಸ್ಟ್‌ನ್ನು ಕೊಟ್ಟೆವು, ಅದೂ ಸುದ್ದಿ ಇಲ್ಲ. ಇನ್ನು ಎರಡು ತಿಂಗಳಿನಲ್ಲಿ ನಾವು ಚುನಾವಣೆಗೆ ಹೋಗಬೇಕು, ನಾವೇನು ಮಾಡಬೇಕು? ಇದಕ್ಕೆ ಉತ್ತರವೇನು? ನಾನು ಏಕೆ ಸಂಧಯ ಪಡಲು ಪ್ರಾರಂಭ ಮಾಡಿದ್ದೇನೆಂದರೆ, ಮಾನ್ಯ ಲಕ್ಷ್ಮಿನಾರಾಯಣರವರು ಇಲ್ಲ, ಹೋದ ಸಲ ಅವರು ರೆಫರ್ ಮಾಡಿದ್ದರು, ಸರ್ಕಾರ ಅದನ್ನು ಲಕ್ಷಕ್ಕೆ ತೆಗೆದುಕೊಳ್ಳಲಿಲ್ಲ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ನನಗೆ ಗೊತ್ತು ನೀವು ಯಾವುದನ್ನು ಹೇಳುತ್ತೀರೆಂದು. ಕೆಪಿಸಿಸಿ ಸೆಕ್ರೆಟರಿ ಹೆಸರಿನಲ್ಲಿ ಇಷ್ಟು ದುಡ್ಡನ್ನು ಕೊಟ್ಟಿರಿ, ನಾವು ಹೇಳಿದಕ್ಕೆ ಕೊಟ್ಟಿಲ್ಲವೆಂದು ಹೇಳುತ್ತೀರಿ ತಾನೇ?

**ಶ್ರೀ ಜಗದೀಶ್ ಶೆಟ್ಟರ್** :– ಇವತ್ತು ಶಾಸಕರು ಮುಖ್ಯಮಂತ್ರಿಗಳ ಹತ್ತಿರ ಹೋಗಿ ನಮಗೆ ರಸ್ತೆಗೆ ಒಂದಿಷ್ಟು ಹಣ ಕೊಡಿ ಎಂದರೆ ಹಣವಿಲ್ಲ. 40 ಲಕ್ಷ ರೂಪಾಯಿ ಹಣ ಇಲ್ಲ, ಒಂದು

ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿ ಮುಖ್ಯಮಂತ್ರಿಗಳ ರೂರಲ್ ಡೆವಲಪ್‌ಮೆಂಟ್ ರೋಡ್ಸ್‌ನ ಹಣವೂ ಇಲ್ಲ, ಆದರೆ ಎಲ್ಲಿಗೆ ಹಣ ಹೋಗುತ್ತಿದೆ ಎಂದರೆ, ನಮಗೆ ಸರ್ಕಾರದ ಒಂದು ಆರ್ಡರ್ ಸಿಕ್ಕಿತು. ಲಾಸ್ಟ್ ಟೈಂ ಸಿಕ್ಕಿತ್ತು. ಅದನ್ನು ನಾನು ತೋರಿಸಿದ್ದೆ, ಕರ್ನಾಟಕ ಸರ್ಕಾರದ ನಡವಳಿಕೆಗಳು, ಮುಖ್ಯಮಂತ್ರಿಗಳ ಹೆಸರಿನಲ್ಲಿ ಒಂದು ಆಜ್ಞೆಯಾಗಿದೆ. ನಾಲ್ಕು ರಸ್ತೆಗಳು 20 ಲಕ್ಷ ರೂಪಾಯಿಗಳದ್ದು ಸ್ಯಾಂಕ್ಷನ್ ಆಗಿದೆ. ಅದು ಯಾರಿಗೆ ಸ್ಯಾಂಕ್ಷನ್ ಆಗಿದೆಯೆಂದರೆ ಜಗ್ಗೇಶ್ ಎಂದು ಕರ್ನಾಟಕ ಪ್ರದೇಶ್ ಕಾಂಗ್ರೆಸ್ ಕಮಿಟಿ ಸದಸ್ಯರು ಅವರು, ಅದನ್ನೂ ಸ್ಪೆಸಿಫಿಕ್ ಆಗಿ ಬರೆದಿರಿ, ಯಾವ ರೀತಿ ಮೊನ್ನೆ ಕಾಂಗ್ರೆಸ್ ಸಮಾವೇಶ ಬೇಲೂರಿನಲ್ಲಿ ಓಪನ್ ಆಗಿ ಮಾಡಿದಿರಿ, ಓಪನ್ ಆಗಿ ಸರ್ಕಾರದ ವೆಚ್ಚದಲ್ಲಿ ಕಾಂಗ್ರೆಸ್ ಸಮಾವೇಶ, ಆ ರೀತಿ ಓಪನ್ ಆಗಿ ಇವತ್ತು ಕಾಂಗ್ರೆಸ್ ಸದಸ್ಯರಿಗೆ ರಸ್ತೆಗಳ ನಿರ್ಮಾಣಕ್ಕಾಗಿ ಹಣ ಮಂಜೂರಿ, ಇಲ್ಲಿ ಹೇಳಿದ್ದಾರೆ ಜಗ್ಗೇಶ್ ರವರು, ತುಮಕೂರು ಜಿಲ್ಲೆಯ ತುರುವೆಕೆರೆ ತಾಲ್ಲೂಕಿನ ಜಿಲ್ಲಾಪಂಚಾಯಿತಿಯ ರಸ್ತೆಗಳು ತುಂಬಾ ಹಾಳಾಗಿದ್ದು ಒಟ್ಟು ಐದು ರಸ್ತೆಗಳನ್ನು ತುರ್ತಾಗಿ ಅಭಿವೃದ್ಧಿಪಡಿಸಬೇಕಾಗಿರುವುದರಿಂದ ಈ ಕೆಳಗಿನಂತೆ 20 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಪತ್ರದಲ್ಲಿ ಶ್ರೀ ಜಗ್ಗೇಶ್‌ರವರು ಕೋರಿರುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಆದೇಶಿಸಿರುತ್ತಾರೆ. ಆ ರಸ್ತೆಗಳ ಹೆಸರಿನಲ್ಲಿ ಒಂದೊಂದಕ್ಕೆ ಮೂರೂವರೆ ಲಕ್ಷ, ಒಂದಕ್ಕೆ ನಾಲ್ಕು ಲಕ್ಷ, ಈ ರೀತಿ 20 ಲಕ್ಷ ರೂಪಾಯಿಗಳ ಆರ್ಡರ್ ಮಾಡಿದ್ದಾರೆ. ಅದನ್ನು ತಮಗೆ ಕಳುಹಿಸುತ್ತಿದ್ದೇನೆ. ಈ ರೀತಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ನೇರವಾಗಿ ಹಣವನ್ನು ಕೊಡುತ್ತೀರಿ.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಜನಸ್ಪಂದನ ಕಾರ್ಯಕ್ರಮ ಮಾಡಲಾಗಿದೆ.

ಶ್ರೀ ಜಗದೀಶ್‌ಶೆಟ್ಟರ್ :- ಇಲ್ಲಿ ಜನಸ್ಪಂದನದ ಹೆಸರು ಇಲ್ಲ. ಜಗ್ಗೇಶ್‌ರವರ ಹೆಸರು ಇದೆ.

**ಶ್ರೀ ಅಪ್ಪಾಜಿ ಎಸ್. ನಾಡಗೌಡ** :- ಜನಸ್ಪಂದನ ಕಾರ್ಯಕ್ರಮದಲ್ಲಿ ಹಲವಾರು ಜನರಿಂದ ಬಂದಂಥ ಬೇಡಿಕೆಗಳನ್ನೆಲ್ಲಾ ಮುಖ್ಯಮಂತ್ರಿಯವರು ಮಂಜೂರು ಮಾಡಿ ಕಳುಹಿಸಿದ್ದಾರೆ. ಎಂಎಲ್‌ಎ ಗಳಿಗೆ ಕೊಡಬೇಕೆಂದು ಎಲ್ಲೂ ನಿಗದಿತವಾಗಿ ಬರೆದು ಕೊಟ್ಟಿಲ್ಲವಲ್ಲಾ.

**4.00** ಪಿಎಂ

**ಶ್ರೀ ಜಗದೀಶ್ ಶೆಟ್ಟರ್** :- ಜನಸ್ಪಂದನ ಮಾಡುವಾಗ ಎಷ್ಟು ಮಾಡಿದ್ದಾರೆಂಬುದರ ಬಗ್ಗೆ ಸ್ವಲ್ಪ ರೆಕಾರ್ಡ್ಸ್ ತೋರಿಸಿಬಿಡಿ. ಎಷ್ಟೆಷ್ಟು ನಿಜವಾಗಿ ಜನಸ್ಪಂದನವಾಗಿವೆ ಎಂಬುದನ್ನು ತೋರಿಸಿಬಿಡಿ. ಜಗ್ಗೇಶ್‌ರವರು ನಿಮ್ಮ ಕಾಂಗ್ರೆಸ್ ಕಮಿಟಿ ಸದಸ್ಯರು, ಅವರು ಲೆಟರ್ ಕೊಟ್ಟರು, ನೀವು ಸ್ಯಾಂಕ್ಷನ್ ಮಾಡಿದಿರಿ. ಹೀಗಾಗಿ ನಮಗೇನು ಸಂಶಯ ಬರುತ್ತದೆಂದರೆ, ನೀವು ಇವೆಲ್ಲಾ ಬಹಿರಂಗವಾಗಿ ಏಕೆ ಹೇಳುತ್ತೀರಿ, ನಮ್ಮ ಕಡೆ ಬಂದುಬಿಡಿ, ನಾವು ಸ್ಯಾಂಕ್ಷನ್ ಮಾಡುತ್ತೇವೆ, ಈ ರೀತಿ ಎಲ್ಲಾ ವ್ಯವಹಾರಗಳು ನಡೆದಿವೆ. ಅದಕ್ಕೆ, ಇದೊಂದು ಉದಾಹರಣೆ. ಈ ರೀತಿ ಸರ್ಕಾರ ನಡೆಸುವುದಾದರೆ, ಇವತ್ತು ನಾವು ಜನಪ್ರತಿನಿಧಿಗಳು. ನಾವು ಜನರಿಂದ ಮತವನ್ನು ತೆಗೆದುಕೊಂಡು ಬಂದಂಥ ನಾವುಗಳು. ನಮಗೇನಾದರೂ ಈ ಸರ್ಕಾರದಲ್ಲಿ ಮಾನ ಮರ್ಯಾದೆ ಇದೆಯೋ ಹೇಗೆ? ಇದಕ್ಕೇನು ಸರ್ಕಾರ ಉತ್ತರ ಕೊಡುತ್ತದೆ ಎಂಬುದನ್ನು ಹೇಳಬಯಸುತ್ತಿದ್ದೇನೆ. ಈ ರೀತಿ ಹೈ ಹ್ಯಾಂಡೆಡ್‌ನೆಸ್ ಇವತ್ತು ಸರ್ಕಾರದಲ್ಲಿ ನಡೆಯುತ್ತಾ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ

ನಾನು ಹೇಳಬಯಸುತ್ತೇನೆ. ಆಮೇಲೆ ಬೆಳೆ ವಿಮೆ ಬಗ್ಗೆ ಹೇಳಬೇಕಾದರೆ, ಇವತ್ತು ರಾಜ್ಯದಲ್ಲಿರುವಂಥ ರೈತ ಸಮೂಹ ಕಳೆದ ಮೂರು ವರ್ಷಗಳಿಂದ ಬರಗಾಲದ ಬವಣೆಯಿಂದ ಸಂಕಷ್ಟದಲ್ಲಿದ್ದಾರೆ. ಮತ್ತೆ ನಾಲ್ಕನೇ ವರ್ಷ ಬರಗಾಲ. ಬಹುಶಃ ಹಿಂದಿನ ಮೂರು ವರ್ಷಗಳ ಬರಗಾಲಕ್ಕಿಂತ, ಇದು ಬಹಳ ಗಂಭೀರವಾಗಿ ಮತ್ತು ಬಹಳ ಶೋಚನೀಯ ಪರಿಸ್ಥಿತಿಯಲ್ಲಿ ನಮ್ಮ ರೈತ ಜನಾಂಗ ಇರುವುದನ್ನು ನಾವು ನೋಡುತ್ತಿದ್ದೇವೆ ಅದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ, ಉಸ್ತುವಾರಿ ಮಂತ್ರಿಗಳು, ಅವರ ಅಧಿಕಾರಿಗಳು ಪ್ರವಾಸ ಮಾಡಿದರೆ, ಪರಿಸ್ಥಿತಿ ಏನು ಎಂಬುದು ಅವರಿಗೆ ಗೊತ್ತಾಗುತ್ತದೆ. ಇವತ್ತು ಹಳ್ಳಿಗಳಿಗೆ ಹೋದರೆ ಜಾನುವಾರುಗಳು ಇಲ್ಲ. ದನಕರುಗಳು ಮಾಯವಾಗಿವೆ. ನೀವು ಯಾವುದೇ ಒಂದು ಗ್ರಾಮಕ್ಕೆ ಹೋಗಿ, ಹಿಂದೆ ಎಷ್ಟು ಜಾನುವಾರುಗಳು ಇದ್ದವು, ಇವತ್ತು ಎಷ್ಟು ಇವೆ ಎಂಬುದನ್ನು ಎಣಿಸಿ ನೋಡಿ. ಒಂದು ವರ್ಷದ ಹಿಂದೆ, ಯಾವುದೋ ಗ್ರಾಮದಲ್ಲಿ ಒಂದು ಸಾವಿರ ಜಾನುವಾರುಗಳು ಇದ್ದರೆ, ಇವತ್ತು 400–500 ಜಾನುವಾರುಗಳು ಇದ್ದರೆ, ಅದೇ ದೊಡ್ಡ ಮಾತು. ಅಂದರೆ, ಶೇಕಡ 50 ರಷ್ಟು ಜನುವಾರುಗಳು ಗ್ರಾಮದಿಂದ ಮಾಯವಾಗಿವೆ. ಅವರು ಬೇರೆ ಯಾವುದೋ ರೈತರಿಗೆ ಮಾರುತ್ತಾ ಇಲ್ಲ ಈ ಜಾನುವಾರುಗಳನ್ನು ಕಟುಕರಿಗೆ ಮಾರಾಟ ಮಾಡುತ್ತಿದ್ದಾರೆ. ಆ ಪರಿಸ್ಥಿತಿ ಇವತ್ತು ರೈತ ಸಂಪೂರ್ಣವಾಗಿ ಬಡ್ಡಿ ಮನ್ನಾ ಮಾಡಿ ಎಂದು ಹೇಳಿದ್ದೆವು. ನೀವು ಮಾಡಲಿಲ್ಲ. ಕೇವಲ 6 ತಿಂಗಳಿಂದ ಬಡ್ಡಿ ಮನ್ನಾ ಮಾಡಿದಿರಿ. ಅದೂ ಅಸಲು ಹಣ ತುಂಬಿದವರಿಗೆ ಮಾತ್ರ. ಅಸಲು ಹಣವನ್ನೂ ತುಂಬುವುದಕ್ಕಾಗಲಿಲ್ಲ. ನೀವು ಬಾಂಧವರದಾಗಿದೆ. ಅವರು ಸಾಲ ತುಂಬಲಿಕ್ಕೆ ಆಗುತ್ತಾ ಇಲ್ಲ. ಬಡ್ಡಿ ಕೊಡುವುದಕ್ಕೆ ಆಗುತ್ತಾ ಇಲ್ಲ ಎಲ್ಲಿಯೂ ಸಾಲ ವಸೂಲಾತಿಯನ್ನು ಮುಂದೆ ಹಾಕಲಿಲ್ಲ. ಮಧ್ಯಮಾವಧಿ, ಅಲ್ಪಾವಧಿ ಸಾಲದ ಅವಧಿಯನ್ನು, ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ ಎಂದು ಹೇಳಿದೆವು, ನೀವು ಮಾಡುತ್ತೇವೆಂದು ಭರವಸೆಯನ್ನೂ ಕೊಟ್ಟಿರಿ. ಇನ್ನೂವರೆಗೆ ಆ ಭರವಸೆಯನ್ನು ಈಡೇರಿಸಲಿಲ್ಲ. ಹಾಗಾದರೆ, ಆ ರೈತಬಾಂಧವರು ಎಲ್ಲಿ ಹೋಗಬೇಕು? ಸಾಲ ವಸೂಲಾತಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಾ ಇದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾ ಇದ್ದಾರೆ. ಈಗಾಗಲೇ ಇನ್ನೂರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನೂ ಸಾಮೂಹಿಕ ಆತ್ಮಹತ್ಯೆಗಳು ನಡೆಯುತ್ತಾ ಇವೆ. ಇವತ್ತು ನೀವು ಪರಿಹಾರವನ್ನು ಎಷ್ಟು ಕೊಟ್ಟಿದ್ದೀರಿ, ಯಾವ ಕುಟುಂಬದವರಿಗೆ ಕೊಟ್ಟಿದ್ದೀರಿ, ಎಷ್ಟು ಜನರಿಗೆ ಕೊಟ್ಟಿದ್ದೀರಿ? ನಿಮ್ಮ ಕಡೆ ಸರಿಯಾದಂಥ ಲೆಕ್ಕ ಸಹಿತ ಇಲ್ಲ ಇವತ್ತು ಎಷ್ಟು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಮದರೆ, ನಿಮ್ಮ ಹತ್ತಿರ ಸರಿಯಾದ ಲೆಕ್ಕ ಇಲ್ಲ ಎಷ್ಟು ಜನರಿಗೆ, ಎಷ್ಟು ಕುಟುಂಬವರ್ಗದವರಿಗೆ ನೀವು ಪರಿಹಾರ ಕೊಟ್ಟಿದ್ದೀರಿ ಎಂಬ ಬಗ್ಗೆಯೂ ಸರಿಯಾದ ಲೆಕ್ಕ ನಿಮ್ಮ ಕಡೆ ಇಲ್ಲ. ನೀವು ಅಸಿಸ್ಟೆಂಟ್ ಕಮೀಷನರ್‌ರವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿದಿರಿ. ಆ ಕಮಿಟಿ ಎಷ್ಟೆಷ್ಟು ಕೇಸುಗಳ ಬಗ್ಗೆ ನಿರ್ಧಾರ ಮಾಡಿದೆ ಎಂಬುದರ ಬಗ್ಗೆ ಸರಿಯಾದ ಮಾಹಿತಿಯನ್ನು ರೆಕಾರ್ಡ್‌ನಲ್ಲಿ ಕೊಡಿ ಎಂದರೆ, ಇದನ್ನು ನೀವು ಕೊಡುವುದಕ್ಕೆ ಆಗುತ್ತಾ ಇಲ್ಲ. ವಸ್ತುಸ್ಥಿತಿ ಏನಿದೆ ಎಂಬುದನ್ನು ಹೇಳಿ ಎಂದು ಹೇಳಿದೆವು, ಅದನ್ನು ಇನ್ನೂವರೆಗೆ ನಿಮ್ಮ ಕಡೆಯಿಂದ ಹೇಳಲಿಕ್ಕೆ ಆಗುತ್ತಾ ಇಲ್ಲ. ಈ ರೀತಿ ರೈತರು ಆತ್ಮ ವಿಶ್ವಾಸವನ್ನು ಕಳೆದುಕೊಂಡು, ಆತ್ಮಹತ್ಯೆಗೆ ಹೋಗುವಂಥ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ನಿರ್ಮಾಣವಾಗಿದೆ. ಹೀಗಾಗಿ, ರಾಜ್ಯಸರ್ಕಾರ ಅವರ ಸಹಾಯಕ್ಕೆ ಬರಬೇಕಲ್ಲಾ. ಆದರೆ, ಆ ರೀತಿ ಬರುತ್ತಾ ಇಲ್ಲ. ಬರಗಾಲದ ಕಾಮಗಾರಿಯಲ್ಲಿ ಅವ್ಯವಹಾರಗಳು.

ಇದರ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಯಿತು. ಕೆಲವೊಂದು ಉದಾಹರಣೆಗಳನ್ನು ನಾವು ಹೇಳಿದ್ದೆವು. ಆದರೆ, ಇನ್ನೂವರೆಗೆ ಒಂದೂ ಎನ್‌ಕ್ವೈರಿ ಆಗಲಿಲ್ಲ. ಈ ಕಾಯಕ ಕೆರೆ ಯೋಜನೆಯೊಳಗೆ ಎಷ್ಟೊಂದು ದುರುಪಯೋಗವಾಗಿದೆ ಎಂಬ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ ಯಾವ ರೀತಿ ಇವತ್ತು ಹಗಲು ದರೋಡೆಯಾಗುತ್ತದೆ ಎಂಬುದನ್ನು ಒಂದು ಉದಾಹರಣೆ. ನಾನು ಮೊನ್ನೆ ಬಾಗಲಕೋಟೆ ಜಿಲ್ಲೆ ಮುಧೋಳಕ್ಕೆ ಹೋಗಿದ್ದೆ. ಈ ಮುಧೋಳ ತಾಲ್ಲೂಕಿನಲ್ಲಿ ಮೆಟಗುಡ್ಡ ಎಂಬ ಗ್ರಾಮ ಇದೆ. ಅಲ್ಲೊಂದು ಕಾಯಕ ಕೆರೆ ಯೋಜನೆಯೊಳಗೆ ಹೂಳು ತೆಗೆಯುವುದು ಮತ್ತು ಬೇರೆ ಬೇರೆ ಕಾರ್ಯಕ್ರಮಗಳು, ಅದರ ಬಗ್ಗೆ ನೋಡಿದೆ. ಆ ಕಾರ್ಯಕ್ರಮ ಇವತ್ತು ಅನುಷ್ಠಾನವಾಗಿದೆ. ಕಾಯಕ ಕೆರೆ ಯೋಜನೆಯೊಳಗೆ ಒಟ್ಟು ಅಲ್ಲಿ ಹಣ ಮಂಜೂರಾಗಿದ್ದು 27 ಲಕ್ಷ 90 ಸಾವಿರ ರೂ.ಗಳು ಅದರಲ್ಲಿ ಕೆಲವೊಂದು ಡಿವೈಡ್ ಮಾಡಿದ್ದಾರೆ. ಇದನ್ನು ನಾನೇ ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ. ನಾನು ಎಕ್ಸ್‌ಪರ್ಟ್ ಅಲ್ಲದೇ ಇದ್ದರು ಇವತ್ತು ಪ್ರೈಮಾಫೇಸಿ ನೋಡಿದಾಗ ಯಾವರೀತಿಯಲ್ಲಿ ಲೂಟಿ ಮಾಡಿದ್ದಾರೆಂಬುದು ನನ್ನ ಕಣ್ಣಿಗೆ ಬಿದ್ದಿದೆ. ಅಲ್ಲಿಯ ಗ್ರಾಮಸ್ಥರು ಹೇಳಿದಂತೆ ಮತ್ತು ನಾನು ಸ್ವತಃ ನಿಶ್ಚಯ ಮಾಡಿದಾಗ, ಇವತ್ತು ಹಗಲು ದರೋಡೆಯಾಗಿದೆ ಎಂಬುದು ಎದ್ದು ಕಾಣುತ್ತಿದೆ. ನಾನು ಕೇವಲ 3–4 ಐಟಂಗಳ ಬಗ್ಗೆ ಮಾತ್ರ ಹೇಳುತ್ತೇನೆ. 27 ಲಕ್ಷ 90 ಸಾವಿರದಲ್ಲಿ ಕ್ಯಾಚ್‌ಮೆಂಟ್ ಏರಿಯಾ ಡೆವಲಪ್‌ಮೆಂಟ್ ಸಲುವಾಗಿ ಮಂಜೂರಾದ ಹಣ 4 ಲಕ್ಷ 20 ಸಾವಿರ ರೂಗ.ಳು ಅದರಲ್ಲಿ ಖರ್ಚು ಮಾಡಿದ್ದು ಕೇವಲ 45 ಸಾವಿರ. ಅದರಲ್ಲಿ 3 ಲಕ್ಷ 75 ಸಾವಿರ ರೂ ಭ್ರಷ್ಟಾಚಾರ. ಕೆರೆ ಹೂಳೆತ್ತುವುದಕ್ಕೆ 5 ಲಕ್ಷ 58 ಸಾವಿರ ರೂ ಮಂಜೂರಾಗಿದೆ. ಅದರಲ್ಲಿ ಖರ್ಚು ಮಾಡಿದ್ದು ಕೇವಲ 1 ಲಕ್ಷ 90 ಸಾವಿರ ರೂಗಳು ಅಂದರೆ, ಅಲ್ಲಿ ದರೋಡೆಯಾಗಿದ್ದು 3 ಲಕ್ಷ 68 ಸಾವಿರ ರೂ. ಇನ್ನು ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಬಗ್ಗೆ 8 ಲಕ್ಷ 36 ಸಾವಿರ ರೂ ಮಂಜೂರಾಗಿದೆ. ಖರ್ಚು ಮಾಡಿದ್ದು 3 ಲಕ್ಷ ರೂ ಮಾತ್ರ. ಉಳಿದಿದ್ದು 5 ಲಕ್ಷ 36 ಸಾವಿರ ರೂ ಭ್ರಷ್ಟಾಚಾರ. ಆಮೇಲೆ ವೆಸ್ಟ್‌ವೇರ್ ಎಂದು, ಅದೇ ಡೆವಲಪ್‌ಮೆಂಟ್ ಸಲುವಾಗಿ 9 ಲಕ್ಷ 76 ಸಾವಿರ ರೂ ಮಂಜೂರಾಗಿದ್ದು, ಕೇವಲ 2 ಲಕ್ಷ 50 ಸಾವಿರ ರೂ ಖರ್ಚು ಮಾಡಿದ್ದು. ಅಂದರೆ, 7 ಲಕ್ಷ 26 ಸಾವಿರ ರೂ ಅಲ್ಲಿ ಭ್ರಷ್ಟಾಚಾರ ಆಗಿದ್ದು. ಅಂದರೆ, ಒಟ್ಟು 27 ಲಕ್ಷ 90 ಸಾವಿರ ರೂನಲ್ಲಿ ಖರ್ಚು ಮಾಡಿದ್ದು, ಇಂಜಿನಿಯರ್ಸ್ ಮತ್ತು ಅಧಿಕಾರಿಗಳು 7ಲಕ್ಷ 85 ಸಾವಿರ ರೂ ಮಾತ್ರ ಖರ್ಚು ಮಾಡಿದ್ದಾರೆ. ಅಂದರೆ, 20 ಲಕ್ಷ 5 ಸಾವಿರ ರೂ ಭ್ರಷ್ಟಾಚಾರವಾಗಿದೆ. ಇದರಲ್ಲಿ ಯಾರಾದರೂ ಒಬ್ಬ ಆರ್ಡಿನರಿ ಪ್ರೂಡೆಂಟ್ ಮ್ಯಾನ್ ಹೋಗಿ ನೋಡಿದರು, ಇದು ಮೇಲ್ನೋಟಕ್ಕೆ ಗೊತ್ತಾಗುವಂಥಾದ್ದು. ಇದರ ಬಗ್ಗೆ ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಸಾಕ್ಷಿ ಸಮೇತವಾಗಿ ಪತ್ರ ಬರೆದು ತಿಳಿಸಿದಾಗ ನನಗೆ ಕೇವಲ ಉತ್ತರ ಬಂತು. ನಮ್ಮ ಅಧಿಕಾರಿಗಳನ್ನು ಕಳುಹಿಸುತ್ತಿದ್ದೇವೆ. ಎನ್‌ಕ್ವೈರಿ ಮಾಡಿಸುತ್ತೇವೆಂದರು. ಇನ್ನೂವರೆಗೆ ಯಾವುದೇ ಎನ್‌ಕ್ವೈರಿ ಮಾಡಲಿಲ್ಲ, ಕ್ರಮ ಕೈಗೊಳ್ಳಲಿಲ್ಲ. ಈ ರೀತಿ ನಾನು ಒಂದು ಉದಾಹರಣೆಯನ್ನು ಕೊಡುತ್ತಾ ಇದ್ದೇನೆ. ಈ ರೀತಿ ಇಡೀ ರಾಜ್ಯದಲ್ಲಿ, ಇವತ್ತು ಕಾಯಕ ಕೆರೆ ಯೋಜನೆ ಇರಬಹುದು. ಬರಗಾಲ ಬೇರೆ ಹೂಳು ತೆಗೆಯುವಂಥಾದ್ದು ಇರಬಹುದು. ರಸ್ತೆಗಳ ಕಾಮಗಾರಿ ಇರಬಹುದು. ಜಲಸಂರಕ್ಷಣೆ ಯೋಜನೆ ಇರಬಹುದು ಎಲ್ಲಾ ಕಡೆ ಇವತ್ತು ಈ ರೀತಿ ಹಗಲು ದರೋಡೆ ನಡೆಯುತ್ತಾ ಇದೆ. ಇದರ ಬಗ್ಗೆ ಸರ್ಕಾರದಿಂದ ಯಾವುದೇ ಕ್ರಮ ಇಲ್ಲ. ಹೀಗಾಗಿ ಇವತ್ತು [illegible]

ಏನು ಸ್ವಾಮಿ ಇವತ್ತು ನಾವೇನೂ ಮಾಡುವುದಕ್ಕಾಗುತ್ತಾ ಇಲ್ಲವೆಂದು ಕೈ ಚೆಲ್ಲಿ ಕುಳಿತಿದ್ದಾರೆ. ಆಮೇಲೆ ಜಲಸಂರಕ್ಷಣೆ ಯೋಜನೆ. ಹಳ್ಳಿಗಳಲ್ಲಿ ಇವರು ಏನು ಹೇಳಿದರು. ಆ ಅಧಿಕಾರಿಗಳು ಹೋಗಿ ಹೇಳುತ್ತಾರೆ. ನಿಮ್ಮ ಹೊಲದ ಬದು ತೆಗೆಯುವ ಕೆಲಸ ಮಾಡಿ, ನಿಮ್ಮ ಹೊಲದಲ್ಲಿ ಕೃಷಿ ಹೊಂಡಗಳನ್ನು ಮಾಡಿ ಎಂದು ಹೇಳುತ್ತಾರೆ. ನಿಮಗೆ 10 ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳುತ್ತಾರೆ. ನೀವು ಎಷ್ಟು ಜನ ಬೇಕಾದರೂ ಬನ್ನಿ ಎಂದು ಹೇಳುತ್ತಾರೆ. ಪಾಪ, ಆ ಅಧಿಕಾರಿ ನಂಬಿಕೊಂಡು ಎಷ್ಟೋ ಕಡೆಗಳಲ್ಲಿ ಅವರು ಕೆಲಸ ಮಾಡಿದ್ದಾರೆ. ಆದರೆ, ಇವತ್ತಿನವರೆಗೆ ಅವರಿಗೆ ಒಂದು ಕೆ.ಜಿ. ಅಕ್ಕಿಯೂ ಒಂದು ಮುಟ್ಟಲಿಲ್ಲ. ನಾವು ಯಾವ ಯಾವ ಗ್ರಾಮಕ್ಕೆ ಹೋಗಿದ್ದೇವೆ, ಅಲ್ಲೆಲ್ಲಾ ರೈತರು ನಮಗೆ ದುಂಬಾಲು ಬಿದ್ದರು. ನೋಡಿ, ನಾವು ಈ ರೀತಿ ಇಷ್ಟು ಕೆಲಸ ಮಾಡಿದ್ದೇವೆ. ನಮಗೆ ಅಕ್ಕಿ ಬರುತ್ತಾ ಇಲ್ಲ ಎಂದು ಹೇಳಿದರು. ನಾನು ಡಿ.ಸಿ. ಯವರಿಗೆ ಫೋನ್ ಮಾಡಿ ಕೇಳಿದೆ. ಅದಕ್ಕೆ, ಅವರು ಅದಿನ್ನೂ ಪೂರ್ಣವಾಗಿಲ್ಲ. ಹಾಗೆ, ಹೀಗೆ ಎಂದು ನೂರೆಂಟು ತಾಂತ್ರಿಕ ಕಾರಣಗಳನ್ನು ಹೇಳುತ್ತಾರೆ. ಆದರೆ, ಆ ಕೆಲಸ ಮಾಡಿಕೊಂಡ ರೈತನಿಗೆ, ತನ್ನ ಕೈಯಿಂದ ಖರ್ಚು ಮಾಡಿಕೊಂಡವನಿಗೆ ಇವತ್ತಿಗೂ ಒಂದು ಕೆ.ಜಿ. ಅಕ್ಕಿ ಬರಲಿಲ್ಲ. ಅಂದರೆ, ಇವತ್ತು ಯಾವ ಪರಿಸ್ಥಿತಿ ಇದೆ? ಇವತ್ತು ಕೇಂದ್ರಸರ್ಕಾರ ನಿಮಗೆ ನೆರವು ಕೊಟ್ಟರೂ, ಅದನ್ನು ನೀವು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಎನ್.ಡಿ.ಎ. ಸರ್ಕಾರದ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು 10 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಕೊಟ್ಟರು, 450 ಕೋಟಿ ರೂಪಾಯಿ ಹಣ ಕೊಟ್ಟರು, ಅದನ್ನು ಸರಿಯಾಗಿ ಪಯೋಗ ಮಾಡಲಿಕ್ಕೆ ನಿಮಗೆ ಆಗಲಿಲ್ಲ. ಇಷ್ಟೇ ಅಲ್ಲ. ಬೇರೆ ಬೇರೆ ಯೋಜನೆಗಳಿಂದ ಸಾಕಷ್ಟು ಅಕ್ಕಿ ಬರುತ್ತಾ ಇದೆ. ಅದ್ನನೂ ನೀವು ಸರಿಯಾಗಿ ಉಪಯೋಗ ಮಾಡಲಿಕ್ಕೆ ಆಗುತ್ತಾ ಇಲ್ಲ. ಅಂದರೆ, ಈ ಸರ್ಕಾರ ಏಕೆ ಇದೆ ಎಂದು ನಾನು ಇವತ್ತು ಕೇಳುತ್ತಾ ಇದ್ದೇನೆ. ನೀವು ರೈತರ ನೆರವಿಗೇ ಬರದೇ ಇದ್ದರೆ, ಅದೂ ಕಷ್ಟಕಾಲದಲ್ಲಿ ನೀವು ನೆರವಿಗೆ ಬರದೇ ಇದ್ದರೆ, ಈ ಸರ್ಕಾರ ಇದ್ದರೇನು, ಬಿಟ್ಟರೇನೂ ಎಂದು ನಾನು ಕೇಳಬೇಕಾಗುತ್ತದೆ. ಇದೇ ಪರಿಸ್ಥಿತಿ ಇವತ್ತು ಮುಂದುವರಿಯುತ್ತಿದೆ. ಉದಾಹರಣೆಗೆ ಇನ್ನೊಂದು ಬೆಳೆ ವಿಮೆ. ನೀವು ಬೆಳೆ ವಿಮೆಯಲ್ಲಿ ಹಣ ಬಿಡುಗಡೆ ಮಾಡುವುದಕ್ಕೆ ಏನು ತೊಂದರೆ ಇದೆ? ಇವತ್ತು ಬೆಳೆ ವಿಮೆ ಹಣ ಬಹಳ ದೊಡ್ಡದೇನೂ ಇಲ್ಲ. ಇವತ್ತು ನೀವು 26 ಸಾವಿರ ಕೋಟಿ ರೂ 28 ಸಾವಿರ ಕೋಟಿ ರೂ ಬಜೆಟ್ ಮಂಡನೆ ಮಾಡುತ್ತೀರಿ. ಕೃಷಿ ಸಲುವಾಗಿ, ಗ್ರಾಮೀಣ ಅಭಿವೃದ್ಧಿ ಸಲುವಾಗಿ ಇಷ್ಟೊಂದು ಹಣ ಕೊಟ್ಟೆವು ಎಂದು ಎಲ್ಲಾ ಹೇಳುತ್ತೀರಿ. ಆದರೆ, ಇವತ್ತು ನಿಜವಾಗಿಯೂ ಬೆಳೆ ವಿಮೆ ಹಣ ನಮ್ಮ ರೈತ ಬಾಂಧವರಿಗೆ ಸಿಕ್ಕುತ್ತಾ ಇಲ್ಲ. ಅದರಲ್ಲಿ ಸಹಿತ ಅನ್ಯಾಯ. ನಿಮಗೆ ಹೇಳಬೇಕಾದರೆ, ಮೊನ್ನೆ ನವಲಗುಂದದಲ್ಲಿ ಬಹಳಷ್ಟು ಸಂಘರ್ಷ, ಲಾಠಿ ಚಾರ್ಜ್ ರೈತರ ಮೇಲೆ ಆಯಿತು. ಅದಕ್ಕೆ ಕಾರಣ ಏನು? ಸರಿಯಾದಂಥ ಬೆಳೆ ವಿಮೆ ಹಣ ನಮ್ಮ ರೈತ ಬಾಂಧವರಿಗೆ ರಿಲೀಸ್ ಆಗಲಿಲ್ಲ. ಮತ್ತು ಎಲ್ಲಿ ಈ ಕೃಷಿ ಅಧಿಕಾರಿಗಳು, ಕಂದಾಯ ಅಧಿಕಾರಿಗಳು ಸಿರಿಯಾಗಿ ಅಣೆವಾರಿ ಲೆಕ್ಕಾಚಾರ ಮಾಡುವುದಿಲ್ಲ, ಎಷ್ಟು ಇಳುವರಿ ಬಂದಿದೆ. ಎಷ್ಟು ನಷ್ಟ ಆಗಿದೆ ಎಂಬುದರ ಬಗ್ಗೆ ಸರಿಯಾದಂಥ ಲೆಕ್ಕ ಮಾಡುವುದಿಲ್ಲ. ಸರಿಯಾದಂಥ ವರದಿ ಕೊಡುವುದಿಲ್ಲ. ಹೀಗಾಗಿ ಇವತ್ತು ನವಲಗುಂದ ತಾಲ್ಲೂಕಿನಲ್ಲಿ ಹಾಗೂ ಪಕ್ಕದಲ್ಲಿ ಗದಗ್ ಜಿಲ್ಲೆ ಮತ್ತು ಪಕ್ಕದಲ್ಲಿ ನರಗುಂದ ತಾಲ್ಲೂಕು, ರೋಣ ತಾಲ್ಲೂಕು. ಇವತ್ತು ರೋಣ ತಾಲ್ಲೂಕಿನಲ್ಲಿ, ನರಗುಂದ ತಾಲ್ಲೂಕಿನಲ್ಲಿ ಅದೇ ಬೆಳೆಗಳು. ಮತ್ತು

ಅಷ್ಟೇ ನಷ್ಟವಾಗಿದೆ. ಆದರೆ ನರಗುಂದ ತಾಲ್ಲೂಕಿನಲ್ಲಿದ್ದಂತ ರೈತರಿಗೆ ಪರಿಹಾರ ಬೇರೆ. ರೋಣ ತಾಲ್ಲೂಕಿನಲ್ಲಿದ್ದಂಥ ರೈತರಿಗೆ ಬೇರೆ ಪರಿಹಾರ! ಎರಡೂ ಏರಿಯಗಳು ಒಂದೇ. ಹೀಗೆ ಬೆಳೆನಷ್ಟದ ಹಣ ಬಿಡುಗಡೆಯ ವಿಚಾರದಲ್ಲಿ ಹೀಗೆ ಏಕೆ ಅನ್ಯಾಯವಾಗುತ್ತಿದೆ? ಇದನ್ನು ಕೇಳಿ ರೈತರು ಹೋರಾಟ ಮಾಡಿದರೆ, ಬೆಳಿಗ್ಗೆಯಿಂದ ಸಾಯಂಕಾಲದ ವರೆಗೆ ಅವರು ಬಹಳ ಶಾಂತ ರೀತಿಯಿಂದ ಹೋರಾಟವನ್ನು ಮಾಡಿದ್ದಾರೆ. ನಾಲ್ಕುವರೆ ಘಂಟೆಯ ವರೆಗೆ ಸುಮಾರು ಐದಾರು ಸಾವಿರಗಳಷ್ಟು ರೈತ ಬಾಂಧವರು ಅಲ್ಲಿ ಜಮಾಯಿಸಿದ್ದರು. ಧರಣಿ ಸತ್ಯಾಗ್ರಹ, ಹೋರಾಟವನ್ನು ಅವರು ಅಲ್ಲಿ ಮಾಡುತ್ತಾ ಇದ್ದರು. ಅಲ್ಲಿಗೆ ಅಧಿಕಾರಿಗಳು ಬಂದು ಸರಿಯಾದಂಥ ಒಂದು ವಿವರಣೆಯನ್ನು ಕೊಡಬೇಕಾಗಿತ್ತು. ಎಲ್ಲಿ ತಪ್ಪಾಗಿದೆ, ಬೆಳೆ ವಿಮೆ ಹಣವನ್ನು ನಾವು ಯಾವಾಗ ಬಿಡುಗಡೆ ಮಾಡುತ್ತೇವೆ, ಇದರ ಬಗ್ಗೆ ಅವರು ಸ್ಪಷ್ಟನೆಯನ್ನು ಕೊಡಬೇಕಾಗಿತ್ತು. ಆದರೆ ಯಾವ ಅಧಿಕಾರಿಯೂ ಮುಂದೆ ಬರಲಿಲ್ಲ. ಅಲ್ಲಿದ್ದಂಥ ಎಸ್‌ಪಿ ಅವರೊಂದಿಗೆ ಸರಿಯಾಗಿ ಮಾತನಾಡಲು ತಯರಾಗಿರಲಿಲ್ಲ. ಅವರು ಸರಿಯಾಗಿ ಅದನ್ನು ಹ್ಯಾಂಡಲ್ ಮಾಡಲಿಲ್ಲ. ಎಸ್‌ಪಿಯವರು ಸ್ವಲ್ಪ ತಾಳ್ಮೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಅದನ್ನು ಬಿಟ್ಟು ಒಮ್ಮೆಗೆ ಲಾಠಿ ಚಾರ್ಜ್. ಎಲ್ಲೋ ಒಂದು ಕಡೆ ಕಲ್ಲು ಬಿದ್ದ ಕೂಡಲೇ ತತ್‌ಕ್ಷಣವೇ ಲಾಠಿ ಚಾರ್ಜ್, ಅಶ್ರುವಾಯು ಪ್ರಯೋಗ, ಹೀಗಾಗಿ ಕನಿಷ್ಠ 25 ರಿಂದ 30 ಜನ ರೈತರು ಗಂಬೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಕಿಮ್ಸ್‌ಗೆ ಅಡ್ಮಿಟ್ ಮಾಡಿದರು. ಅವೊತ್ತು ರಾತ್ರಿ ಗಂಭೀರ ಗಾಯಗೊಂಡವರಿಂದ ರಕ್ತ ಸೋರುತ್ತಾ ಇದೆ, ಆದರೂ ಕೂಡ ಅವರ ಮೇಲೆ 307ರನ್ವಯ ಕೇಸ್. ರೈತರು ಗಾಯಗೊಂಡು ಅಡ್ಮಿಟ್ ಆದವರ ಮೇಲೆ, 307ರನ್ವಯ ಕೇಸ್. ಹಾಗೆಂಯೇ ಅಲ್ಲಿ ಟ್ರೀಟ್‌ಮೆಂಟ್ ಕೂಡ ಸರಿಯಾಗಿ ಕೊಡಲಿಲ್ಲ. ಹೀಗೆ ಆಸ್ಪತ್ರೆಯಲ್ಲಿರಬೇಕಾದಂಥ ರೈತರನ್ನು, ರಕ್ತ ಸೋರುತ್ತಿದ್ದ ರೈತರನ್ನು ಬಳ್ಳಾರಿ ಜೈಲಿಗೆ ಕರೆದುಕೊಂಡು ಹೋದರು. ಹೀಗೆ 70ಕ್ಕೂ ಹೆಚ್ಚು ರೈತರು ಬಳ್ಳಾರಿ ಜೈಲ್‌ನಲ್ಲಿದ್ದಾರೆ. ಅವರು ಇನ್ನೂ ಬಿಡುಗಡೆಯಾಗಿಲ್ಲ. ಇದು ಯಾವಾಗ ಆಯಿತು? ಇವೊತ್ತು ನಾವು ರೈತಮುಖಂಡ ನಂಜುಂಡಸ್ವಾಮಿಯವರಿಗೆ ಶೋಕವನ್ನು ವ್ಯಕ್ತಪಡಿಸುವಂಥ ಸಮಯ. ಅವರು ನಿಧನರಾದ ದಿವಸವೇ ನವಲಗುಂದದಲ್ಲಿ ರೈತರ ಮೇಲೆ ಧಾಳಿ. ಪೊಲೀಸ್ ದೌರ್ಜನ್ಯ. ಪೊಲೀಸ್ ಲಾಠಿಚಾರ್ಜ್. ಅಂದರೆ ಇದು ಯಾವರೀತಿಯಲ್ಲಿದೆ ಎಂದು ನೋಡಿ. ನಂಜುಂಡಸ್ವಾಮಿಯವರು ರೈತರ ನಾಯಕರಾಗಿ ರೈತರ ಸಲುವಾಗಿ ಹೋರಾಟ ಮಾಡಿದವರು. ಅವರ ನಿಧನದ ದಿನದಂದೇ ನವಲಗುಂದದಲ್ಲಿ ರೈತರ ಮೇಲೆ ಲಾಠಿ ಚಾರ್ಜ್ ಆಗುತ್ತದೆ. ಹಿಂದೆ ಇದೇ ರೀತಿಯಲ್ಲಿ ನರಗುಂದ, ನವಲಗುಂದದಲ್ಲಿ ರೈತರ ಮೇಲೆ ಗುಂಡು ಹಾಕಿ, ಗುಂಡೂರಾವ್ ಸರಕಾರ ಮನೆಗೆ ಹೋಯಿತು. ಇದನ್ನು ಕೃಷ್ಣರವರ ಸರಕಾರದವರು ಅರ್ಥಮಾಡಿಕೊಳ್ಳಬೇಕು. ಈಗ ನೀವು ಮತ್ತೆ ನವಲಗುಂದದಲ್ಲಿ ರೈತರ ಮೇಲೆ ಪೊಲೀಸ್ ದೌರ್ಜನ್ಯ ಮಾಡುತ್ತಿದ್ದೀರಿ. ಲಾಠಿ ಚಾರ್ಜ್, ಗೋಲಿಬಾರ್ ಮಾಡುತ್ತೀರಿ. ನನಗನ್ನಿಸುತ್ತದೆ. ಕರ್ನಾಟಕದ ಕಾಂಗ್ರೆಸ್ ಸರಕಾರ, ಮುಖ್ಯಮಂತ್ರಿ ಕೃಷ್ಣರವರ ಸರಕಾರ, ಮನೆಗೆ ಹೋಗುವಂಥ ವೇಳೆ ಬಂದಿದೆ, ಜನರು ಅವರನ್ನು ಮನೆಗೆ ಕಳುಹಿಸಲು ತಯಾರಾಗಿದ್ದಾರೆ. ಅದಕ್ಕೆ ಈ ರೀತಿಯಲ್ಲಿ ನೀವು ದುಂಡಾವರ್ತಿಯನ್ನು, ದೌರ್ಜನ್ಯವನ್ನು ರೈತರ ಮೇಲೆ ಮಾಡುತ್ತಾ ಇದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ನಿಮ್ಮ ಸರಕಾರ ಬಹಳ ದಿವಸಗಳ ಕಾಲ ಉಳಿಯುವುದಿಲ್ಲ. ಮನೆಗೆ ಹೋಗುವಂಥ ಕಾಲ ಬಂದಿದೆ. ಆ ಕಾರಣದಿಂದ ಈ ರೀತಿಯ ದೌರ್ಜನ್ಯವನ್ನು ರೈತರ ಮೇಲೆ ನಡೆಸುತ್ತಿದ್ದೀರಿ.

ಜೈಲ್‌ನಲ್ಲಿ ಸಾಕಷ್ಟು ಜನ ರೈತರು ಬಳ್ಳಾರಿ ಜೈಲಿನಲ್ಲಿ ಇದ್ದಾರೆ, ಮತ್ತೆ ನೂರಾರು ಜನರನ್ನು ಅರೆಸ್ಟ್ ಮಾಡುವಂಥಾದ್ದು ನಡೆಯುತ್ತಿದೆ. ಅವರನ್ನು ಬಂಧಿಸುವಂಥ ಕ್ರಮ ನಡೆಯುತ್ತಿದೆ. ನಮಗೆ ಬೆಳೆ ವಿಮೆ ಹಣವನ್ನು ಕೊಡಿ, ಅದು ನಮ್ಮ ಹಕ್ಕು, ಅದನ್ನು ಕೊಡಿ ಎಂದು ಕೇಳಿದರೆ ನೀವು ಅವರ ಮೇಲೆ ಲಾಟಿ ಚಾರ್ಜನ್ನು ಮಾಡುತ್ತಿದ್ದೀರಿ. ಇದು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರಿಯಾದ ಕ್ರಮವಲ್ಲ ಎನ್ನುವಂಥಾದ್ದನ್ನು ಈ ಸಂದರ್ಭದಲ್ಲಿ ಸರಕಾರದವರಿಗೆ ನಾನು ಹೇಳಬಯಸುತ್ತೇನೆ. ಅಂತೆಯೇ ನನು ಸರಕಾರವನ್ನು ಒತ್ತಾಯ ಮಾಡುತ್ತಾ ಇದ್ದೇನೆ. ಇವೊತ್ತು ಮುಂಗಾರು ಬೆಳೆ ವಿಮೆ ಹಣ ಏನು ಬಿಡುಗಡೆಯಾಗಬೇಕು, ಅದು 250–300 ಕೋಟಿ ರೂಗಳಿಗಿಂತಲೂ ಜಾಸ್ತಿಯಿದೆ. ಸರ್ಕಾರ ಅದರ ನಿಖರ ಮೊತ್ತ ಎಷ್ಟು ಎಂಬುದನ್ನು ಸ್ಪಷ್ಟನೆ ಮಾಡಬೇಕಾಗುತ್ತದೆ. ಈ ಕುರಿತು ಪೂರ್ಣ ಗೊಂದಲ ನಿರ್ಮಾಣವಾಗಿದೆ. ಎಷ್ಟು ಬೆಳೆವಿಮೆ ಹಣ ಬರಬೇಕು, ಯಾವ ಯಾವ ಬೆಳೆಗೆ ಎಷ್ಟೆಷ್ಟು ಬರಬೇಕು, ಯಾವ ಜಿಲ್ಲೆಯಲ್ಲಿ ಎಷ್ಟು ಕೊಡಬೇಕು, ಮುಂತಾದ ಯಾವುದೂ ನಿರ್ಧಾರವಿಲ್ಲ. ಸ್ಪಷ್ಟತೆಯಿಲ್ಲ. ಅದಕ್ಕಾಗಿ ನಾನು ಸರಕಾರವನ್ನು ಒತ್ತಾಯ ಮಾಡುತ್ತಾ ಇದ್ದೇನೆ. ಈ ಬೆಳೆ ವಿಮೆ ಹಣವು ಎಷ್ಟು ಬರಬೇಕಾಗಿದೆ. ಮುಂಗಾರು ಮತ್ತು ಹಿಂಗಾರು ಬೆಳೆ ವಿಮೆ ಹಣ ಎಷ್ಟು ಕೊಡಬೇಕಾಗಿದೆ, ಎಷ್ಟು ಕೊಟ್ಟಿದ್ದೀರಿ, ಬಿಡುಗಡೆಯಾದ ಹಣ ಎಷ್ಟು, ಇನ್ನೂ ಎಷ್ಟು ರಿಲೀಸ್ ಮಾಡಬೇಕು, ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಎಂಬ ಒಂದು ವಿವರವನ್ನು ಕೊಡಬೇಕು. ಆ ಕುರಿತು ಒಂದು ಶ್ವೇತ ಪತ್ರವನ್ನು ಹೊರಡಿಸಬೇಕೆಂದು ನಾನು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಈ ಕುರಿತು ರೈತರಲ್ಲಿ ಗೊಂದಲವುಂಟಾಗಿದೆ. ನವಲಗುಂದದಲ್ಲಿ ರೈತರು ಮಾಡಿದ ಹೋರಾಟವು ಅಲ್ಲಿಗೆ ಸೀಮಿತವಾಗುವುದಿಲ್ಲ, ಇದು ರಾಜ್ಯದಾದ್ಯಂತ ಹಬ್ಬುತ್ತದೆ. ಅಂಥ ಒಂದು ಆಕ್ರೋಶ ಭಾವನೆಯು ರೈತರಲ್ಲಿದೆ. ಅದಕ್ಕೆ ಕಾರಣ ಬೆಳೆ ವಿಮೆ ಹಣವು ಬಿಡುಗಡೆಯಾಗಿಲ್ಲವಾದುದಕ್ಕೆ. ಆದುದರಿಂದ ತತ್‌ಕ್ಷಣವೇ ಬೆಳೆವಿಮೆ ಹಣವನ್ನು ಬಿಡುಗಡೆ ಮಾಡಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಹಾಗೆಯೇ ಶ್ವೇತಪತ್ರವನ್ನು ನೀವು ಹೊರಡಿಸಬೇಕು. ಮಾನ್ಯ ಹೆಚ್.ಕೆ. ಪಾಟೀಲರು ಕೃಷಿ ಸಚಿವರಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಹೊಸದಾಗಿ ಹುರುಪಿಗೆದ್ದು ನಾವು 50 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ, ಅಷ್ಟು ಮಾಡಿದ್ದೇವೆ, ಇಷ್ಟು ಮಾಡಿದ್ದೇವೆ, ಮುಂದೆ ಜನವರಿ ತಿಂಗಳಲ್ಲಿ ಮತ್ತಷ್ಟು ಬಿಡುಗೆ ಮಾಡುತ್ತೇವೆಂದು ಹೇಳಿದ್ದರು. ಹೀಗೆ ಹೇಳಿದವರು ಆ ಮೇಲೆ ಗಪ್ ಆಗಿಬಿಟ್ಟಿದ್ದಾರೆ. ಯಾಕೋ ಏನೋ ಈಗ ಗಪ್ ಆಗಿ ಯಾವುದೇ ಸುದ್ದಿಯಿಲ್ಲದಂತಾಗಿದೆ. ಅವರು ಬೆಳೆವಿಮೆ ಬಗ್ಗೆ ಮಾತನಾಡುತ್ತಾ ಇಲ್ಲ. ಬಹುಶಃ ರಾಜ್ಯ ಸರಕಾರದವರು ಅವರಿಗೆ ಹಣವನ್ನು ಬಿಡುಗಡೆ ಮಾಡಿರಲಿಕ್ಕಿಲ್ಲ. ಹಾಗಾಗಿ ಅವರೂ ಸುಮ್ಮನೆ ಕುಳಿತುಕೊಂಡಿದ್ದಾರೆ. ಅಲ್ಲಿ ರೈತರು ಹೊಡೆದಾಡಿ ಸಾಯುತ್ತಾ ಇದ್ದಾರೆ. ಆದುದರಿಂದ ಇದರ ಬಗ್ಗೆ ಒಂದು ಸ್ಪಷ್ಟನೆ ಮತ್ತು ಒಂದು ಶ್ವೇತಪತ್ರವನ್ನು ಹೊರಡಿಸಬೇಕು. ಹಾಗೂ ಹಣವನ್ನು ರಿಲೀಸ್ ಮಾಡಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಾ ಇದ್ದೇನೆ. ಹಾಗೆಯೇ ನವಲಗುಂದದ ರೈತರು ಏನು ಬಳ್ಳಾರಿ ಜೈಲ್‌ನಲ್ಲಿ ಏನಿದ್ದಾರೆ, 70ಕ್ಕೂ ಹೆಚ್ಚು ಜನರು ಜೈಲ್‌ನಲ್ಲಿದ್ದಾರೆ. ಅವರನ್ನು ತತ್‌ಕ್ಷಣವೇ ಬಿಡುಗಡೆ ಮಾಡುವಂಥ ಕ್ರಮವನ್ನು ಸರಕಾರದವರು ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತು ಇನ್ನೂ ಹೆಚ್ಚಾಗಿ ಯಾರನ್ನೂ ಬಂಧಿಸಬಾರದು ಎಂದು ಹೇಳಬಯಸುತ್ತೇನೆ. ಇದರ ಬಗ್ಗೆ ಯಾವ ಎಸ್‌ಪಿಯಾಗಲೀ, ಪೋಲೀಸ್ ಅಧಿಕಾರಿಗಳಾಗಲೀ ಯಾರೂ ತಾಳ್ಮೆಗೆಟ್ಟು ಪರಿಸ್ಥಿತಿಯನ್ನು ಸರಿಯಾಗಿ ಹ್ಯಾಂಡಲ್ ಮಾಡದೆ,

ರೈತರ ಮೇಲೆ ಲಾಟಿ ಚಾರ್ಜ್ ಮಾಡಿದ್ದಾರೆ, ಇಂಥ ತಪ್ಪನ್ನು ಯಾರು ಮಾಡಿದ್ದಾರೆ, ಅವರ ಮೇಲೆ ಕಾನೂನಿ ಕ್ರಮವನ್ನು ಜರುಗಿಸಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಹಾಗಾಗಿ ಈ ವಿಚಾರಗಳ ಬಗ್ಗೆ ಸರಕಾರದವರು ಸ್ಪಂಧಿಸಬೇಕು ಮತ್ತು ಬೆಳಿಗ್ಗೆ ಹೇಳಿದ ಹಾಗೆ, ರಾಜ್ಯ ಸರಕಾರದವರು ಚಳುವಳಿಯಲ್ಲಿದ್ದಂಥ ರೈತರ ಮೇಲಿದ್ದ ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಹಾಗೆ ವಾಪಸ್ ತೆಗೆದುಕೊಂಡಂಥ ಕೇಸ್‌ಗಳು ಯಾವುವು ಎಂಬ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಈ ಒಂದು ರೈತ ಸಂಘದ ಚಳುವಳಿ, ಇನ್ನಿತರ ಚಳುವಳಿಗಳಲ್ಲಿ ನಿರತರಾಗಿದ್ದ ಜನಸಾಮಾನ್ಯರು ಮತ್ತು ರೈತರುಗಳ ಮೇಲೆ ಏನು ಮೊಕದ್ದಮೆಗಳು ದಾಖಲಾಗಿವೆ, ಅವುಗಳನ್ನು ತತ್‌ಕ್ಷಣವೇ ವಾಪಸ್ ತೆಗೆದುಕೊಳ್ಳುವಂಥ ಪ್ರಕ್ರಿಯೆಗಳನ್ನು ರಾಜ್ಯ ಸರಕಾರದವರು ಮಾಡಬೇಕೆಂಬ ಬಗ್ಗೆ ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಅದೇ ರೀತಿಯಲ್ಲಿ ಕಳಸಾಬಂಡೂರಿ ಎಂಬ ಹೋರಾಟವು ನಡೆಯುತ್ತಿದೆ. ಧಾರವಾಡ, ನವಲಗುಂದ, ಬಾಗಲಕೋಟೆ, ಬೆಳಗಾವಿ, ಸವದತ್ತಿ, ಆ ಪ್ರದೇಶಗಳಲ್ಲಿ ಈ ಹೋರಾಟವು ನಡೆಯುತ್ತಿದೆ. ಕಳೆದ ಒಂದು ವರ್ಷದಿಂದ ಬಹಳ ತೀವ್ರಗತಿಯಲ್ಲಿ ಅಲ್ಲಿನ ರೈತರು ಹೋರಾಟವನ್ನು ಮಾಡುತ್ತಾ ಇದ್ದಾರೆ. ಹುಬ್ಬಳ್ಳಿ ಧಾರವಾಡಕ್ಕೆ ಕುಡಿಯುವ ನೀರಿಗಾಗಿ ಆ ಕಳಸಾಬಂಡೂರಿ ನಾಲಾದಿಂದ ಎಂಟು ಟಿಎಂಸಿ ನೀರು ತರುವಂಥ ಯೋಜನೆಯಿದೆ. ಆ ಕುರಿತ ಗೋವ ಮತ್ತು ನಮ್ಮ ನಡುವೆ ಡಿಸ್ಪ್ಯೂಟ್ ಇದೆ. ಗೋವ ಮುಖ್ಯಮಂತ್ರಿಯವರ ಜೊತೆಗೆ ಕುಳಿತು ಮಾತನಾಡಿ, ಈ ಸಮಸ್ಯೆಯನ್ನು ಪರಿಹರಿಸಿರಿ ಎಂದು ಹೇಳಿ, ನಾನು ಹಿಂದಿನ ಸದನದಲ್ಲಿ ಹೇಳಿದ್ದೆ. ಹೆಚ್.ಕೆ. ಪಾಟೀಲರು ಇದ್ದಾಗಲೂ ಹೇಳಿದ್ದೇನೆ. ಈಗ ಅಲ್ಲಂ ವೀರಭದ್ರಪ್ಪರವರು ನೀರಾವರಿ ಸಚಿವರಾಗಿ ಬಂದ ಮೇಲೆಯೂ ಹೇಳುತ್ತಿದ್ದೇನೆ. ಆದರೆ ಇದುವರೆಗೂ ಗೋವ ಮುಖ್ಯಮಂತ್ರಿಯವರ ಜೊತೆಗೆ ಕುಳಿತು ಮಾತನಾಡಲು ಇವರು ತಯಾರಾಗಿಲ್ಲ. ನಮ್ಮ ನೀರಾವರಿ ಸಚಿವರು ಇರಬಹುದು, ಮುಖ್ಯಮಂತ್ರಿಯವರೇ ಇರಬಹುದು, ಅವರೊಂದಿಗೆ ಕುಳಿತು ಮಾತನಾಡಿದರೆ ಐದು ನಿಮಿಷಗಳಲ್ಲಿ ಸಮಸ್ಯೆ ಬಗೆಹರಿಯುತ್ತದೆ. ಹಾಗೆ ಮಾಡಲು ಇವರು ತಯಾರಾಗಿಲ್ಲ. ಹಿಂದೆ ಅಲ್ಲಿ ಮತ್ತು ಇಲ್ಲಿಯೂ ಕಾಂಗ್ರೆಸ್ ಸರಕಾರವಿದ್ದಾಗಲೂ ಇವರು ಪ್ರಯತ್ನಿಸಲಿಲ್ಲ. ಇವೊತ್ತು ಅಲ್ಲಿ ಬಿಜೆಪಿ ಸರಕಾರವಿದ್ದು ಶ್ರೀ ಮನೋಹರ್ ಪಣೀಕರ್ ಮುಖ್ಯಮಂತ್ರಿಯಾಗಿದ್ದಾರೆ. ನಾನು ಈ ತನಕ ವೈಯಕ್ತಿಕವಾಗಿ 2–3 ಸಲ ಭೇಟಿಯಾಗಿ, ನಮ್ಮ ಸಮಸ್ಯೆಗಳನ್ನು ಹೇಳಿ, ಕಳಸಾ ಬಂಡೂರಿ ನಾಲಾ ಯೋಜನೆಗೆ ಒಪ್ಪಿಗೆ ಕೊಡಬೇಕೆಂದು ನಾನು ಅವರ ಜೊತೆಗೆ ಮಾತನಾಡಿದ್ದೇನೆ. ನಿಮ್ಮ ಮುಖ್ಯಮಂತ್ರಿಯವರು, ನೀರಾವರಿ ಸಚಿವರು ನಮ್ಮೊಂದಿಗೆ ಮಾತನಾಡಲಿ ಎಂದು ಅವರು ಹೇಳಿದ್ದಾರೆ. ಗೋವಾದ ಮುಖ್ಯಮಂತ್ರಿಯವರು ನಾನು ಕುಳಿತು ಮಾತನಾಡಲಿಲ್ಲ. ತಯಾರಿದ್ದೇನೆಂದು ಹಾಗೆ ಹೇಳುತ್ತಾರೆ. ಆದರೆ ನಮ್ಮವರು ಅವರೊಂದಿಗೆ ಮಾತನಾಡಲು ತಯಾರಾಗಿಲ್ಲ. ಹೀಗಾಗಿ ಕಳಸಾಬಂಡೋರಿ ನಾಲಾ ಯೋಜನೆ ಮತ್ತು ಎಂಟು ಟಿಎಂಸಿ ನೀರು, ಮಲಪ್ರಭ ನದಿಗೆ ಬಂದರೆ, ಅದರಿಂದ ಹುಬ್ಬಳ್ಳಿ ಧಾರವಾಡದ ಕುಡಿಯುವ ನೀರಿನ ಸಮಸ್ಯೆಯೂ ಪರಿಹಾರವಾಗುತ್ತದೆ, ಮತ್ತು ಆ ಭಾಗದ ರೈತರು ನೀರಾವರಿಗೆ ಅಂದರೆ ಟೇಲ್ ಎಂಡ್ ರೈತರಿಗೆ ಮಲಪ್ರಭದಿಂದ ನೀರು ಬರುತ್ತಾ ಇಲ್ಲ, ಇದರಿಂದ ಅವರಿಗೂ ಅನುಕೂಲವಾಗುತ್ತದೆ. ಅದನ್ನು ಮಾಡಲು ನಮ್ಮ ರಾಜ್ಯ ಸರಕಾರಕ್ಕೆ ಇಚ್ಚಾಶಕ್ತಿಯೇ ಇಲ್ಲ. ಎಲ್ಲವನ್ನು ನೆನಗುದಿಗೆ ಬೀಳಿಸಿದ್ದಾರೆ. ತಾವೇ ಮುಂದಾಗಿ ನಿಂತು ಏನಾದರೂ ಮಾಡಿದ್ದಾರೆಯೇ? ಏನೂ

ಇಲ್ಲ. ಅಲ್ಲಿ ಬಿಜೆಪಿ ಸರಕಾರವಿದೆ, ಅದು ಆಗುವುದಿಲ್ಲ ಎಂಬಿತ್ಯಾದಿ ಮಾತುಗಳು ಬರುತ್ತಿವೆ. ಕೇಂದ್ರ ಸರಕಾರದಲ್ಲಿ ಫೈಲ್ ಪೆಂಡಿಂಗ್‌ನಲ್ಲಿದೆ ಎಂದು ಹೇಳುತ್ತಾರೆ. ಆದರೆ ಪರಿಹಾರಕ್ಕೆ ಏನೇನು ದಾರಿಗಳಿವೆ ಎಂಬುದನ್ನು ನಾನು ಹೇಳಿದ್ದೇನೆ. ನಾನು ಸ್ವತಃ ಅವರೊಂದಿಗೆ ಮಾತನಾಡಿದ್ದೇನೆ. ಹೆಚ್.ಕೆ. ಪಾಟೀಲ್‌ರವರು ಮತ್ತು ಅಲ್ಲಂ ವೀರಭದ್ರಪ್ಪರವರೊಂದಿಗೂ ನಾನು ಮಾತನಾಡಿದ್ದೇನೆ. ಇನ್ನೂ ಅವರಿಂದ ಪಾಸಿಟೀವ್ ಆದಂಥ ರೆಸ್ಪಾನ್ಸ್ ಬರುತ್ತಾ ಇಲ್ಲ. ಇದು ಬಹಳ ಖೇದಕರವಾದ ಸಂಗತಿಯಾಗಿದೆ. ಸರಕಾರವು ಯಾವರೀತಿಯಲ್ಲಿ ನಡೆಯುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಂತೆಯೇ ಸರಕಾರದವರು ಈ ಕುರಿತು ತೀವ್ರವಾದ ಗಮನವನ್ನು ಹರಿಸಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ. ಇದರ ಜೊತೆಗೆ ರೈತರಿಗೆ ಈ ತೀರಿಯ ಸಂಕಷ್ಟವಿದ್ದರೆ, ಬೆಳೆವಿಮೆ ಹಣವನ್ನೂ ಕೊಡುತ್ತಾ ಇಲ್ಲ. ವಿದ್ಯುತ್ ಕೂಡ ಸರಿಯಾದ ಸಮಯದಲ್ಲಿ ಬರುತ್ತಾ ಇಲ್ಲ. ರಾತ್ರಿ ಹೊತ್ತಿನಲ್ಲಿ ವಿದ್ಯುತ್ ಸರಬರಾಜು, ಹಗಲು ಹೊತ್ತಿನಲ್ಲಿ ಅದನ್ನು ಕೊಡಿ ಎಂದು ಹೇಳಿದ್ದೇವೆ. 12 ತಾಸು ನಿರಂತರ ವಿದ್ಯುತ್‌ನ್ನು ಕೊಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿ, ಬಜೆಟ್‌ನಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಅದು ಕೂಡ ಈಡೇರಲಿಲ್ಲ. ಆದರೆ ಇವೊತ್ತು ಯಾವ ರೈತ ಬಾಂಧವರು ಈ ವಿದ್ಯುತ್ ಮಿಟರ್ ಹಾಕಿಕೊಂಡು ತಮ್ಮ ಹೊಲದಲ್ಲಿ ಐಪಿ ಸೆಟ್‌ಗಳನ್ನು ಹಾಕಿಕೊಂಡಿದ್ದಾರೆ. ಅದರ ಮೂಲಕ ತಮ್ಮ ಹೊಲಗಳಿಗೆ ನೀರು ಬಿಡಲು ಅನುವು ಮಾಡಿಕೊಡುವ ಏನು ವ್ಯವಸ್ಥೆಯು ಇದೆ. ಅದಕ್ಕೆ ಸಹಾಯ ಮತ್ತು ಮಾರ್ಗದರ್ಶನ ಮಾಡುವಂತಹ ವ್ಯವಸ್ಥೆ ಸರ್ಕಾರದ ಕಡೆಯಿಂದ ಇಲ್ಲ. ನಿಮಗೆ ಹೇಳಬೇಕು ಅಂದರೆ ಇವತ್ತು ಹೊಸದಾಗಿ ಬೋರ್ ಹಾಕಿಕೊಂಡು ನಮ್ಮ ರೈತ ಬಾಂಧವರು ಕನೆಕ್ಷನ್ ತೆಗೆದುಕೊಳ್ಳಬೇಕಾದರೆ 32 ಸಾವಿರ ರೂಪಾಯಿ ತುಂಬಬೇಕು. ಇದನ್ನು ಯಾವ ರೈತನಿಗೂ ತುಂಬಲು ಆಗುವುದಿಲ್ಲ. ಆಮೇಲೆ 32 ಸಾವಿರದಲ್ಲಿ transmission, T.C. ಬರುತ್ತದೆ, ಟಿಸಿ ಹಾಕಿಕೊಳ್ಳಬೇಕೆಂಬುದು compulsory ಮಾಡಿದ್ದಾರೆ. ಅದಕ್ಕಾಗಿ 32 ಸಾವಿರ ರೂಪಾಯಿ ಯಾರು ತುಂಬುತ್ತಾರೆ ಅವರ ಬೋರ್‌ವೆಲ್ಲಿಗೆ ಮೀಟರ್ ಅಳವಡಿಸುವುದು ಐಪಿ ಸೆಟ್ ಹಾಕುವಂತಹದು ಇದು ನಡೆಯುತ್ತಿದೆ. 32 ಸಾವಿರ ರೂಪಾಯಿ ತುಂಬಲು ಯಾವ ರೈತನಿಗೂ ಸಾಧ್ಯವಿಲ್ಲ. ಅದಕ್ಕಾಗಿ ಈ ಹಣ ತುಂಬುವ ವ್ಯವಸ್ಥೆಯನ್ನು ರದ್ದುಮಾಡಿ, ಮೊದಲು ಈ ವ್ಯವಸ್ಥೆ ಇರಲಿಲ್ಲ. ಈಗ ಹೊಸದಾಗಿ ಮಾಡಿದ್ದೀರಿ, 32 ಸಾವಿರ ರೂ ಕೊಡುವಂತಹ ಆಜ್ಞೆಯನ್ನು ತಕ್ಷಣವೇ ರದ್ದು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ, ಅದೇ ರೀತಿ ಇವತ್ತು ಗ್ರಾಮಪಂಚಾಯ್ತಿ – ಅಲ್ಲಿನ ಕುಡಿಯುವ ನೀರಿನ mini water schemes ಗೆ ವಿದ್ಯುತ್ ಮೀಟರ್ ಪಡೆಯಬೇಕಾದರೆ 50 ಸಾವಿರ ರೂಪಾಯಿ ತುಂಬಬೇಕು, ನೀವು ನೇರವಾಗಿ ಕೊಡುವ ಅನುದಾನವೇ ಒಂದು ಲಕ್ಷ, ಅದರಲ್ಲಿ 50 ಸಾವಿರ ರೂಪಾಯಿ ವಿದ್ಯುತ್ ಮೀಟರ್ ಅಳವಡಿಕೆಗಾಗಿ ತುಂಬಬೇಕು ಅಂದರೆ ಗ್ರಾಮಪಂಚಾಯ್ತಿಗಳಿಂದ ಸಾಧ್ಯಾನೇ ಇಲ್ಲ. ಅದರ ಜೊತೆಗೆ water tank ಇವುಗಳಿಗೆ ವಿದ್ಯುತ್ connection ಪಡೆಯಬೇಕಾದರೆ ಒಂದು ಲಕ್ಷ ರೂಪಾಯಿ ಹಣ ತುಂಬಬೇಕು ಗ್ರಾಮಪಂಚಾಯ್ತಿಗಳು. ಸಾಧ್ಯಾನೇ ಇಲ್ಲ ಇವನ್ನೆಲ್ಲಾ ತುಂಬಲಿಕ್ಕೆ. ಸರ್ಕಾರ ಇವನ್ನೆಲ್ಲಾ ವಿಶೇಷ ಅನುದಾನ ಏನಾದರೂ ಕೊಟ್ಟು ಮಾಡಬೇಕಾಗುತ್ತದೆ. ಗ್ರಾಮ ಪಂಚಾಯ್ತಿಗಳು ಸ್ಥಳೀಯ ಸಂಸ್ಥೆಗಳು, ಧಾರವಾಡದ ಬೇಲೂರ ಘೋಷಣೆ – ಏನಾಯಿತು? ಅಧಿಕಾರ ವಿಕೇಂದ್ರೀಕರಣ, ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವುದು.

ಅವರ ಮೇಲೆ ಈಗ ಮತ್ತೆ 50 ಸಾವಿರ ರೂ ಬರ್ಡನ್, ಒಂದು ಲಕ್ಷ ರೂಪಾಯಿ ಬರ್ಡನ್, ರೈತರು 32 ಸಾವಿರ ರೂ ಮೀಟರ್‌ಗೆ ತುಂಬಬೇಕು, ಆ ಟಿಸಿ ತುಂಬಲಿಕ್ಕೆ ಇದರರ್ಥ ಏನು ಆಗುತ್ತದೆ ಅಂದರೆ ಒಂದು ಕಡೆ ಹಲವಾರು ಘೋಷಣೆಗಳನ್ನು ಹೇಳುವಂಥದ್ದು ಮತ್ತೆ ಹಿಂದಿನಿಂದ ರೈತರಿಗೆ ಬರೆ ಹಾಕುವ ಕೆಲಸ ಇವತ್ತು ರಾಜ್ಯ ಸರ್ಕಾರದಿಂದ ನಡೆಯುತ್ತಿದೆ. ಹೀಗಾಗಿ ರೈತರ ಬಗ್ಗೆ ಎಳ್ಳಷ್ಟೂ ಕಾಳಜಿ ಇರದ ಸರ್ಕಾರ ಎಂದು ಹೇಳಬೇಕಾಗುತ್ತದೆ. ರೈತರ ಬಗ್ಗೆ ಒಂದಿಷ್ಟೂ ಕಾಳಜಿ ಇಲ್ಲ. ಇದೆಲ್ಲ ಮುಖ್ಯಮಂತ್ರಿಗಳ ಹಾಗೂ ಸಂಬಂಧಪಟ್ಟ ಸಚಿವರ ಗಮನಕ್ಕೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಈ ರೀತಿ 32 ಸಾವಿರ 50 ಸಾವಿರ ರೂ ತುಂಬುವುದು ಒಂದು ಲಕ್ಷ ರೂಪಾಯಿ ತುಂಬುವುದು – ಇದೆಲ್ಲಾ ಮುಖ್ಯಮಂತ್ರಿಗಳ ಗಮನಕ್ಕೂ ಬರದಂತೆ ನಡೆಯುತ್ತಿದೆ. ಏಕೆಂದರೆ ಅವರು ರೈತರ ಬಗ್ಗೆ ಬಹಳಷ್ಟು ಕಳಕಳಿ ಪರಿಹಾರಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಹಾಗಾದರೆ ಇದೆಲ್ಲಾ ಏನು ಅಂತ ಸರ್ಕಾರ ಹೇಳಬೇಕಾಗುತ್ತದೆ. ರೈತರಿಗಾಗಿ ಒಂದು special package 880 crores ಅಂತ ಹೇಳಿದರು, ಒಂದು ಕಡೆ ಆ ಪ್ಯಾಕೆಜ್ ಅಂತ ಘೋಷಣೆ, ಈ ಕಡೆ ರೈತರ ಮೇಲೆ ಬರೆ ಎಳೆಯುವಂತಹ ಕೆಲಸ, ಹೀಗಾಗಿ ಇದರಿಂದ ರೈತರಿಗೆ ಯಾವುದೇ ಒಂದು ಪರಿಹಾರ ಸಿಗಲು ಸಾಧ್ಯವಿಲ್ಲ. ಹೀಗಾಗಿ ಏನಾದರೂ ಈ ಸರ್ಕಾರಕ್ಕೆ ಈ ಬರಗಾಲದ ದುಸ್ಥಿತಿಯಲ್ಲಿ ಸಹಾಯ ಮಾಡುವುದು ಇದ್ದರೆ ಬರಗಾಲ ಕಾಮಗಾರಿಗಳು ಎಲ್ಲಾ ಕಡೆ ನಡೆಯಲಿ ಒಂದು ಸಲ ಸಂಪೂರ್ಣ ಬಡ್ಡಿ ಮನ್ನಾ ಮಾಡಿ, ಈ ರೀತಿ 32 ಸಾವಿರ ರೂ ತುಂಬಿದ ಮೇಲೆ ಟಿಸಿ ಕೊಡುವುದು ಎಂಬುದನ್ನೆಲ್ಲಾ ನಿಲ್ಲಿಸಿ ಆಮೇಲೆ ಇವತ್ತು ಸಾಲ ವಸೂಲಾತಿಯನ್ನು ತಕ್ಷಣ ನಿಲ್ಲಿಸಿ, ಮಧ್ಯಮಾವಧಿ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲಗಳನ್ನಾಗಿ ಪರಿವರ್ತಿಸಿ ಮತ್ತು ಬರಗಾಲ ಕಾಮಗಾರಿಗಳು ಎಲ್ಲ ಕಡೆಯೂ ತ್ವರಿತಗತಿಯಿಂದ ನಡೆಯುವಂತೆ ಆಗಬೇಕು. ಅಂದಾಗ ನಿಮಗೆ ಏನಾದರೂ ಒಂದಿಷ್ಟು ರೈತರ ಬಗ್ಗೆ ಕಳಕಳಿ ಇದೆ ಅನ್ನಿಸಲು ಸಾಧ್ಯವಿದೆ. ಇಲ್ಲದಿದ್ದರೆ ಸರ್ಕಾರ ಇವತ್ತೂ ರೈತ ವಿರೋಧಿ ಧೋರಣೆ ಮುಂದುವರೆಸುತ್ತಿದೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆ ದಿಶೆಯಲ್ಲಿ ಮುಖ್ಯಮಂತ್ರಿಗಳು ಈ ಬಗ್ಗೆ ಸರಿಯಾದ ಸ್ಪಷ್ಟನೆ ನೀಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅಧ್ಯಕ್ಷರೇ ಇವತ್ತು ಮುಖ್ಯಮಂತ್ರಿಗಳು ಮತ್ತೊಂದು ಘೋಷಣೆ ಮಾಡಿದ್ದಾರೆ. ಪ್ರತಿ ಸಂದರ್ಭದಲ್ಲಿ ಒಂದು ಚರ್ಚೆ ಬರುತ್ತಿತ್ತು. ಬಯಲುಸೀಮೆ ಅಭಿವೃದ್ಧಿ ಮಂಡಲಿ, ಮಲೆನಾಡು ಅಭಿವೃದ್ಧಿ ಮಂಡಲಿ ಆಮೇಲೆ ಹೈದರಾಬಾದ್ ಅಭಿವೃದ್ಧಿ ಮಂಡಲಿ ಇವುಗಳಿಗೆ ಹೆಚ್ಚಿನ ಅನುದಾನ ಕೊಡಿ ಅಂತ ಎಲ್ಲಾ ಶಾಸಕರು ಕೇಳುತ್ತಿದ್ದಾರೆ. ಈಗೇನು ನೀವು ಕೊಡುತ್ತಿದ್ದೀರಿ 4 ಲಕ್ಷ ರೂ 5 ಲಕ್ಷ ರೂ ಯಾವುದಕ್ಕೂ ಸಾಲುವುದಿಲ್ಲ ಯಾವ ಕೆಲಸವೂ ಆಗುವುದಿಲ್ಲ. ಕನಿಷ್ಟ ಒಂದೊಂದು ಕ್ಷೇತ್ರಕ್ಕೆ 40 ರಿಂದ 50 ಲಕ್ಷ ರೂ ಬರುವ ರೀತಿ ಅನುದಾನ ಕೊಡಿ ಅಂತ ಎಲ್ಲಾ ಶಾಸಕರು ಪ್ರತಿ ಸಾರಿ ಹೇಳುತ್ತಿದ್ದರು. ಅದು ಪಕ್ಷಾತೀತವಾಗಿ, ಕಾಂಗ್ರೆಸ್ಸು, ಬಿಜೆಪಿ, ದಳ ಅಂತ ಇಲ್ಲ. ಎಲ್ಲರೂ ಹೇಳುತ್ತಿದ್ದರು, ಕಡೆಗೆ ಒಂದು ಸಲ ಎಲ್ಲಿವರೆಗೆ ಬಂತು ಅಂದರೆ ಇವೆಲ್ಲಾ ಯಾಕೆ ಬೇಕು, ನೀವು ಹಣಾನೇ ಕೊಡುವುದಿಲ್ಲ, ಅಭಿವೃದ್ಧಿ ಮಂಡಲಿಗಳನ್ನು ರದ್ದು ಮಾಡಿಬಿಡಿ ಅಂತ ನಾವೆಲ್ಲಾ ಸೇರಿ ಹೇಳಿದೆವು. ಹೋಗಲಿ ಕದ ಮುಚ್ಚಿಬಿಡಿರಪ್ಪ ಅಂತ ಹೇಳಿದೆವು. ಅದಕ್ಕೆ ಮುಖ್ಯಮಂತ್ರಿಗಳು ನಿಜವಾಗಿ ಕದ ಮುಚ್ಚೇ ಬಿಟ್ಟರು, ಈ ಸಲ ಬಂದ್ ಮಾಡೇ ಬಿಟ್ಟರು, ಬ್ಯಾಡವೇ ಬೇಡ, ಶಾಸಕರೆಲ್ಲಾ ಒತ್ತಾಯ ಮಾಡಲು ಹತ್ತಿದ್ದಾರೆ ಮುಚ್ಚಿಬಿಡೋಣ ಅಂತ ಎಲ್ಲಾ ಅಭಿವೃದ್ಧಿ ಮಂಡಲಿಗಳೂ ಕಲೆಹಾಕಿಬಿಟ್ಟರು. ಬಯಲು ಸೀಮೇನೂ ಇಲ್ಲ, ಮಲೆನಾಡು

ಹೈದರಾಬಾದು ಅಭಿವೃದ್ಧಿ ಮಂಡಲಿಗಳೂ ಇಲ್ಲ. ಮಾನ್ಯ ಖರ್ಗೆಯವರು ಯಾಕೆ ಸುಮ್ಮನೆ ಕೂತಿದ್ದಾರೋ ನನಗೂ ಅರ್ಥವಾಗುತ್ತಿಲ್ಲ. ಈಗ ಇವೆಲ್ಲಾ ಕೂಡಿ ಒಂದು ಮಾಡಿದ್ದಾರೆ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲಿ, ಹೊಸದಾಗಿ ಎಬಿಸಿಡಿ ಚಾಲು ಮತ್ತೆ, ಎಲ್ಲಾ ಮುಚ್ಚಿ ಎಲ್ಲಾ ಕೂಡಿ ಎಷ್ಟು ಕೊಟ್ಟಿರಪ್ಪ? 5 ಕೋಟಿ ರೂ ಮಾನ್ಯ ಶ್ರೀಕಂಠಯ್ಯನವರೇ, ಬರೀ ಐದು ಕೋಟಿ, ರೂ ಯಾವ ಅಭಿವೃದ್ಧಿ ಮಂಡಲೀನೂ ಬರುವುದಿಲ್ಲ. ನಿಮ್ಮ ಕಡೆ. ನೀವು ಆರಾಮಾವಾಗಿದ್ದೀರಿ, ಅಂದರೆ ಇದು ಯಾಕೆ ಬೇಕಾಗಿತ್ತು ಅಂತ ನನಗೆ ಅರ್ಥಾನೇ ಆಗುತ್ತಿಲ್ಲ. ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲಿ, ಇವತ್ತು ಹೈದರಾಬಾದ್ ಕರ್ನಾಟಕದಲ್ಲಿ ಹೋರಾಟ ಇದರ ಬಗ್ಗೆ, ನಾನು ಇವತ್ತು ಮುಖ್ಯಮಂತ್ರಿಗಳನ್ನು ಯಾವ ಪುರುಷಾರ್ಥಕ್ಕಾಗಿ ಮಾಡಿದಿರಿ ಎಂದು ಕೇಳಬೇಕಾಗುತ್ತದೆ. ಬಯಲುಸೀಮೆ – ಅದಕ್ಕೆ ನೂರಾರು ಕೋಟಿ ರೂ ಕೊಡಿ, ಹೈದಾರಾಬಾದ್ ಅಭಿವೃದ್ಧಿ ಮಂಡಲಿಗೆ ನೂರಾರು ಕೋಟಿ ರೂ. ಕೂಡಿ ಮಲೆನಾಡು ಅಭಿವೃದ್ಧಿಗೆ ನೂರಾರು ಕೋಟಿ ರೂ ಕೊಡಿ ಅಂದರೆ ಏನಾದರೂ ಒಂದಿಷ್ಟು ಕೆಲಸವಾಗುತ್ತಿತ್ತು, ಅವೆಲ್ಲ ರದ್ದು ಮಾಡಿ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲಿ, 5 ಕೋಟಿ ರೂ ನಿಗದಿ ಮಾಡಿದ್ದೀರಿ, ಅಂದರೆ ಸಿಬ್ಬಂದಿ, ಪಗಾರ, ಇನ್ನೆರಡು ತಿಂಗಳಲ್ಲಿ ಚುನಾವಣೆ. ಅಲ್ಲೊಬ್ಬ ಆಫೀಸರ್ ಹೋಗಿ ಕೂತು ಒಂದು ಬೋರ್ಡ್ ಹಚ್ಚಿಕೊಂಡು ಕೂತು ಪಗಾರ, ನಾವೇನೋ ಮಾಡಲು ಹತ್ತಿದ್ದೇವೆ ಅಂತ ಜನರಿಗೆ ಮತ್ತೆ ಮರುಳು ಮಾಡುವುದು, ಅಂದರೆ ಸರ್ಕಾರ ಇದ್ಯಾಕೆ ಹೀಗೆ ವಿಚಾರ ಮಾಡುತ್ತದೆ ಅಂತ ನನಗೆ ಅರ್ಥಾನೇ ಆಗುತ್ತಿಲ್ಲ. ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲಿ ಮಾಡಿ ಅದಕ್ಕೊಂದು 500 ಕೋಟಿ ರೂ ಇಟ್ಟಿದ್ದರೆ ಪರವಾಗಿಲ್ಲ ಮುಖ್ಯಮಂತ್ರಿಗಳು ಸರಿಯಾಗಿ ವಿಚಾರ ಮಾಡಿದ್ದಾರೆ ಅನ್ನಬಹುದು, ಏನೂ ವಿಚಾರಾನೇ ಇಲ್ಲ. ಅದಕ್ಕಾಗಿ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲು ಯಾಕಾಗಿ ಮಾಡಿದ್ದೆಂದು ಮುಖ್ಯಮಂತ್ರಿಗಳು ಇವತ್ತು ಉತ್ತರ ಕೊಡಬೇಕಾಗುತ್ತದೆ, ಮತ್ತು ಪ್ರತಿ ಸಲ ಒಂದು ಹೇಳುತ್ತಾರೆ, ನಾವು ಹಿಂದಿನ ಮೂರೂ ಬಜೆಟ್ ತೆರೆದು ನೋಡಿದರೆ ಒಂದು ಹೆಸರು ಮಾತ್ರ ಖಾಯಂ ಆಗಿ ಇರುತ್ತದೆ, ಡಾ॥ ನಂಜುಂಡಪ್ಪನವರ ಹೆಸರು. ಡಾ॥ ನಂಜುಂಡಪ್ಪನವರು ಒಂದು ವರದಿ ಕೊಟ್ಟಿದ್ದಾರೆ, ಪ್ರಾದೇಶಿಕ ಅಸಮಾನತೆ, ಅದನ್ನು ಹೋಗಲಾಡಿಸಲು ಡಾ॥ ನಂಜುಂಡಪ್ಪ ಏನು ವರದಿ ಕೊಟ್ಟಿದ್ದಾರೆ ಏನು ಕೆಲವು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಅನುಷ್ಠಾನ ಮಾಡಲು ಬದ್ಧರಿದ್ದೇವೆ. ಎಂಬುದಕ್ಕೆ ಅರ್ಥಾನೇ ನನಗೆ ಗೊತ್ತಾಗುತ್ತಿಲ್ಲ. ನಾಲ್ಕು ವರ್ಷ ಸತತ ಹೇಳಿಕೊಂಡು ಬಂದಿದ್ದಾರೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ, ಬದ್ಧರಿದ್ದೇವೆ, ಉತ್ತರ ಕರ್ನಾಟಕದ ಅಭಿವೃದ್ಧಿಗೆ ನಾವು ಬದ್ಧರಿದ್ದೇವೆ, ಅಂದರೆ ಅರ್ಥವೇನು? ಇವರ ಅರ್ಥಾನೇ ನನಗೆ ಆಗುತ್ತಿಲ್ಲ, ನೀವು ಹಣಾನೂ ಕೊಡುವುದಿಲ್ಲ. ರಾಜಕೀಯ ಇಚ್ಛಾಶಕ್ತಿಯೂ ಇಲ್ಲ. ಕೇವಲ ಬದ್ಧರಿದ್ದೇವೆ, ಬರೀ ಬದ್ಧರಿದ್ದೇವೆ ಅಷ್ಟೇ ಹೀಗಾಗಿ ಇವತ್ತು ಪರಿಸ್ಥಿತಿ ಏನಾಗಿದೆ ಉತ್ತರ ಕರ್ನಾಟಕ ಭಾಗದಲ್ಲಿ ಜನ ಸಂಪೂರ್ಣವಾಗಿ ನಿರಾಶರಾಗಿದ್ದಾರೆ, ಸರ್ಕಾರದ ವ್ಯವಸ್ಥೆ ಘೋಷಣೆಗಳು ಬದ್ಧರಿದ್ದೇವೆ ಎಂಬ ಹೇಳಿಕೆ ಇದರಿಂದ ಜನರಿಗೆ ಬೇಸರವಾಗಿ ಬದ್ಧತೆ ಬಗ್ಗೇನೆ ಪ್ರಶ್ನೆ ಮಾಡುವುದು ಚಾಲೂ ಆಗಿದೆ. ಯಾರಾದರೂ ಹೇಳಿರಿ, ನಂಜುಂಡಪ್ಪನವರು ವರದಿಯಲ್ಲಿ ಏನು ಹೇಳಿದರು? ಐದು ವರ್ಷದ ಅವಧಿಯಲ್ಲಿ ಕನಿಷ್ಟ 1500 ಕೋಟಿ ರೂಗಳನ್ನು ಹಂತಹಂತವಾಗಿ ಬಜೆಟಿನಲ್ಲಿ additional grant ಎಂದು ಕೊಡಿ ಎಂದರು, ಉತ್ತರ ಕರ್ನಾಟಕ

ಭಾಗದ infrastructure development ಶೈಕ್ಷಣಿಕ ಸುಧಾರಣೆ, ನೈರ್ಮಲೀಕರಣ, ಆರೋಗ್ಯ ಸುಧಾರಣೆ, ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಇವುಗಳ ಸಲುವಾಗಿ 1500 ಕೋಟಿ ರೂಗಳನ್ನು ನೀವು ಬಜೆಟಿನಲ್ಲಿ ತೆಗೆದಿರಬೇಕು, ಒಂದೇ ವರ್ಷಕ್ಕಲ್ಲ, ಹಂತಹಂತವಾಗಿ ನಿಗದಿ ಮಾಡಿರಿ ಎಂದರು, ಇವತ್ತು ಮುಖ್ಯಮಂತ್ರಿಗಳ ಒಂದು ಅಭ್ಯಾಸ ಏನೆಂದರೆ ಯಾವುದೋ ಒಂದು ಸಮಸ್ಯೆ ಬಂದಾಗ ಅದನ್ನು ಹೇಗೆ ಡ್ರಾಗ್ ಆನ್ ಮಾಡುವುದು? ಅದಕ್ಕೊಂದು task force committee, ಅದಕ್ಕೊಂದು ಆಯೋಗ, ಉತ್ತರ ಕರ್ನಾಟಕದ, ಹೈದರಾಬಾದ್ ಕರ್ನಾಟಕದ ನಿರ್ಲಕ್ಷ್ಯ ಅಂತ ಬಂದಾಗ ಡಾ॥ ನಂಜುಂಡಪ್ಪ ಆಯೋಗ ಅಂತ ಮಾಡಿಬಿಡುವುದು, ನೋಡಿರಪ್ಪ ನಾವು ಒಂದು ಆಯೋಗ ಮಾಡಿದ್ದೇವೆ ವರದಿ ಪಡೆಯುತ್ತೇವೆ, ಆಮೇಲೇನು ನೋಡೋಣ, ಆ ವರದಿ ಪಡೆದಿರಿ. ಆಮೇಲೆ ಆಡಳಿತ ವ್ಯವಸ್ಥೆ, ಕಾಂಗ್ರೆಸಿನಲ್ಲಿರುವ ಹಿರಿಯರಿಗೆ ಒಂದಿಷ್ಟು ಪದವಿ ಜವಾಬ್ದಾರಿ ಕೊಡಬೇಕು, ಹಾರ್ನಹಳ್ಳಿ ರಾಮಸ್ವಾಮಿ, ಅವರಿಗಾಗಿ ಆಡಳಿತ ಸುಧಾರಣಾ ಆಯೋಗ, ನೇಮಕ ಮಾಡಿದರು, ವರದಿ ಕೊಟ್ಟರು ಪಾಪ, ಅವತ್ತು ಹಾರ್ನಹಳ್ಳಿ ರಮಸ್ವಾಮಿಯವರು ನಮ್ಮನ್ನು ಕರೆಸಿದ್ದರು, ಅವತ್ತೇ

**4.30 ಪಿಎಂ**

ಹಾರ್ನಳ್ಳಿ ರಾಮಸ್ವಾಮಿಯವರಿಗೆ, ನಮ್ಮ ಅಭಿಪ್ರಾಯ, ಸಲಹೆ ಸೂಚನೆಗಳನ್ನು ಅವರು ಕೇಳಿದ್ದರು. ಬಹಳ efforts ಮಾಡಿದರು ಹಾರ್ನಳ್ಳಿ ರಾಮಸ್ವಾಮಿಯವರು. ನಾವು ಹೇಳಿದೆವು, ನಾವೆಲ್ಲಾ ಅಭಿಪ್ರಾಯಗಳನ್ನು ಕೊಡುತ್ತೇವೆ, ನೀವು ಸ್ಟಡಿ ಮಾಡಿ ವರದಿಯನ್ನೂ ಕೂಡ ತಯಾರು ಮಾಡಿ ಕೊಡುತ್ತೀರಿ. ಆದರೆ ಅದು ಕಸದ ಬುಟ್ಟಿಗೆ ಹೋಗುತ್ತದೆಂದು ನಾನು ಹಾರ್ನಳ್ಳಿ ರಾಮಸ್ವಾಮಿಯವರಿಗೆ ಹೇಳಿದ್ದೆ. ಅದೇ ಕೆಲಸವನ್ನು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಹಾರ್ನಳ್ಳಿ ರಾಮಸ್ವಾಮಿಯವರ ಆಯೋಗದ ವರದಿಯನ್ನು ಕಸದ ಬುಟ್ಟಿಗೆ ಹಾಕಿದ್ದಾರೆ. ಡಾ॥ ನಂಜುಂಡಪ್ಪನವರ ವರದಿಯನ್ನೂ ಕಸದ ಬುಟ್ಟಿಗೆ ಚೆಲ್ಲಿದ್ದಾರೆ. ಹೀಗಾಗಿ ಇವತ್ತು ನೀವು ಆಯೋಗಗಳನ್ನು ಮತ್ತು ಟಾಸ್ಕ್‌ಫೋರ್ಸ್ ಕಮಿಟಿಗಳನ್ನು ಏಕೆ ನೇಮಕ ಮಾಡುತ್ತೀರಿ? ಯಾವ ಉದ್ದೇಶದ ಸಲುವಾಗಿ ಮಾಡುತ್ತೀರಿ? ಹೀಗಾಗಿ ಇವತ್ತು ಎಲ್ಲಾ ಆಯೋಗಗಳ ವರದಿಗಳೂ ಕಸದ ಬುಟ್ಟಿಗೆ ಹೋಗಿದ್ದಾವೆ. ಅದಕ್ಕಗಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಕೇವಲ ಒಂದು ಮಹಿಳಾ ವಿಶ್ವವಿದ್ಯಾನಿಲಯವನ್ನು ಮಾಡಿಬಿಟ್ಟರೆ ಉತ್ತರ ಕರ್ನಾಟಕ ಉದ್ಧಾರವಾಗಲಿಲ್ಲ. ಬೀದರ್‌ನಲ್ಲಿ ಪಶು ವಿಶ್ವವಿದ್ಯಾನಿಲಯವನ್ನು ಮಾಡುತ್ತೇವೆಂದು ಹೇಳಿ ಅದು ಇನ್ನೂ ಚಾಲೂ ಆಗಲಿಲ್ಲ. ಆಮೇಲೆ ಸಕ್ಕರೆ ನಿರ್ದೇಶನಾಲಯ. ಬೆಳಗಾಂ, ಮತ್ತೆ ಅದು ಬೆಂಗಳೂರಿಗೆ ವಾಪಸ್ ಬಂತು ಸಕ್ಕರೆ ನಿರ್ದೇಶನಾಲಯ. ಅದು ಚಾಲೂ ಆಗಲಿಲ್ಲ. ಆಮೇಲೆ ಜವಳಿ ನಿಗಮ, ಹುಬ್ಬಳ್ಳಿ, ಆ ಸುದ್ದಿಯೇ ಇಲ್ಲ. ಕೈಮಗ್ಗ ಅಭಿವೃದ್ಧಿ ನಿಗಮ, ಹುಬ್ಬಳ್ಳಿ, ಅಲ್ಲಿ ಎಂಡಿ ಯೂ ಇಲ್ಲ, ನೀವೇನು ಮಾಡುತ್ತಿದ್ದೀರೋ ನಮಗಂತೂ ಅರ್ಥವಾಗುವುದಿಲ್ಲ. ಏನು ಮಾಡುತ್ತಿದ್ದೀರೋ ಅರ್ಥವಾಗುತ್ತಿಲ್ಲ. ಸುಮ್ಮನೆ ಮೊಸಳೆ ಕಣ್ಣೀರು. ಮೊಸಳೆ ಕಣ್ಣೀರನ್ನು ಸುರಿಸುವ ಕೆಲಸವನ್ನು ಉತ್ತರ ಕರ್ನಾಟಕದ ಬಗ್ಗೆ ಮಾಡುತ್ತಿದ್ದೀರಿ. ಈಗ ಮಾನ್ಯ ಖರ್ಗೆಯವರು ಸದನಕ್ಕೆ ಬಂದರು. ನಾನು ಆಗಲೇ ಹೇಳುತ್ತಿದ್ದೆ, ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ತೆಗೆದು ಉತ್ತರ ಕರ್ನಾಟಕದ ಅಭಿವೃದ್ಧಿ ಮಂಡಳಿ ಎಂದು ಮಾಡಿದರು. ಯಾವ ಪುರುಷಾರ್ಥಕ್ಕಾಗಿ? ಅದಕ್ಕಾಗಿ ನಿಜವಾಗಿ ಕಳಕಳಿ ಇದ್ದರೆ ಡಾ॥ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನ ಮಾಡಿ. ಎಲ್ಲಿಂದಾದರೂ ಹಣ ತೆಗ[illegible]

ಸಾಲವನ್ನು ತೆಗೆದುಕೊಂಡು ಬರುತ್ತೇವೆ ಎನ್ನುತ್ತೀರಲ್ಲಾ, ಸಾಲ ತೆಗೆದುಕೊಂಡು ಬನ್ನಿ ನಿಜವಾಗಿ. ಇವತ್ತು ಖರ್ಗೆಯವರು, ಧರ್ಮಸಿಂಗ್‌ರವರು ಎಲ್ಲಾ ಘಟನಾಘಟಿಗಳು. ಆರಾರು ಸಲ, ಏಳೇಳು ಸಲ ಆರಿಸಿಬಂದಂಥವರು. ನಿಮ್ಮ ಹೈದರಾಬಾದ್–ಕರ್ನಾಟಕದ್ದು ಯಾವ ಪರಿಸ್ಥಿತಿ ಇದೆ? ಏನಾಗಿದೆ ಪರಿಸ್ಥಿತಿ? ಆರಾರು ಜನ ಮಂತ್ರಿಗಳಿದ್ದೀರಿ ಗುಲ್ಬರ್ಗಾದಲ್ಲಿ, ಏನಾಗಿದೆ ಪರಿಸ್ಥಿತಿ ಅಲ್ಲಿ? ಏಕೆ ನೀವು ಮುಖ್ಯಮಂತ್ರಿಗಳಿಗೆ ಒತ್ತಾಯವನ್ನು ಮಾಡುವುದಿಲ್ಲ? ಸುಮ್ಮನೆ ನೀವುಗಳು ಏಕೆ ಕುಳಿತಿದ್ದೀರಿ ಎಂದು ನಾನು ಇವತ್ತು ಕೇಳಬೇಕಾಗುತ್ತದೆ. ಹೀಗಾಗಿ ಇವತ್ತು ನೀವು ಎಲ್ಲಿಯವರೆಗೆ ಡಾ|| ನಂಜುಂಡಪ್ಪನವರ ವರದಿಯ ಬಗ್ಗೆ ಅನುಷ್ಠಾನದ ಬಗ್ಗೆ ಒತ್ತಾಯ ಮಾಡುವುದಿಲ್ಲವೋ, ಆ ಭಾಗದ ಶಾಸಕರು ಒತ್ತಾಯ ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ಸರ್ಕಾರ ಹೀಗೆ ನಡೆದುಕೊಂಡು ಹೋಗುತ್ತದೆ. ಇದೇ ರೀತಿ ನಿರ್ಲಕ್ಷ್ಯ ಅಲ್ಲಿ ಮುಂದುವರಿಯುತ್ತದೆ. ಮತ್ತೆ ಒಂದು ಮಂಡಳಿಯನ್ನು ರದ್ದು ಮಾಡುವುದು, ಮತ್ತೊಂದು ಮಂಡಳಿನ್ನು ಮಾಡುವುದು. ಕೇವಲ ನಾಟಕ ಮಾಡುವುದು. ನಾವೇನು ಮಾಡುತ್ತಿದ್ದೇವೆ ಎಂದು ಹೇಳಿ ಇದು ನಾಟಕ ಮಾಡುವುದು. ಬೇರೆ ಏನೂ ಇಲ್ಲ. ಹೈಕೋರ್ಟ್ ಪೀಠದ ಬಗ್ಗೆ ಏನಾಗಿದೆ, ನಿನ್ನೆ ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಬಂತು. ಮುಖ್ಯ ನ್ಯಾಯಾಧೀಶರು ಸೂಚನೆಯನ್ನು ಕೊಟ್ಟಿದ್ದಾರೆ. ಹೈಕೋರ್ಟ್ ಪೀಠ ಚಳುವಳಿ ಮತ್ತೆ ಸಜ್ಜು, ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಸೂಚನೆ. ನಾನು ಕಳೆದ ಸದನದಲ್ಲೂ ಹೇಳಿದ್ದೆ. ಹಿಂದಿನ ಸದನದಲ್ಲೂ ನಾನು ಹೇಳುತ್ತಿದ್ದೆ. ಇವತ್ತು ಮೂಲಭೂತ ಸೌಕರ್ಯದ ಬಗ್ಗೆ ನೀವು ಹಿಂದಿನ ಬಜೆಟ್ ಅಧಿವೇಶನದಲ್ಲಿ ಹೇಳಿದ್ದೀರಿ. ಹತ್ತು ಕೋಟಿ ರೂಪಾಯಿಗಳನ್ನು ತೆಗೆದಿರಿಸಿದ್ದೇವೆಂದು ಹಾಗಾದರೆ ಇವತ್ತಿನ ಬಜೆಟ್‌ನಲ್ಲಿ ಏಕೆ ಹೇಳಲಿಲ್ಲ? ಒಂದು ಚಕಾರ ಶಬ್ದ ಕೂಡ ಇಲ್ಲ ಹೈಕೋರ್ಟ್ ಪೀಠದ ಬಗ್ಗೆ ಅಂದರೆ ನೀವೇನೆಂದು ತಿಳಿದುಕೊಂಡಿದ್ದೀರಿ? ಆ ಭಾಗದ ಜನರ ಭಾವನೆಗಳಿಗೆ ಏನೂ ಕಿಮ್ಮತ್ತು ಇಲ್ಲವೆಂದು ತಿಳಿದುಕೊಂಡಿದ್ದೀರೋ? ಇದರ ಅರ್ಥವೇನು ಎಂದು ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬೇಕಾಗುತ್ತದೆ. ಹೀಗೆಯೇ ಈ ನಿರ್ಲಕ್ಷ್ಯ ಇದೇ ರೀತಿ ಮುಂದುವರೆದರೆ ಇವತ್ತೇನು ಅಲ್ಲಿ ಇಲ್ಲಿ ಕೂಗು ಕೇಳಿಬರುತ್ತದೆ ಸಣ್ಣ ಪುಟ್ಟ ಕೂಗು ನಮಗೆ ಪ್ರತ್ಯೇಕ ರಾಜ್ಯ ಬೇಕೆಂದು ಹೇಳಿ. ನಮಗೆ ಬೇಕಾಗಿಲ್ಲ ಪ್ರತ್ಯೇಕ ರಾಜ್ಯ. ನಾವು ಒಂದೇ ಕರ್ನಾಟಕವಾಗಿ ಉಳಿಯುತ್ತೇವೆ. ಆ ಪ್ರತ್ಯೇಕ ಚಳುವಳಿಗೆ ನಾವು ಇಂಬು ಕೊಡುವುದಿಲ್ಲ. ಆದರೆ ಇದೇ ರೀತಿ ನಿರ್ಲಕ್ಷ್ಯವಾದರೆ ಬಹುಶಃ ಪ್ರತ್ಯೇಕ ರಾಜ್ಯದ ಕಹಳೆಯನ್ನು ಇವತ್ತು ಅಲ್ಲಿ ಊದುತ್ತಿದ್ದಾರೆ ಕೆಲವೊಂದು ಜನ, ಕೆಲವೊಂದು ಮೂಲೆಯಲ್ಲಿ ಈ ಒಂದು ಶಬ್ದ ಬರುತ್ತಿದೆ. ನಾಳೆ ಇಡೀ ಉತ್ತರ ಕರ್ನಾಟಕದಲ್ಲಿ ಆ ಶಬ್ದ ಇರಬಹುದು. ಅಂದರೆ ನಾಳೆ ಯಾರನ್ನು ಕೇಳಿದರೂ ಯಾರೂ ಹೇಳುವುದಕ್ಕೆ ತಯಾರಾಗುವುದಿಲ್ಲ. ಆ ಪರಿಸ್ಥಿತಿ ನಿರ್ಮಾಣವಾಗಬಹುದು. ಏಕೆಂದರೆ ಅವರಿಗೆ ಆ ಕಲ್ಪನೆ ಬಂದುಬಿಟ್ಟಿದೆ. ನಮ್ಮದು ಒಂದು ರಾಜ್ಯವಾದರೆ definite ಆಗಿ ಹೈಕೋರ್ಟ್ ಪೀಠ ಸಿಗುತ್ತದೆ. ನಮ್ಮದೊಂದು ಉತ್ತರ ಕರ್ನಾಟಕ ಬೇರೆ ಇದ್ದುಬಿಟ್ಟರೆ ನಾವು ಯಾರಿಗೂ ಅಪ್ಪಯ್ಯಾ ಎನ್ನುವುದು ಬೇಕಾಗಿಲ್ಲ. ನಮಗೊಂದು ಹೈಕೋರ್ಟ್ ಬಂದುಬಿಡುತ್ತದೆ. ಏಕೆ ಬೇಕು? ನಾವ್ಯಾಕೆ ಬೆಂಗಳೂರಿಗೆ ಬಂದು ಗಂಟು ಬೀಳಬೇಕು? ಈ ರೀತಿ ಭಾವನೆ ಜನರಲ್ಲಿ ಬರುತ್ತಿದೆ. ಮುಖ್ಯಮಂತ್ರಿಗಳು ಹೋಗಿ ಭೇಟಿಯಾಗಲಿಕ್ಕೆ ತಯಾರಿಲ್ಲ ಚೀಫ್ ಜಸ್ಟೀಸ್‌ನ್ನು ಲಾ ಮಿನಿಸ್ಟರ್ ಹೋಗಿ ಭೇಟಿಯಾಗಲು ತಯಾರಿಲ್ಲ. ಇವತ್ತು ಇದರ ಬಗ್ಗೆ ಚೀಫ್ ಜಸ್ಟೀಸ್ favourable ಇದ್ದಾರೆ. ಆದರೆ ಇವರ ಕಡೆಯಿಂದ

ರಾಜಕೀಯ ಇಚ್ಛಾಶಕ್ತಿ ಇಲ್ಲ, ಅವರನ್ನು ಭೇಟಿಯಾಗಲು ತಯಾರಿಲ್ಲ. ಇವತ್ತು ಸೂಚನೆಯನ್ನು ಕೊಟ್ಟಿದ್ದಾರೆ. ಹಾಗಾದರೆ ಇವತ್ತು ಬಜೆಟ್‌ನಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತು. ಹತ್ತು ಕೋಟಿ ರೂಪಾಯಿಗಳನ್ನು ಕಳೆದ ಸಲ ಇಟ್ಟಿದ್ದೀರಿ. ಹಾಗಾದರೆ ಈ ಸಲ ನೀವು ಒಂದು ನೂರು ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತಲ್ಲಾ, ಈಗಾಗಲೇ ವರದಿ ಸಿ.ಜೆ. ಮುಂದೆ ಇದೆ. ಸಿ.ಜೆ. ಇದರ ಬಗ್ಗೆ favourable ಇದ್ದಾರೆ ಎನ್ನುವುದು ಒಂದು ವಾರ್ತೆ ಇದೆ. ಮತ್ತು ನಿನ್ನೆ ಪತ್ರಿಕೆಯಲ್ಲಿ ನೋಡಿದರೆ ಮೂಲಭೂತಸೌಕರ್ಯಗಳನ್ನು ಒದಗಿಸಿಕೊಡಿ ಎಂದು ಸಿ.ಜೆ. ಅವರು ಸೂಚನೆಯನ್ನು ಕೊಟ್ಟಿದ್ದಾರೆ ಚಂದ್ರೇಗೌಡರಿಗೆ, ಹಾಗಾದರೆ ನೀವು ಈ re-appropriation ಸಂದರ್ಭದಲ್ಲಿ ಈ ಒಂದು ಹೈಕೋರ್ಟ್ ಪೀಠದ ಸಲುವಾಗಿ ಏನಾದರೂ additional budget ನ್ನು ಇಡುತ್ತೀರೋ ಹೇಗೆ? ಅಲೊಕೇಷನನ್ನು ಮಾಡುತ್ತೀರೋ ಹೇಗೆ? ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಮತ್ತು ಸರಿಯಾದಂಥ ಪ್ರಾಮಾಣಿಕ ಪ್ರಯತ್ನ ನಿಮ್ಮ ಕಡೆಯಿಂದ ಆಗಬೇಕಾಗುತ್ತದೆ. ಅಂದಾಗ ಮಾತ್ರ ಈ ಹೈಕೋರ್ಟ್ ಪೀಠ ಆಗಲಿಕ್ಕೆ ಸಾಧ್ಯ ಇದೆ. ನಾಲ್ಕು ವರ್ಷಗಳಿಂದಲೂ ನೀವು ಹೇಳಿಕೊಂಡೇ ಬಂದಿದ್ದೀರಿ. ನಿನ್ನೆ ಪತ್ರಿಕೆಯಲ್ಲಿ ಬಂದಿತ್ತು. ಮಾನ್ಯ ಮುಖ್ಯಮಂತ್ರಿಗಳು ಚಿಕ್ಕಮಗಳೂರಿಗೆ ಎಲ್ಲೋ ಪ್ರವಾಸಕ್ಕೆ ಹೋದಾಗ ಹೇಳಿದ್ದಾರೆ. ಯಾರೂ ಹೆದರುವ ಕಾರಣವಿಲ್ಲ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವಾಗುತ್ತದೆ, ನಾನು ಬದ್ಧನಿದ್ದೇನೆ ಎಂದು ಹೇಳಿದ್ದಾರೆ. ನಾಲ್ಕು ವರ್ಷದಿಂದ ಬದ್ಧನಿದ್ದೇನೆ. ಇದೇ ನಡೆಯುತ್ತಿದೆ. ಏನೂ ಹೆದರುವ ಕಾರಣವಿಲ್ಲ. ಚಳುವಳಿಯನ್ನು ಮಾಡುವುದಕ್ಕೆ ಹೋಗಬೇಡಿ, ಎಲ್ಲಾ ಸರಿ ಇದೆ, ಇದೇ ರೀತಿಯಾದಂಥ ಮಾತು ನಾಲ್ಕು ವರ್ಷಗಳಿಂದಲೂ ಬರುತ್ತಿವೆ. ಅದಕ್ಕಾಗಿ ಇದರ ಬಗ್ಗೆ ಸರಿಯಾದಂಥ ಒಂದು ಚಿಂತನೆಯನ್ನು ಸರ್ಕಾರ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಅದೇ ರೀತಿ K-RIDE ಎಂದು ಮಾನ್ಯ ಮುಖ್ಯಮಂತ್ರಿಗಳು ಅದನ್ನು ಸ್ಥಾಪನೆ ಮಾಡಿದರು. ಯಾವಾಗ ಎಂದರೆ ಇದು ಎರಡು ವರ್ಷದ ಮೇಲಾಯಿತು. ಆದರೆ ಇದುವರೆಗೂ ಏನು ಪ್ರೋಗ್ರೆಸ್ ಆಯಿತು ಎಂದು ಇವತ್ತಿನವರೆಗೂ ಸರ್ಕಾರದ ಕಡೆಯಿಂದ ಉತ್ತರ ಇಲ್ಲ. ಇವತ್ತು ಕೆಲವೊಂದು ಪ್ರಾಜೆಕ್ಟ್ ಬಗ್ಗೆ ಸರ್ಕಾರ K-RIDE ಸ್ಥಾಪನೆಮಾಡಿ KarnatakaRail infrastructure Development enterprisess ಎಂದು ಹೇಳಿ ಮಾಡಿದರು. ಆದರೆ ಇನ್ನೂವರೆಗೂ ಯಾವುದೂ ಅನುಷ್ಠಾನವಾಗಿಲ್ಲ. ಕೆಲವೊಂದು ಯೋಜನೆಗಳನ್ನು ಮಾಡಿದರು. Karnataka Rail infrastructure development enterprises ಎಂದು ಹೇಳಿ ಅದರಲ್ಲಿ ಯಾವುದ್ಯಾವುದನ್ನು ತೆಗೆದುಕೊಂಡಿದ್ದರು, ಹಾಸನ ಮಂಗಳೂರು. ಗೇಜ್ ಕನ್‌ವರ್ಷನ್. ಆಮೇಲೆ ಹುಬ್ಬಳ್ಳಿ–ಅಂಕೋಲಾ ಹೊಸ ರೈಲ್ವೆ ಮಾರ್ಗ, ಆಮೇಲೆ ಬಿಜಾಪುರ–ಗದಗ್ ಗೇಜ್ ಕನ್‌ವರ್ಷನ್, ಗುಂಟಕಲ್ ಹೊಸಪೇಟೆ ಡಬಲ್ ಲೈನ್ ಹಾಕುವಂಥದ್ದು ಈ ನಾಲ್ಕು ಯೋಜನೆಗಳನ್ನು K-RIDE ಸಂಸ್ಥೆಯ ಮುಖಾಂತರ ಇದನ್ನು ನಾವು ಅನುಷ್ಠಾನ ಮಾಡುತ್ತೇವೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಯಾವಾಗ 2001–02ನೇ ಬಜೆಟ್‌ನಲ್ಲಿ ಹೇಳಿದರು. ಹಾಗಾಧರೆ ಅದಕ್ಕೆ ಎಷ್ಟು ಹಣವನ್ನು ತೆಗೆದಿಟ್ಟಿದ್ದೀರಿ? ಇದಕ್ಕೆ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗಿದೆ. ಕೇವಲ 5 ಕೋಟಿ ರೂ ಹತ್ತು ಕೋಟಿ ರೂ ಕೊಡುವುದನ್ನು ಬಿಟ್ಟರೆ ಇವತ್ತು ಇದು ನೂರಾರು ಕೋಟಿರೂಗಳು ಪ್ರಾಜೆಕ್ಟ್ ನೀವು ಹಣವನ್ನು ನಿಗದಿ ಮಾಡಲಿಲ್ಲ. ಮತ್ತು ಕೇಂದ್ರಸರ್ಕಾರದ ರೈಲ್ವೆ ಸಚಿವರ ಕಡೆ ತೋರಿಸುವಂಥದ್ದು. ಹಾಗಾದರೆ

ನೀವ್ಯಾಕೆ ಇದಕ್ಕೆ ಹಣವನ್ನು ನಿಗದಿ ಮಾಡದೆ ಈ ನಾಲ್ಕು ಯೋಜನೆಗಳನ್ನು ಅನುಷ್ಠಾನ ಮಾಡುವುದಕ್ಕೆ ಹೊರಟಿದ್ದೀರಿ? ಮುಖ್ಯಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಇನ್ನೂವರೆಗೆ ಆಗಲಿಲ್ಲ. ಅದಕ್ಕೆ ಅಗ್ರಿಮೆಂಟ್ ಆಯಿತು. ಅಗ್ರಿಮೆಂಟ್ ಯಾವಾಗ ಆಗಿತ್ತೆಂದರೆ 12–10–2000ಕ್ಕೆ ಇದು ಸ್ಥಾಪನೆ. ಆಮೇಲೆ ಅದೇ ಸಂದರ್ಭದಲ್ಲಿ ಅಗ್ರಿಮೆಂಟ್ ಆಯಿತು. ಇನ್ನೂವರೆಗೂ ಅನುಷ್ಠಾನವಾಗಲಿಲ್ಲ. ಅದೇ ರೀತಿ ಇವತ್ತು ಜಾರ್ಖಂಡ್‌ನಲ್ಲಿ ಈಗಾಗಲೇ ಈ ರೀತಿ ಅಗ್ರಿಮೆಂಟ್‌ಗಳನ್ನು ಮಾಡಿಕೊಂಡು ಹಲವಾರು ಯೋಜನೆಗಳನ್ನು ಅನುಷ್ಠಾನ ಮಾಡಿಬಿಟ್ಟಿದ್ದಾರೆ. ಇದರ ಪ್ರಕಾರ ನಿಮ್ಮದು 40 ಪರ್‌ಸೆಂಟ್. 40 ಪರ್‌ಸೆಂಟನ್ನು ಕೇಂದ್ರಸರ್ಕಾರ ಕೊಡುತ್ತದೆ. 20 ಪರ್‌ಸೆಂಟ್ ಇನ್ನಿತರ ಆರ್ಥಿಕ ಸಂಸ್ಥೆಗಳ ಮುಖಾಂತರ ತೆಗೆದುಕೊಳ್ಳತಕ್ಕ ಯೋಜನೆ ಇದು. ಇದನ್ನು ಮಾಡಬೇಕಾಗಿತ್ತಲ್ಲಾ. ಇದನ್ನು ಮಾಡಿದರೆ ಕರ್ನಾಟಕದಲ್ಲಿ ಎಷ್ಟು ಡೆವಲಪ್‌ಮೆಂಟ್ ಆಗುತ್ತದೆ. ಅಂದರೆ ಕೇವಲ ಮಾತು, ಮಾತು ಘೋಷಣೆ, ಘೋಷಣೆ ಅಷ್ಟೇನೇ ನಾಲ್ಕು ವರ್ಷದಿಂದ ಯಾವುದೂ ಇಲ್ಲ. ಆಗ ಅವರು ಘೋಷಣೆಯನ್ನು ಮಾಡಿದಾಗ ಕೆರಾಯ್ಡ್‌ಅಡ್ಡಿ ಇಲ್ಲ. ಮಮತಾ ಬ್ಯಾನರ್ಜಿಯವರು ಬಂದರು, ಅಗ್ರಿಮೆಂಟ್ ಸಹಿ ಎಲ್ಲಾ ಆಯಿತು, ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಎಸ್‌ಎಂ ಕೃಷ್ಣಾರವರು, ರೈಲ್ವೆ ಡೆವಲಪ್‌ಮೆಂಟ್ಸ್ ಬಗ್ಗೆ ಕಾಳಜಿಯನ್ನು ತೆಗೆದುಕೊಂಡಿದ್ದಾರೆಂದು ಹೇಳಿ ನಾವೆಲ್ಲರು ಅಂದುಕೊಂಡೆವು ನೋಡಿದರೆ ನಿಲ್ ಪ್ರೊಗ್ರೆಸ್ ಶೂನ್ಯ, ಇವತ್ತು ಸರ್ಕಾರ ಇವತ್ತು ಜನರಿಗೆ ಮಾಡುತ್ತಿರುವಂಥ ಮೋಸ. ಅದೇ ರೀತಿ ಪಾಪ ಚಿರಂಜೀವಿ ಸಿಂಗ್‌ರವರು ಬೆಂಗಳೂರಿನಲ್ಲಿದ್ದು ಏನೋ ಒಂದಿಷ್ಟು ಕೆಲಸವನ್ನು ಮಾಡುತ್ತಿದ್ದರು, ಅವರನ್ನು ಬೆಳಗಾಂಗೆ ತೆಗೆದುಕೊಂಡು ಹೋದರು. ಉತ್ತರ ಕರ್ನಾಟಕ ಅಭಿವೃದ್ಧಿ ಆಯೋಗ ಡೆವಲಪ್‌ಮೆಂಟ್ ಬೋರ್ಡ್ ಎಂದು ಏನೊ ಒಂದು ಮಾಡಿದರು. ನಾರ್ತ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಎಂದು ಹೇಳಿ. ಇದೊಂದು ಹೊಸದು ಬೇರೆ ಎಲ್ಲಾ ಅಭಿವೃದ್ಧಿ ಮಂಡಳಿಗಳನ್ನು ರದ್ದು ಮಾಡಿ ಇದೊಂದು ಉತ್ತರ ಕರ್ನಾಟಕದ ಅಭಿವೃದ್ಧಿ ಮಂಡಳಿ ಬೇರೆ. ಅಲ್ಲಿ ಆಯುಕ್ತರು ಬೋರ್ಡ್ ಎಂದು ಹೇಳಿ ಮತ್ತೊಂದು ಬೆಳಗಾಂನಲ್ಲಿ, ಅವರಿಗೆ ಕೊಡುವುದಕ್ಕೆ ಸರಿಯಾದ ಆಫೀಸ್ ಇಲ್ಲ. ಸಿಬ್ಬಂದಿ ಇಲ್ಲ ಅವರಿಗೆ. ಅವರಿಗೆ ಹಣವೂ ಇಲ್ಲ. ಯಾವ ಅಧಿಕಾರವೂ ಇಲ್ಲ. ಚಿರಂಜೀವಿ ಸಿಂಗ್‌ರವರು ಪಾಪ ಅಲ್ಲಿ ಇಲ್ಲೊಂದು ಪ್ರೆಸ್ ಕಾನ್‌ಫರೆನ್ಸ್‌ನ್ನು ಮಾಡಿಕೊಂಡು ಅಡ್ಡಾಡುವುದಕ್ಕೆ ಹತ್ತಿದ್ದಾರೆ. ಏನೂ ಇಲ್ಲ ಅವರಿಗೆ ಕೆಲಸ. ಅವರು ಹೇಳುತ್ತಾರೆ, ಹಣವೇ ಇಲ್ಲ, ನಾನೇನು ಮಾಡಲಿ ಎಂದು ಹೇಳುತ್ತಾರೆ. ನಂಜುಂಡಪ್ಪನವರ ವರದಿಯನ್ನು ಅನುಷ್ಠಾನ ಮಾಡುವುದಕ್ಕೆ ಕಳುಹಿಸಿದ್ದಾರೆ. ಅವರಿಗೆ ಹಣವನ್ನೇ ಕೊಟ್ಟಿಲ್ಲ. ಅವರೇನು ಅನುಷ್ಠಾನ ಮಾಡಬೇಕು? ಅಂದರೆ ಸರ್ಕಾರ ಏಕೆ ಈ ರೀತಿ ಮಾಡುತ್ತಿದೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಮಾನ್ಯ ಖರ್ಗೆಯವರೂ ಕೂಡ ಆ ಭಾಗದವರಾಗಿ ಅವರ್ಯಾಕೆ ಸುಮ್ಮನೆ ಕುಳಿತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ ಸ್ವಲ್ಪ ಬಂಡಾಯ ಏಳಬೇಕು.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಮಾನ್ಯ ಅಧ್ಯಕ್ಷರೆ, ಹೆಚ್‌ಕೆಡಿಬಿ ಯಲ್ಲಿ ವ್ಯತ್ಯಾಸವಾಗಿದೆ ಎಂದು ನಾನು ಕೇಳಿದೆ, ಅದಕ್ಕೆ ಉತ್ತರ ಕೊಡುವಾಗ ಸಮರ್ಪಕವಾದ ಉತ್ತರವನ್ನು ಕೊಡುತ್ತೇನೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಅವರು ಮಾನ್ಯ ಮುಖ್ಯಮಂತ್ರಿಯವರಾಗಲೀ, ಸದನದಲ್ಲಿ ಅಪೇಕ್ಷೆ ಏನೆಂದರೆ ಈ ಹೆಚ್‌ಕೆಡಿಬಿ ಗೆ ಶಕ್ತಿಯನ್ನು ಕೊಡಬೇಕಾದರೆ ವಿರೋಧ ಪಕ್ಷದ

ನಾಯಕರೂ ಕೂಡ ಅಷ್ಟೇ ಒತ್ತಾಯವಾಗಿ ಮಾತನಾಡಿದರೆ ಸರಿಹೋಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

**ಶ್ರೀ ಎಸ್.ಎಸ್. ಪಾಟೀಲ್** :- ವಿರೋಧ ಪಕ್ಷದ ನಾಯಕರು ಹೇಳಿದಂತೆ ಹೈದರಾಬಾದ್ ಅಭಿವೃದ್ಧಿ ಮಂಡಳಿಯನ್ನು ರದ್ದು ಮಾಡುವುದಕ್ಕೆ ತಾವೇ ಒಪ್ಪಿಗೆಯನ್ನು ಕೊಟ್ಟಿದ್ದೀರಿ. ತಾವೇ ನೇರವಾಗಿ ಹೇಳಿ. ಅವರು ಹೇಳಿದ ಪ್ರಕಾರ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯು ರದ್ದು ಆಗಲಿಕ್ಕೆ ಇವರದ್ದೂ ಒಪ್ಪಿಗೆ ಇದೆ – ಎನ್ನುವ ಇಲ್ಲಿ ಅರ್ಥ ಆಗುತ್ತದೆ. ಅದು ಗೊತ್ತಿತ್ತು. ಎಂದು ಅರ್ಥ ಆಯಿತಲ್ಲಾ. ನೇರವಾಗಿ ನೀವು ಹೇಳಿ ಬಿಡಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :- ನೀವು ನಿಮ್ಮ ಮಾತನ್ನು ನನ್ನ ಬಾಯಲ್ಲಿ ಹಾಕಬೇಡಿ. ನಾನು ಹೇಳಿದ್ದು, ಉತ್ತರ ಕರ್ನಾಟಕ ಬೋರ್ಡ್ ಎಂದು ಮಾಡಿದ್ದು ಬಜೆಟ್‌ನಲ್ಲಿ ಬಂದಿದೆ. ಹೆಚ್‌ಕೆಡಿಬಿಯನ್ನು ಸಧ್ಯಕ್ಕೆ ಅಬಾಲಿಷ್ ಮಾಡತಕ್ಕದ್ದು ಸರಿಯಲ್ಲ ಎನ್ನತಕ್ಕ ಭಾವನೆ ನಮ್ಮ ಎಲ್ಲಾ 39 ಶಾಸಕರ ಅಭಿಪ್ರಾಯ ಇದೆ. ಅದಕ್ಕೆ ಅದನ್ನು ರೀಟೇನ್ ಮಾಡಬೇಕೆಂದು ಕೇಳಿದಾಗ, ಅದನ್ನು ನಾನು ಉತ್ತರ ಕೊಡುವಾಗ ಅದರ ಬಗ್ಗೆ ಒಂದು ಸ್ಪಷ್ಟೀಕರಣ ಸರಿಯಾಗಿ ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ನಾನು ಆ ಮಾತನ್ನು ಹೇಳಿದನೇ ಹೊರತಾಗಿ ನಿಮಗೆ ಏನು ಅನಿಸುತ್ತದೋ ಅದನ್ನು ನನ್ನ ಬಾಯಲ್ಲಿ ಹಾಕಿ ನನ್ನ ಬಾಯಿಂದ ತೆಗೆದುಕೊಂಡು ಇಡೀ ರಾಜ್ಯದ ಮೇಲೆ ಅದರ ಮೇಲೆ ಪ್ರಚಾರ ಮಾಡಿಕೊಳ್ಳುತ್ತೀರಾ? ನಿಮ್ಮ ಕೆಲಸನೇ ಅಪಪ್ರಚಾರ ಮಾಡುವುದು...... ಒಳ್ಳೆಯದು ಪ್ರಚಾರ ಮಾಡಿ.

**ಶ್ರೀ ಎಸ್.ಎಸ್. ಪಾಟೀಲ್** :- ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ರದ್ದು ಮಾಡಿದ್ದು ಸರಿ ಎಂದ ಹಾಗಾಯಿತು, ನೀವು. ಅದು ನನಗೆ ಮೂಲವಾಗಿ ಬೇಕಾಗಿತ್ತು. ನೀವು ಒಪ್ಪಿಕೊಂಡರೆ ಸಾಕು. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲಿ ಮಾಡಿ ಅದಕ್ಕೇನೋ ಒಂದು ಐದು ಕೋಟಿ ರೂಪಯಿ ಕೊಟ್ಟರೆ ಅದು ಪಗಾರಕ್ಕೆ ಆಗುವುದಿಲ್ಲ. ಅಷ್ಟು ಇಟ್ಟು ಈ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಗೆ 30–40 ಕೋಟಿ ರೂಪಾಯಿ ಕೊಡುತ್ತಿದ್ದರು, ಅದನ್ನು ರದ್ದು ಮಾಡಿದ್ದು ನಿಮ್ಮ ಪ್ರಕಾರ ಸರಿ ಎಂದ ಹಾಗಾಯಿತು.

**ಶ್ರೀ ಮಲ್ಲಿಕಾರ್ಜುನಖರ್ಗೆ** :- ಉತ್ತರ ಕೊಡುತ್ತಾರೆ.

**ಶ್ರೀ ಎಸ್.ಎಸ್. ಪಾಟೀಲ್** :- ನಿಮ್ಮ ವಿಚಾರ ಹೇಳಿ.

**ಶ್ರೀ ಜಗದೀಶ್ ಶೆಟ್ಟರ್** :- ಮತ್ತೊಂದು ವಿಚಾರ. ಆಗಸ್ಟ್ 5, 2003ಕ್ಕೆ ಒಂದು ಘೋಷಣೆ ಮಾಡಿದರು. ಅಲ್ಲಿ ಅಧಿಕಾರಿಗಳು ಬಂದರು ಎಲ್ಲಿ ಅಂದರೆ ಬೆಂಗಳೂರಿನಲ್ಲೇ. 'ಈ ಉತ್ತರ ಕರ್ನಾಟಕ ಕಾರ್ಯಪಡೆ ಶೀಘ್ರ' ಒಂದು ಸಾವಿರ ಹಳ್ಳಿಗಳಲ್ಲಿ ಮಾಹಿತಿ ತಂತ್ರಜ್ಞಾನ ಕೇಂದ್ರ, ಹಿಂದುಳಿದ ಉತ್ತರ ಕರ್ನಾಟಕ ಪ್ರದೇಶದ ಪಟ್ಟಣಗಳ ಪ್ರದೇಶಗಳಲ್ಲಿ ಮೂಲ ಸೌಲಭ್ಯಗಳನ್ನು ಸುಧಾರಿಸುವ ದೃಷ್ಟಿಯಿಂದ ಉತ್ತರ ಕರ್ನಾಟಕ ಕಾರ್ಯಪಡೆ' ಈ ತಿಂಗಳ 18 ರಂದು ಹುಬ್ಬಳ್ಳಿಯಲ್ಲಿ ಆರಂಭ ಎಂಬ ವಿಚಾರ ಬಂತು. ಅದು ಎಲ್ಲೂ ಆರಂಭ ಆಗಿಲ್ಲ. 2003ರಲ್ಲಿ ಘೋಷಣೆ. ಡಿಜಿಟಲ್ ಭೂ ದಾಖಲೆಗಳು ಮತ್ತಿತರ ಉಪಯುಕ್ತ ಮಾಹಿತಿಗಳನ್ನು ರೈತರಿಗೆ ಒದಗಿಸಲು 1000 ಹಳ್ಳಿಗಳಲ್ಲಿ ಮಾಹಿತಿ ತಂತ್ರಜ್ಞಾನದ ಕೇಂದ್ರಗಳನ್ನು ಖಾಸಗಿಯವರ ಸಹಯೋಗದೊಂದಿಗೆ ಮುಂದಿನ ಆರು ತಿಂಗಳಲ್ಲಿ ಪ್ರಾರಂಭ ಮಾಡಲಾಗುವುದು. 6 ತಿಂಗಳಾಯಿತು, ಎಲ್ಲಾ ಮುಗಿದು ಹೋಯಿತು.

ಇನ್ನೂವರೆಗೆ ಪ್ರಾರಂಭ ಆಗಿಲ್ಲ. ಅಂದರೆ ಬರೇ ಘೋಷಣೆಗಳು. ಘೋಷಣೆಗಳ ಸರ್ಕಾರ ಎಂದು ಹೇಳಬೇಕಾಗುತ್ತದೆ. ಬೇರೆ ಏನೂ ಇಲ್ಲ.

**ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ ತಂತ್ರಜ್ಞಾನ ಸಚಿವರು)** :– ಮಾನ್ಯ ಅಧ್ಯಕ್ಷರೆ, ಮಾಹಿತಿ ತಂತ್ರಜ್ಞಾನ ಕೇಂದ್ರ ಪ್ರಾರಂಭ ಮಾಡಬೇಕಾದರೆ ಯಾವುದಾದರೂ ಕಂಪನಿಗಳು ಬರಬೇಕು. ಸರ್ಕಾರದಿಂದ ಯಾವುದೇ ಕಂಪನಿಗಳನ್ನು ನಾವು ತೆಗೆಯುತ್ತಿಲ್ಲ. ಯಾರಾದರೂ ಕಂಪನಿಯವರು ಬಂದು ತೆಗೆಯಬೇಕು.

**ಶ್ರೀ ಜಗದೀಶ್ ಶೆಟ್ಟರ್** :– ನಿಮ್ಮ ಆಫೀಸರ್ಸ್ ಹೇಳಿದ್ದಾರೆ.

**ಶ್ರೀ ಡಿ.ಬಿ. ಇನಾಂದಾರ್** :– ಹುಬ್ಬಳ್ಳಿಯಲ್ಲಿ ತಯಾರು ಮಾಡಿ ಇಟ್ಟಿದ್ದೆವು.

**ಶ್ರೀ ಜಗದೀಶ್ ಶೆಟ್ಟರ್** :– ನಿಮ್ಮ ಆಫೀಸರ್ಸ್ ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ.

**ಶ್ರೀ ಡಿ.ಬಿ. ಇನಾಂದಾರ್** :– ನಾವು ತಯಾರು ಮಾಡಿ ಎಲ್ಲಾ ಫೆಸಿಲಿಟಿ ಇಟ್ಟಿದ್ದೇವೆ.

**ಶ್ರೀ ಜಗದೀಶ್ ಶೆಟ್ಟರ್** :– ನಿಮ್ಮ ಕಾರ್ಯಪಡೆ ಎಲ್ಲಿದೆ? 18 ರಂದು ಹುಬ್ಬಳ್ಳಿಯಲ್ಲಿ ಕಾರ್ಯಪಡೆ ಆರಂಭ. ಟಾಸ್ಕ್ ಫೋರ್ಸ್ ಠುಸ್ ಆಗಿದೆ. ಏನೂ ಇಲ್ಲ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ನೀವು ಪುಸ್ ಅಂದಾಗೆಲ್ಲಾ ಅವು ಪುಷ್ ಆಗುತ್ತವೆ.

**ಶ್ರೀ ಜಗದೀಶ್ ಶೆಟ್ಟರ್** :– ಎಲ್ಲಾ ಘೋಷಣೆಗಳೂ ಠುಸ್ ಆಗಿದ್ದಾವೆ. ಆಮೇಲೆ ಸಕ್ಕರೆ ಕಾರ್ಖಾನೆ ಮುಚ್ಚಲಿಕ್ಕೆ ಹೊರಟಿದ್ದಾರೆ. ಆಗಲೇ ಡಿಸೀಷನ್ ತೆಗೆದುಕೊಂಡಿಬ್ಬಾರೆ. ಭಾಗ್ಯ ಲಕ್ಷ್ಮಿ ಶುಗರ್ ಫ್ಯಾಕ್ಟರಿ, ಬೆಳಗಾಂನವರೂ ಇಲ್ಲಿದ್ದಾರೆ, ಅಲ್ಲಿನ ಶುಗರ್ ಫ್ಯಾಕ್ಟರಿಯನ್ನೂ ಮುಚ್ಚಲಿಕ್ಕೆ ಹೊರಟಿದ್ದಾರೆ. 15 ಕೋಟಿ ರೂಪಾಯಿ ಕಬ್ಬು ಬಾಕಿ ರೈತರಿಗೆ ಭಾಗ್ಯಲಕ್ಷ್ಮಿ ಶುಗರ್ ಫ್ಯಾಕ್ಟರಿಯಿಂದ ಬರಬೇಕಾಗಿದೆ. ಇನ್ನು ಬೇರೆ ಬೇರೆ ಕಾರ್ಖಾನೆಗಳ ಬಗ್ಗೆ ನಾವು ನೋಡಿದಾಗ ನೂರಾರು ಕೋಟಿ ರೂಪಾಯಿಗಳು ಇವತ್ತು ಕಬ್ಬು ಬೆಳೆಗಾರರಿಗೆ ಬಾಕಿ ಬರಬೇಕಾಗಿದೆ. ಅದರ ಬಿಲ್ ಪೇಮೆಂಟ್ ಇವತ್ತು ಆಗಲಿಲ್ಲ. ಇದು ಪರಿಸ್ಥಿತಿ ಇರುವಂತಹದು. ಆಮೇಲೆ ಗೋಶಾಲೆಗಳನ್ನು ಎಲ್ಲೂ ತೆಗೆಯುತ್ತಿಲ್ಲ. ಪ್ರತಿ ಒಂದು ಹೋಬಳಿ, ಪ್ರತಿ ಒಂದು ತಾಲ್ಲೂಕಿಗೆ ಒಂದು ಗೋಶಾಲೆ ಎಂದರು ಎಲ್ಲೂ ಗೋಶಾಲೆ ಪ್ರಾರಂಭ ಆಗಲಿಲ್ಲ. ಆಮೇಲೆ ಮುಂದೆ ಸಣ್ಣ ಕೈಗಾರಿಕೆಗಳ ವಿಚಾರ. ಅದರ ಬಗ್ಗೆ ಅಂತೂ ನಮಗೇ ಬೇಸರ ಆಗಿದೆ. ಪ್ರತಿ ಸಾರಿ ಸದನದಲ್ಲಿ ಕೇಳುವುದು, ಅದಕ್ಕೇನೂ ರೆಸ್ಪಾನ್ಸ್ ಇಲ್ಲ. ಆ ಸಣ್ಣ ಕೈಗಾರಿಕೆಗಳು ಹಾಗೆಯೇ ಮುಚ್ಚಿಕೊಂಡು ಹೊರಟಿದ್ದಾವೆ. ನಾವು ಆದಾಗಿ ಎರಡು ಮೂರು ವರ್ಷದ ಹಿಂದೆ ಹೇಳುವಾಗ ಶೇಕಡಾ 60 ರಷ್ಟು ಎಲ್ಲಾ ಸಣ್ಣ ಕೈಗಾರಿಕೆಗಳು ಬಾಗಿಲು ಹಾಕಿದ್ದಾವೆ ಎಂದು ಹೇಳಿದರು. ಬಹುಶಃ ನಾವು ಈಗ ಹುಡುವುದಕ್ಕೆ ಹೋದರೆ ಎಲ್ಲಾ ಮುಚ್ಚಿರಬೇಕು. 400 ಕೋಟಿ ರೂಪಾಯಿ ಸಬ್ಸಿಡಿ ಬರಬೇಕು. ಏನು ಒಂದು ಸಲ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟು ಬಿಟ್ಟರು. ಇನ್ನು 15 ದಿವಸದಲ್ಲಿ ಸಬ್ಸಿಡಿ ಬಿಡುಗಡೆ ಮಾಡುತ್ತೇವೆ. ಎಲ್ಲಾ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಿರುತ್ತದೆ, ಬಿಡುಗಡೆ ಮಾಡುತ್ತೇವೆಂದು ಹೇಳಿದರು. 400 ಕೋಟಿ ರೂಪಾಯಿ ಬಿಡುಗಡೆ ಆಗಬೇಕಾಗಿದೆ ಇವತ್ತಿನವರೆಗೂ ನಾನು ಯಾವತ್ತಿನಿಂದ ಈ ಸದನದಲ್ಲಿ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡುವುದಕ್ಕೆ ಹತ್ತಿದ್ದೇನೆ, ಅವತ್ತಿನಿಂದ ನಾವು ಕೇಳುವುದಕ್ಕೆ ಹೊರಟಿದ್ದೇನೆ. ಈ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಬಿಡುಗಡೆ ಮಾಡಿ ಎಂದು ಕೇಳುತ್ತಿದ್ದೇವೆ. ಒಂದೇ ಉತ್ತರ ಹೇಳುತ್ತಾರೆ, ಆದಷ್ಟು ಬೇಗನೇ ಆರ್ಥಿಕ ಪರಿಸ್ಥಿತಿ ಸುಧಾರಣೆ ಆದ ತಕ್ಷಣ ಬಿಡುಗಡೆ. ಇದನ್ನು ಪ್ರತಿ ಸಾರಿ

ಹೇಳುತ್ತೀರಿ. ಅಮದರೆ ಈ ಸರ್ಕಾರ ಮನೆಗೆ ಹೋಗುತ್ತದೆ ಅಷ್ಟೇ ಏನು ಮಾಡುವುದು? ಸರ್ಕಾರ ಮನೆಗೆ ಹೋದ ಮೇಲೆ ಹೊಸ ಸರ್ಕಾರ ಬಂದ ಮೇಲೆ ಬಿಡುಗಡೆ ಆಗುವ ಲಕ್ಷಣ ಕಾಣುತ್ತಿದೆಯೇ ಹೊರತು ಮತ್ತೇನೂ ಇಲ್ಲ. ಆಮೇಲೆ ಆನ್ ಲೈನ್ ಲಾಟರಿ ವಿಚಾರ. ಸಾಕಷ್ಟು ಹೋರಾಟ, ಪ್ರತಿಭಟನೆ ಆಯಿತು. ಎಲ್ಲಿಯವರೆಗೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಜನಸ್ಪಂದನ ಕಾರ್ಯಕ್ರಮಕ್ಕೆ ಹೋದಾಗ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಬಂದು ಪ್ರತಿಭಟನೆ ಮಾಡಿ ಘೇರಾವ್ ಮಾಡಿದರು. ಈ ಆನ್ ಲೈನ್ ಲಾಟರಿ ರದ್ದು ಮಾಡುತ್ತೀರೋ ಇಲ್ಲವೋ ಎಂದು ಕೇಳಿದರು. ಆವಾಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಇಲ್ಲ ಮುಂದಿನ ಬಜೆಟ್‌ವರೆಗೆ ತಡೆಯಿರಿ, ಅದನ್ನು ನಿಷೇಧ ಮಾಡುತ್ತೇವೆಂದು ಹೇಳಿದರು. ಮಾನ್ಯ ಚಂದ್ರೇಗೌಡರು ಒಂದು ಕಡೆಗೆ ಹೇಳಿದರು. ಇಲ್ಲ ಬಜೆಟ್ ಬರಲಿ, ಬಜೆಟ್‌ನಲ್ಲಿ ನಿಷೇಧ ಮಾಡುತ್ತೇವೆಂದು ಹೇಳಿದರು. ಈ ಬಜೆಟ್ ಅನ್ನು ನಾವು ತೆಗೆದು ನೋಡಿದೆವು. ಎಲ್ಲೂ ಪ್ರಸ್ತಾಪ ಇಲ್ಲ. ಅಂದರೆ ಅವರು ಹಾಳಾಗುವವರು ಹಾಳಾಗಲಿ, ಜನ ಸಾಮಾನ್ಯರು, ಬಡವರು, ದೀನದಲಿತರು, ಬೀದಿಗೆ ಬೀಳಿರಿ. ಲಾಟರಿ ಆಡಿರಿ, ನಮ್ಮ ಮಾನ್ಯ ಮಂತ್ರಿಗಳು ಲಾಟರಿ ಆಡಿರಿ ಎಂದು ಅವರೇ ಅಡ್ವರ್‌ಟೈಸ್ ಕೊಟ್ಟಿದ್ದರು. ನಮ್ಮ ಮಾನ್ಯ ಚಿಂಚನ್‌ಸೂರ್ ಅವರು ಹುರುಪಿನಿಂದ ಹೇಳುತ್ತಿದ್ದರು. ಲಾಟರಿ ಆಡಬೇಕು. ಲಕ್ಷ್ಮಿ ಒಲಿಯಬೇಕು ಎಂದು ಹೇಳುತ್ತಿದ್ದರು. ಹೀಗಾಗಿ ಆ ಕಂಪನಿಗಳಿಗೆ ಐದು ಸಾವಿರ ಕೋಟಿ ರೂ ಲಾಭ. ನಮ್ಮ ರಾಜ್ಯ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿ ಲಾಭ ಅಷ್ಟೇ. ಇದು ಆನ್ ಲೈನ್ ಲಾಟರಿ. ಇದನ್ನು ನಿಷೇಧ ಮಾಡಲು ನಿಮಗೆ ಆಗಲಿಲ್ಲ. ಏಕೆ ಅಂತಹ ಒತ್ತಡ ಏನು ಎಂದು ಹೇಳಿ. ನಾವು ನಿಯಂತ್ರಣ ಹಾಕಿದ್ದೇವೆ. ನೂರೆಂಟು ನಿಯಂತ್ರಣ ನಾವು ಹಾಕಿದ್ದೇವೆ ಎಂದಿರಿ. ಕೇವಲ ನಿಯಂತ್ರಣದಿಂದ ಯಾವುದೂ ನಡೆಯುವುದಿಲ್ಲ. ಎಲ್ಲಿಯವರೆಗೂ ನೀವು ಸಂಪೂರ್ಣವಾಗಿ ನಿಷೇಧ ಮಾಡುವುದಿಲ್ಲವೋ ಅಲ್ಲಿಯವರೆಗೂ ಆನ್ ಲೈನ್ ಲಾಟರಿ ಹೋಗಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇ ಆನ್ ಲೈನ್ ಲಾಟರಿಯನ್ನು ತಕ್ಷಣವೇ ರದ್ದು ಮಾಡಬೇಕು ಎನ್ನುವಂತಹ ಒತ್ತಾಯವನ್ನು ನಾನು ಇವತ್ತು ಮಾಡುತ್ತಿದ್ದೇನೆ. ಮತ್ತು ಇನ್ನೊಂದು ವಿಚಾರ. ಲೋಕಯುಕ್ತರು ಇವತ್ತು ಎಷ್ಟು ಕಡೆ ಧಾಳಿ ಮಾಡಿದ್ದಾರೆಂಬ ಬಗ್ಗೆ ನೀವು ಒಂದು ಶ್ವೇತ ಪತ್ರವನ್ನು ಹೊರಡಿಸಬೇಕಾಗುತ್ತದೆ. ಎಷ್ಟು ಕಡೆ ಧಾಳಿ ಮಾಡಿದ್ದಾರೆ ಎಷ್ಟು ಜನ ಅಧಿಕಾರಿಗಳನ್ನು ಹಿಡಿದಿದ್ದಾರೆ? ಎಷ್ಟು ಭ್ರಷ್ಟಾಚಾರದ ಪ್ರಕರಣಗಳು ದಾಖಲಾಗಿವೆ? ಎಷ್ಟು ಜನ ಅಧಿಕಾರಿಗಳ ಮೇಲೆ ಸಸ್ಪೆಂಡ್ ಕ್ರಮವನ್ನು ಕೈಗೊಂಡಿದ್ದೀರಿ? ಕಾನೂನು ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ಜನರನ್ನು ನೀವು ಸರ್ವೀಸ್‌ನಿಂದ ಟರ್ಮಿನೇಟ್ ಮಾಡಿದಿರಿ? ಇವರ ಬಗ್ಗೆ ನೀವು ಶ್ವೇತ ಪತ್ರವನ್ನು ಹೊರಡಿಸಬೇಕಾಗುತ್ತದೆ. ಏಕೆಂದರೆ ನಾವು ಕೇವಲ ಲೋಕಾಯುಕ್ತಕ್ಕೆ ಅಧಿಕಾರ ಕೊಟ್ಟಿದ್ದೇವೆ ಎಂದು ಹೇಳುವುದು. ಅವರಿಗೆ ಅಧಿಕಾರವನ್ನೇ ಕೊಟ್ಟಿಲ್ಲ. ಏನೂ ಅವರಿಗೆ ಮಾಡುವುದಕ್ಕೆ ಆಗುವುದಿಲ್ಲ. ಸುಮ್ಮನೇ ಅವರು ಧಾಳಿ ಮಾಡಿಕೊಂಡು ಹೊರಟಿದ್ದಾರೆ. ಅಲ್ಲಲ್ಲಿ ಹೋಗುವುದು, ಹಿಡಿಯುವುದು ಮಾಡುತ್ತಿದ್ದಾರೆ. ಆದರೆ ನಿಜವಾಗಿ ಅವರಿಗೆ ಅಧಿಕಾರ ಇಲ್ಲ. ಆಮೇಲೆ ಉಪ ಲೋಕಾಯುಕ್ತರ ಹುದ್ದೆ ತುಂಬುವುದು ಕಳೆದ ಎರಡು ಮೂರು ವರ್ಷಗಳಿಂದ ಪೆಂಡಿಂಗ್ ಇದೆ. ಉಪ ಲೋಕಾಯುಕ್ತರ ಹುದ್ದೆಯನ್ನು ನಿಮಗೆ ತುಂಬಲಿಕ್ಕೆ ಆಗಲಿಲ್ಲ. ಪ್ರತಿ ಪಕ್ಷದ ನಾಯಕರ ಕಡೆಯಿಂದ ನೀವು ಲೆಟರ್ ತೆಗೆದುಕೊಂಡಿರಿ. ಉಪ ಲೋಕಾಯುಕ್ತರು ಯಾರಾಗಬೇಕು ಎಂದು ಹೇಳಿ ಲೆಟರ್ ಕೇಳಿದಿರಿ. ನಾವು ಎರಡು ಸಲ ಲೆಟರ್ ಕೊಟ್ಟಿದ್ದೇವೆ. ಇಂತಹವರನ್ನು ಮಾಡಿ

ಎಂದು ಹೇಳಿ ನಾವು ಸಲಹೆ ಕೊಟ್ಟು ಎರಡು ಸಲ ಲೆಟರ್ ಕಳುಹಿಸಿದರೆ ಇನ್ನೂವರೆಗೆ ಉಪಲೋಕಾಯುಕ್ತರನ್ನು ನೇಮಿಸಲಿಲ್ಲ. ಒಬ್ಬ ಉಪ ಲೋಕಾಯುಕ್ತರ ಅಪಾಯಿಂಟ್‌ಮೆಂಟ್ ಮಾಡಲಾರದ ಸರ್ಕಾರ ಯಾವ ರೀತಿ ಹೈಟೆಕ್ ಸರ್ಕಾರ ಎಂದು ನಾನು ಇವತ್ತು ಕೇಳಬೇಕಾಗುತ್ತದೆ. ಹೈಟೆಕ್ ಎನ್ನುವುದು ಮುಗಿದು ಹೋಯಿತು. ಪಾರದರ್ಶಕ ಸರ್ಕಾರ, ಹೈಟೆಕ್ ಸರ್ಕಾರ, ಆಮೇಲೆ ಹೇಳಿದರು. ವಿಡಿಯೋ ಕಾನ್‌ಫೆರೆನ್ಸ್ ವಿಚಾರ ಹೇಳಿದರು. ನಾಲ್ಕು ವರ್ಷಗಳಾದ ಮೇಲೆ ಮಾನ್ಯ ಖರ್ಗೆಯವರು ಮೊನ್ನೆ ವಿಡಿಯೋ ಕಾನ್‌ಫರೆನ್ಸ್ ಪ್ರಾರಂಭ ಮಾಡಿದರು. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಚಹ ವಿಡಿಯೋ ಕಾನ್‌ಫರೆನ್ಸ್ ಚಾಲು ಮಾಡಿ ನಾಲ್ಕು ವರ್ಷ ಆಯಿತು. ಎಲ್ಲಾ ಡಿಸಿಗಳಿಗೆ ಹೊತ್ತಿದೆ, ಎಲ್ಲಾ ಮಾತನಾಡಿದ್ದೇ, ಮಾತನಾಡಿದ್ದು. ಅವು ಬಂದಾಗಿವೆ. ವಿಡಿಯೋ ಕಾನ್‌ಫರೆನ್ಸ್ ಬಂದಾಗಿದ್ದಾವೆ. ಆಮೇಲೆ ಇಲ್ಲಿ ವಿಧಾನಸೌಧ ಹತ್ತಿ ಬರುವಾಗ ಸ್ಮಾರ್ಟ್ ಕಾರ್ಡ್ ಎಂದು ಹೇಳಿದರು. ಅದು ಎಲ್ಲಿದೆಯೋ ಗೊತ್ತಿಲ್ಲ. ಕೊರಳಿಗೆ ಒಂದು ಕಾರ್ಡ್ ಹಾಕಿಕೊಂಡು ನೌಕರರು ಬರುತ್ತಿದ್ದರು. ಅವನ್ನು ಈಗ ಯಾರೂ ಹಾಕಿಕೊಳ್ಳುತ್ತಿಲ್ಲ. ಸ್ಮಾರ್ಟ್ ಕಾರ್ಡ್ ಹೋಯಿತು. ಅಂದರೆ ಏನೋ ಒಂದು ಒಟ್ಟಿಗೆ ಹೇಳುವುದು. ಸ್ಮಾರ್ಟ್‌ಕಾರ್ಡ್, ವಿಡಿಯೋ ಕಾನ್‌ಫರೆನ್ಸ್, ಹೈಟೆಕ್, ಆದರೆ ಇವತ್ತಿನ ಪರಿಸ್ಥಿತಿ ನೋಡಿದರೆ ಯಾವ ಹೈಟೆಕ್ ಇಲ್ಲ. ಗೀಟೆಕ್ ಇಲ್ಲ. ಅಂತಹ ಪರಿಸ್ಥಿತಿ ಇವತ್ತು ಸರ್ಕಾರದ್ದು ಆಗಿದೆ. ಆಮೇಲೆ ನಾವು ಹಿಂದೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಇವತ್ತು ಕೋಕಾ ಕೋಲಾ ಕಂಪನಿ ಇದೆ. ಆ ಕೋಕಾ ಕೋಲಾ ಕಂಪನಿಗೆ ನೀವು ಎರಡು ನೂರು ಕೋಟಿ ರೂಪಾಯಿಗಿಂತ ಜಾಸ್ತಿ ತೆರಿಗೆ ವಿನಾಯಿತಿ ಕೊಟ್ಟಿರಿ. ಆದರೆ ಅಲ್ಲಿ ದುಡಿಯುತ್ತಿದ್ದಂತಹ ನೌಕರುದಾರರ ವಿಚಾರ ನಾನು ಹಿಂದೆ ಪ್ರಸ್ತಾಪ ಮಾಡಿದ್ದೆ. ಮಾನ್ಯ ಆರ್.ವಿ. ದೇಶಪಾಂಡೆಯವರು ಇದ್ದರು. ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಇವತ್ತು ಅಲ್ಲಿದ್ದಂತಹ ದುಡಿಯುವಂತಹ ಕಾರ್ಮಿಕರಿಗೆ ಯಾವುದೇ ರೀತಿಯ ಫೆಸಿಲಿಟಿ ಇಲ್ಲ. ಅವರಿಗೆ ಸರಿಯಾದಂತಹ ಕ್ಯಾಂಟೀನ್ ವ್ಯವಸ್ಥೆ ಇಲ್ಲ. ಕನಿಷ್ಟ ವೇತನ ಇಲ್ಲ. ಬೋನಸ್ ಇಲ್ಲ. ಇಎಸ್‌ಯ ಸೌಲಭ್ಯ ಇಲ್ಲ. ಆಮೇಲೆ ಸರಿಯಾದಂತಹ ವೇತನ ಇಲ್ಲ. ಯಾವುದೇ ಫೆಸಿಲಿಟಿ ಅವರಿಗೆ ಇಲ್ಲ. ಇದರ ಬಗ್ಗೆ ನಾನು ಸಾಕಷ್ಟು ಸದನದಲ್ಲಿ ಪ್ರಸ್ತಾಪ ಮಾಡಿದರು ಇನ್ನೂವರೆಗೆ ಆ ಕೋಕಾ ಕೋಲಾ ಪಂಪನಿಯನ್ನು ನಿಮಗೆ ಟಚ್ ಮಾಡಲು ಆಗಲಿಲ್ಲ. ಅಂದರೆ ಯಾವ ರೀತಿ ಲಾಬಿಗಳು ಇಲ್ಲಿ ರಾಜ್ಯ ಸರ್ಕಾರದ ಮೇಲೆ ಕೆಲಸ ಮಾಡುತ್ತಿದ್ದಾವೆ? ಒತ್ತಡ ಮಾಡುತ್ತಿದ್ದೇವೆ ಎನ್ನುವುದು ಅರ್ಥ ಆಗುತ್ತದೆ. ಇವತ್ತಿಗಾದರೂ ಆ ಕೋಕಾ ಕೋಲಾ ಕಂಪನಿಯ ನೌಕರುದಾರರನ್ನು ಕರೆಸಿ ಏನು ತೊಂದರೆ ಇದೆ ಎನ್ನುವಂತದನ್ನು ಕೇಳಿ ಇವತ್ತು ಅಲ್ಲಿ ಇನ್‌ಸೆಕ್ಯೂರಿಟಿ ಆಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಏನೂ ಫೆಸಿಲಿಟಿಗಳು ಇಲ್ಲ. ಈ ರೀತಿ ಪರಿಸ್ಥಿತಿ ಒಂದು ಕಡೆ. ಇನ್ನೊಂದು ಇವತ್ತು ಹೇಳುವಂತಹದು. ಈ ಭೂಮಿಯ ಯೋಜನೆ. ಅದರಲ್ಲಿ ಕೆಲವೊಂದು ತೊಂದರೆಗಳು ಇದ್ದಾವೆ. ಮಾನ್ಯ ಕಂದಾಯ ಸಚಿವರಾದ ಶ್ರೀಕಂಠಯ್ಯನವರ ಗಮನಕ್ಕೆ ಒಂದು ವಿಚಾರ ತರುತ್ತಿದ್ದೇನೆ. ಭೂಮಿ ಯೋಜನೆ, ಕಂಪ್ಯೂಟರೈಸೇಷನ್, ರೆಕಾರ್ಡ್ ಆಫ್ ರೈಟ್ಸ್ ಎಲ್ಲವನ್ನೂ ಕಂಪ್ಯೂಟರೈಸ್ ಮಾಡಿದಿರಿ. ಒಳ್ಳೆಯ ಕೆಲಸ ಮಾಡಿದಿರಿ, ನಾನು ಇಲ್ಲವೆಂದು ಹೇಳಲಿಲ್ಲ. ಅದನ್ನು ಪ್ರತಿ ಒಂದು ಹೋಬಳಿಗೂ ಒಂದು ಕಂಪ್ಯೂಟರೈಸೇಷನ್ ಆಗಬೇಕು. ಕೊನೆಗೆ ಅದು ಪ್ರತಿ ಒಂದು ದೊಡ್ಡ ಗ್ರಾಮಗಳಿಗೂ ಹೋಗಿ ಮುಟ್ಟಬೇಕು. ಅಂದರೆ ಅದರಿಂದ ರೈತರಿಗೆ ಉಪಯೋಗ ಆಗುತ್ತದೆ. ಮತ್ತೊಂದು ಏನಾಗಿದೆ ಎಂದರೆ ನೀವು 15 ರೂಪಾಯಿ

ಇವತ್ತು ಏನು ಛಾರ್ಜ್ ಮಾಡಿದ್ದೀರಿ, 15 ರೂಪಾಯಿ ಛಾರ್ಜ್‌ನ್ನು ಅದನ್ನು ಕಡಿಮೆ ಮಾಡಬೇಕು. ಮತ್ತೊಂದು ವಿಚಾರ ಏನು ಹೇಳುತ್ತಿದ್ದೇನೆಂದರೆ ಇವತ್ತು ತಾಲ್ಲೂಕು ಮಟ್ಟದಲ್ಲಿ ಇರುವುದರಿಂದ ಆ ಹಳ್ಳಿಯಿಂದ ಆ ರೈತ ಅಲ್ಲಿಗೆ ಬರಬೇಕು. ತನ್ನ ರೆಕಾರ್ಡ್ ಆಫ್ ರೈಟ್ಸ್, ತೆಗೆದುಕೊಳ್ಳುವುದಕ್ಕೆ ಬರಬೇಕು. ಅದಕ್ಕೆ ಟ್ರಾವೆಲಿಂಗ್ ಖರ್ಚು ನೂರಾರು ರೂಪಾಯಿ ಆತ ಕೊಡಬೇಕಾಗುತ್ತದೆ. ಹೀಗಾಗಿ ಅದು ಅವನ ಮೇಲೆ ಬರ್ಡನೆಸಮ್ ಆಗಿದೆ. ಮತ್ತು ಇನ್ನೊಂದು ತೊಂದರೆ ಏನಾಗಿದೆ ಎಂದರೆ ಇವತ್ತು ಯಾರಾದರೂ ಮನೆಯಲ್ಲಿ ತೀರಿಕೊಂಡರೆ ವಾರಸ ಎಂಟ್ರಿ ಮಾಡಬೇಕಾದರೆ ಬಹಳಷ್ಟು ಪ್ರೊಸೀಜರ್ ತೊಂದರೆಗಳು ಇದ್ದಾವೆ. ಅದನ್ನು ಸರಳ ಮಾಡಿ, ನಿಮ್ಮ ಅಧಿಕಾರಿಗಳು ಬಹಳಷ್ಟು ಪೀಡೆ ಮಾಡುತ್ತಿದ್ದಾರೆ. ಹೆಸರುಗಳನ್ನು ಬದಲಾಯಿಸಬೇಕಾದರೂ ಕೂಡ ಅಧಿಕಾರಿಗಳು ಬಹಳ ತೊಂದರೆ ಕೊಡುತ್ತಿದ್ದಾರೆ. ಇದು ತಪ್ಪಬೇಕು. ಅನಂತರ, ಯಾವುದೋ ಒಂದು ಮಾಹಿತಿ ತಪ್ಪಾಗಿರುತ್ತದೆ, ಅಂಕಿ-ಸಂಖ್ಯೆ, ಎಕರೆ ವಿವರ, ರೈತರ ಹೆಸರುಗಳು ತಪ್ಪಾಗಿರುತ್ತದೆ, ಅದನ್ನು ಸರಿಪಡಿಸುವ ಪ್ರಕ್ರಿಯೆ ಲಘುವಾಗಿ ಆಗುವುದಿಲ್ಲ. 8-10 ದಿನಗಟ್ಟಳೆ ಅಡ್ಡಾಡಿಸುತ್ತಾರೆ. ಇಷ್ಟೆಲ್ಲಾ ತೊಂದರೆಗಳಿರುವುದರಿಂದ, ಇವೆಲ್ಲವನ್ನು ಸರಿಪಡಿಸಿದಲ್ಲಿ ಇದೊಂದು ಒಳ್ಳೆಯ ಯೋಜನೆಯಾಗುತ್ತದೆ. ರೈತರಿಗಾಗುವ ಇಷ್ಟೆಲ್ಲಾ ತೊಂದರೆಗಳ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಇನ್ನು ಇದನ್ನು ತಿದ್ದುವಂಥ ಕೆಲಸವಾಗಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇದುವರೆವಿಗೂ ಯಾವುದೇ ಕಂಟ್ರಾಕ್ಟರ್ಸ್‌ಗೆ ಬಿಲ್ ಪೇಮೆಂಟ್ ಆಗಿಲ್ಲ. "ನಾವು ಆರ್ಥಿಕವಾಗಿ ಉತ್ತಮ ಮಟ್ಟದಲ್ಲಿದ್ದೇವೆ" ಎಂದು ಸರ್ಕಾರ ಒಂದು ಕಡೆ ಹೇಳುತ್ತದೆ. ಆದರೆ, ಯಾವುದೇ ರೀತಿಯಲ್ಲೂ ಇವೊತ್ತು ಕಂಟ್ರಾಕ್ಟರ್‌ಗಳಿಗೆ ಬಿಲ್ ಪೇಮೆಂಟ್ ಆಗುತ್ತಿಲ್ಲ. ಇನ್ನು 800-1000 ಕೋಟಿ ರೂಪಾಯಿಗಳಷ್ಟು ಬಿಲ್ ಪೆಂಡಿಂಗ್ ಇದೆ. ಕೆಲಸ ಮಾಡಿ ಹಣ ಬಾರದಿದ್ದರೆ ಅವರು ಎಲ್ಲಿಗೆ ಹೋಗಬೇಕು? ಇವೊತ್ತು ರೈತರು, ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಂತೆ ನಾಳೆ ದಿವಸ ಕಂಟ್ರಾಕ್ಟರ್‌ಗಳೂ ಸಹ ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ! 'ಬಿಲ್ ಪೇಮೆಂಟ್ ಮಾಡುತ್ತೇವೆ' ಎಂದು ಹೇಳಿದ್ದರು ಪೇಮೆಂಟ್ ಮಾಡಿಲ್ಲ. ಅನಂತರ, ನೇಕಾರರಿಗೆಂದು ಸುಮಾರು 107 ಕೋಟಿ ರೂಪಾಯಿಗಳ ಪ್ಯಾಕೇಜ್ ಪ್ರಕಟಿಸಿದಿರಿ. ಈಗ ಎಲ್ಲಾ ಪ್ಯಾಕೇಜ್‌ಗಳನ್ನು ಪ್ರಕಟಿಸಿದ್ದೀರಿ. ಬಳ್ಳಾರಿ ಪ್ಯಾಕೇಜ್, ರೈತರ ಪ್ಯಾಕೇಜ್. ಇವೊತ್ತು ರೈತರ ಪ್ಯಾಕೇಜ್. ನೇಕಾರರಿಗೆ ಸಂಬಂಧಿಸಿದಂತೆ 107 ಕೋಟಿ ರೂಪಾಯಿಗಳ ಪ್ಯಾಕೇಜ್ ಪ್ರಕಟಿಸಿದ್ದೀರಲ್ಲಾ ಇದರ ಬಗ್ಗೆ ನಾನು ಒಂದು ವಿಷಯ ಹೇಳುವುದೇನೆಂದರೆ, ಈ ತಕ್ಷಣ 17 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕು. ಇವೊತ್ತು ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಬಾಕಿ ಹಣವಾದ 17 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಕೊಡಬೇಕಾಗಿದೆ. ಇದನ್ನು ದಯವಿಟ್ಟು ತಕ್ಷಣವೇ ಪೇಮೆಂಟ್ ಮಾಡಬೇಕು. ಈ ರೀತಿ ಮಾಡಿದ್ದಲ್ಲಿ ನೇಕಾರರಿಗೆ ಸಕಾಲದಲ್ಲಿ ನೂಲು ಸಿಗುತ್ತದೆ, ಕೂಲಿ ಸಿಗುತ್ತದೆ. ನೀವು ಅದನ್ನೂ ಕೊಡುವುದಿಲ್ಲ. ಸರ್ಕಾರದ ಇಲಾಖೆಗಳೇನಿವೆ, ಈ ಇಲಾಖೆಗಳು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಯಾವುದೇ ರೀತಿಯಲ್ಲೂ ಆರ್ಡರ್ ಕೊಡುವುದಿಲ್ಲ. ಹಾಗಾದರೆ, ನೇಕಾರರು ಬದುಕುವುದಾದರೂ ಹೇಗೆ? ಸರ್ಕಾರ ಸ್ಥಾಪಿಸಿರುವ ನಿಗಮ ಹೇಗೆ ಬದುಕಬೇಕು? ಹೀಗಾಗಿ, ನಿಗಮ ಹಾಗೂ ನೇಕಾರರನ್ನು ಬದುಕಿಸಬೇಕಾದರೆ ತಕ್ಷಣವೇ 17 ಕೋಟಿ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಬೇಕು. [illegible]

ತನ್ಮೂಲಕ ನೇಕಾರರೂ ಬದುಕುತ್ತಾರೆಂಬ ಮಾತನ್ನು ಹೇಳುತ್ತೇನೆ. ನಂತರ, ನೇಕಾರರ ಪ್ಯಾಕೇಜ್ ಅನ್ನು ಬೇಕಾದರೆ ಇನ್ನು ಐದು ವರ್ಷಗಳ ಕಾಲ ಅನುಷ್ಠಾನಗೊಳಿಸಿ. ಆದರೆ, ತಕ್ಷಣಕ್ಕೆ 17 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಇನ್ನು ಕೊನೆಯದಾಗಿ, ಸ್ವಯಂ ಘೋಷಿತ ಆಸ್ತಿ ತೆರಿಗೆ ಕುರಿತು ಹೇಳುವುದಾದರೆ, ಈ ಕುರಿತು ಬಹಳಷ್ಟು ಗೊಂದಲಗಳು ನಿರ್ಮಾಣವಾಗಿವೆ. ಎಲ್ಲಾ ಕಡೆಗಳಲ್ಲು ಗೊಂದಲಗಳಿವೆ. ಈ ಯೋಜನೆ ಸರಿಯಾಗಿ ಅನುಷ್ಠಾನವಾಗುತ್ತಿಲ್ಲ. ನೀವು ಏನು ಎಸ್ಟಿಮೇಟ್ ಮಾಡುತ್ತೀರಿ, ಕ್ಯಾಲ್ಕುಲೇಶನ್ ಮಾಡುತ್ತೀರಿ, ಪ್ರಾಪರ್ಟಿ ರೆಂಟ್ ಏನು ಬರುತ್ತದೆ, ಅದರ ಆಧಾರದ ಮೇಲೆ ಮಾಡಬೇಕು. ಆದರೆ, ಇವೊತ್ತು ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಪ್ರಾಪರ್ಟಿ ವ್ಯಾಲ್ಯುಯೇಶನ್ ಏನು ಮಾಡುತ್ತಾರೆ, ಅದರ ಆಧಾರದ ಮೇಲೆ ನೀವು ಮಾಡುತ್ತೀರಿ. ಇದರಿಂದ ಪ್ರತಿ ವರ್ಷ enhanced property valuation ಮೇಲೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಮುಖಾಂತರ ನಾಗರಿಕರು ತೆರಿಗೆ ತುಂಬಬೇಕಾಗುತ್ತದೆ. ಏಕೆಂದರೆ, ಸರ್ಕಾರ ಹೊರಡಿಸಿರುವ ಒಂದು ಆದೇಶದಲ್ಲಿ ನೀಡಿರುವ ನಿರ್ದೇಶನದಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ ಪ್ರತಿ ವರ್ಷವೂ 20–30 ಪರ್ಸೆಂಟ್ ಪ್ರಾಪರ್ಟಿ ವ್ಯಾಲ್ಯುಯೇಶನ್ ಅನ್ನು ಎನಾನ್ಸ್ ಮಾಡಬೇಕಾಗುತ್ತದೆ. ಈ ರೀತಿ ಇದ್ದಾಗ ಪ್ರತಿ ವರ್ಷವೂ tax enhancement ಆಗುತ್ತದೆ. ಇದನ್ನು ಐದು ವರ್ಷಗಳಿಗೊಮ್ಮೆ ಮಾಡಿದರೂ ಅಡ್ಡಿಯಿಲ್ಲ. ಮೂರು ವರ್ಷಗಳಿಗೊಮ್ಮೆ ಮಾಡಿದರು ಅಡ್ಡಿಯಿಲ್ಲ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಿಂದಾಗಿ ಪ್ರತಿ ವರ್ಷವೂ ನಾಗರಿಕರು ಹೆಚ್ಚು ಟ್ಯಾಕ್ಸ್ ತೆರಬೇಕಾದ ಪರಿಸ್ಥಿತಿ ಬಂದೊದಗಿದೆ. ಈ ಕುರಿತು ವಿಧೇಯಕವನ್ನು ಹಿಂದೆ ಪಾಸ್ ಮಾಡುವ ಸಂದರ್ಭದಲ್ಲಿ ನಾವು ಸಾಕಷ್ಟು ವಾದ ಮಾಡಿದ್ದೇವೆ. ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದೆವು. ಆದರೆ, ಸರ್ಕಾರ ಚರ್ಚೆ ಮಾಡಲು ತಯಾರಾಗಲಿಲ್ಲ. ವಿಧೇಯಕವನ್ನು ಕೊನೆಗೂ ಪಾಸ್ ಮಾಡಿದರು. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ರದ್ದುಗೊಳಿಸಬೇಕೆಂದು ಇವೊತ್ತು ಎಲ್ಲಾ ಕಡೆಗಳಲ್ಲು ಹೋರಾಟ ನಡೆಯುತ್ತಿದೆ, ಸತ್ಯಾಗ್ರಹ ಜರುಗುತ್ತಿದೆ. ಇನ್ನೂ ಸಾಕಷ್ಟು ಜನರು ಇದನ್ನು ಚಾಲೆಂಜ್ ಮಾಡಿ ಈಗಾಗಲೇ ಕೋರ್ಟಿಗೆ ಹೋಗಿದ್ದಾರೆ. ಸರ್ಕಾರ ಈ ಬಗ್ಗೆ ಸಂಬಂಧಪಟ್ಟವರನ್ನು ಕರೆದು ಮಾತನಾಡಲಿ. ಎಲ್ಲಾ ಪ್ರತಿನಿಧಿಗಳನ್ನು, ಚೇಂಬರ್ ಆಫ್ ಕಾಮರ್ಸ್ ಪ್ರಮುಖರನ್ನು ಇನ್ನಿತರರನ್ನು ಕರೆಸಿ ಮಾತನಾಡಿ ಇದಕ್ಕೆ ಏನಾದರೊಂದು ಪರಿಹಾರ ಹುಡುಕಬೇಕು. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ಮೂಲ ವಿಷಯದ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ, ಇದರಲ್ಲಿ ಲೋಪ–ದೋಷಗಳಿದ್ದು, ಇದನ್ನು ಸರಿಪಡಿಸುವ ಕೆಲಸ ಸರ್ಕಾರದಿಂದ ಆದಲ್ಲಿ ಇದನ್ನು ಅನುಷ್ಠಾನಗೊಳಿಸಲು ಸಾಧ್ಯವಿದೆ. ಇಲ್ಲದಿದ್ದರೆ, ಎಲ್ಲಾ ಕಡೆಗಳಲ್ಲೂ ಇದೇ ರೀತಿಯ ಗೊಂದಲಗಳನ್ನು ನೀವು ಅನುಭವಿಸಬೇಕಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

"ಬಿಜೆಪಿಯವರು ನಕಲಿ ಸ್ಟಾಂಪ್ ಪೇಪರ್ ಹಗರಣದ ಬಗ್ಗೆ ರೋಷನ್ ಬೇಗ್ ಇಶ್ಯೂ ಬಗ್ಗೆ ಇನ್ನು ಮಾತನಾಡುವುದಿಲ್ಲ." ಎಂದು ಇವೊತ್ತ ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಹೇಳಿಕೆ ಕೊಟ್ಟರು. ಅವರಿಗೆ ಯಾವಾಗ ಜ್ಞಾನೋದಯವಾಗಿತ್ತೋ ಏನೋ ಗೊತ್ತಿಲ್ಲ. ಅದರ ಬಗ್ಗೆ ನಾವು ಮಾತನಾಡುವುದಿಲ್ಲವೆಂದು ಅವರಿಗೆ ನಾವು ಯಾವಾಗ ಹೇಳಿದ್ದೆವೋ ಗೊತ್ತಿಲ್ಲ. ಆದರೆ, ಈ ವಿಷಯ ಇನ್ನೂ ಮುಗಿದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿದುಕೊಳ್ಳಬೇಕು. ಕರೀಂಲಾಲಾ ತೆರಿಗೆ ವಿಷಯ, ನಕಲಿ ಸ್ಟಾಂಪ್ ಪೇಪರ್ ಹಗರಣದ ವಿಷಯ ಇನ್ನೂ ಮುಕ್ತಾಯವಾಗಿಲ್ಲ. ಈ

ಹಗರಣದಲ್ಲಿ ಇನ್ನೂ ನಾಲ್ಕೈದು ಮಂತ್ರಿಗಳ ಹೆಸರುಗಳಿವೆ. 8–10 ಪೊಲೀಸ್ ಅಧಿಕಾರಿಗಳ ಹೆಸರುಗಳಿವೆ. ಅವರುಗಳು ಎಲ್ಲಿಯವರೆಗೆ ಮನೆಗೆ ಹೋಗುವುದಿಲ್ಲವೋ ಅಲ್ಲಿಯವರೆಗೆ ನಾವು ನಮ್ಮ ಹೋರಾಟ ಮುಂದುವರೆಸುತ್ತೇವೆ. ಇದು ಇಲ್ಲಿಗೇ ಮುಗಿಯುವುದಿಲ್ಲ. ನಿನ್ನೆ ಮತ್ತು ಇಂದಿನ ಪತ್ರಿಕೆಗಳಲ್ಲಿ ಬಂದಿದೆ. ಕರೀಂಲಾಲಾ ತೆಲಗಿಯ ಸ್ಟೇಟ್‌ಮೆಂಟ್ ಬಂದಿದೆ. "ತೆಲಗಿಯ ಸೀಮೆಎಣ್ಣೆ ವ್ಯವಹಾರಕ್ಕೆ ಮಾಜಿ ಸಚಿವರ ರೋಷನ್ ಬೇಗ್ ನೆರವು" ಎಂಬ ಶೀರ್ಷಿಕೆ ಹೊತ್ತ ವಿಷಯ ಇಂದಿನ ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಇದಕ್ಕೆ ಸಂಬಂಧಿಸಿದ ದಾಖಲೆಗಳು, ತೆಲಗಿಯ ಸ್ಟೇಟ್‌ಮೆಂಟ್ ವಿವರಗಳು ನಮ್ಮ ಕಡೆ ಇರುವುದಾಗಿ ಸ್ಪಷ್ಟವಾದ ಆರ್ಟಿಕಲ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅಂದರೆ, ಇನ್ನೂ ಈ ವಿಷಯ ಮುಕ್ತಾಯವಾಗಿಲ್ಲ. ಈಗಾಗಲೇ ಮೆಕ್ಕಾಗೆ ತೆರಳಿದವರು ಅಲ್ಲಿಂದ ವಾಪಸ್ಸು ಬರುವುದಕ್ಕೆ ಶುರು ಮಾಡಿದ್ದರು ರೋಷನ್ ಬೇಗ್ ಇನ್ನೂ ವಾಪಸ್ಸು ಬರಲು ತಯಾರಿಲ್ಲ~ ಇದರ ಅರ್ಥವೇನೆಂದು ನೀವು ತಿಳಿದುಕೊಳ್ಳಬೇಕು. ರಾಜ್ಯಪಾಲರ ಭಾಷಣದ ಸದನ ಮುಗಿದು ಇವೊತ್ತು ಬಜೆಟ್ ಅಧಿವೇಶನ ಬಂತು. ಈಗ ರೋಷನ್ ಬೇಗ್‌ರವರು ತಮ್ಮ ಅಪ್ಪಣೆ ತೆಗೆದುಕೊಂಡಿದ್ದಾರೋ ಇಲ್ಲವೋ ನಮಗೆ ಗೊತ್ತಿಲ್ಲ. ಈ ಸಲ ಪತ್ರ ಬರೆದಿದ್ದಾರೋ ಇಲ್ಲವೋ ಅದೂ ಸಹ ನಮಗೆ ಗೊತ್ತಿಲ್ಲ. ಆದರೆ, ಈಗಲೂ ಸಹ ಅವರು ಬರಲು ತಯಾರಿಲ್ಲ. ಅವರು ಇಲ್ಲಿ ಸದನವನ್ನು ಫೇಸ್ ಮಾಡುವ ಮೂಲಕ ವಿಷಯ ಏನಾಗಿದೆ ಎಂದು ಹೇಳಲು ರೋಷನ್ ಬೇಗ್‌ರವರು ತಯಾರಿಲ್ಲ. ನಾವು ಇವೊತ್ತಿಗು ಡಿಮ್ಯಾಂಡ್ ಮಾಡುತ್ತಿದ್ದೇವೆ. ರೋಷನ್‌ಬೇಗ್ ಅವರ ಮೇಲೆ ತಕ್ಷಣವೇ ಕ್ರಿಮಿನಲ್ ಕೇಸ್ ಅನ್ನು ದಾಖಲು ಮಾಡಿ ಅವರನ್ನು ಬಂಧಿಸಬೇಕೆಂದು ಇವೊತ್ತಿನವರೆವಿಗೂ ನಾವು ಒತ್ತಾಯ ಮಾಡುತ್ತಿದ್ದೇವೆ. ಇವೊತ್ತು ಸಹ ಒತ್ತಾಯ ಮಾಡುತ್ತೇವೆ. ಏಕೆಂದರೆ, ಇವೊತ್ತು ಸಹ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದರೆ, ತಕ್ಷಣ ನೀವು ಕೇಸ್ ಹಾಕಬೇಕಾಗುತ್ತದೆ. 'ಇನ್ನೂ ಸಾಕ್ಷ್ಯಾಧಾರಗಳಿಲ್ಲ, ಅವರ ಮೇಲೆ ಯಾವುದೇ ಅಪಾದನೆಗಳಿಲ್ಲ' ಎಂದು ಇದೇ ವಿಷಯವನ್ನು ನೀವು ಹೇಳುತ್ತಾ ಹೋದರೆ ನಾಳೆ ಅದರ ಪಾಪವನ್ನು ರಾಜ್ಯ ಸರ್ಕಾರ ಅನುಭವಿಸಬೇಕಾಗುತ್ತದೆ. ಇದೇ ಕರೀಂಲಾಲಾ ತೆಲಗಿ ಪ್ರಕರಣದ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರ ಮನೆಗೆ ಹೋಗುತ್ತದೆ, ಜನರು ಪಾಠ ಕಲಿಸುತ್ತಾರೆ. ಪರಿಸ್ಥಿತಿ ಅಲ್ಲಿಗೇ ಬರುತ್ತದೆ. ನೀವು ಯಾರ ಮೇಲೂ ಕ್ರಮ ಕೈಗೊಳ್ಳಲು ತಯಾರಿಲ್ಲ. ಯಾರ ಮೇಲೂ ಕ್ರಿಮಿನಲ್ ಕೇಸ್ ಹಾಕಲು ತಯಾರಿಲ್ಲ. ಸದನ ಮುಗೀತು, ನಾಲ್ಕು ಜನರನ್ನು ನೀವು ಸಸ್ಪೆಂಡ್ ಮಾಡಿದಿರಿ. ಆಫೀಸರ್ಸ್ ಇದ್ದಾರೆಂದು ನಾವು ಅದನ್ನೇ ಹೇಳುತ್ತಿದ್ದೇವೆ. ಈಗ ಸಸ್ಪೆಂಡ್ ಮಾಡಿದಿರಲ್ಲಾ, ಹಾಗಾದರೆ, ಇನ್ನೂ ಹಲವಾರು ಮಂದಿ ಇದ್ದಾರಲ್ಲಾ, ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ? ಹೀಗಾಗಿ, ಈ ಸದನಕ್ಕೆ ಇದರ ಬಗ್ಗೆ ನಿಗೂಢತೆ ಇದೆ. ಬಹಳಷ್ಟು ಜನರು ಇದರಲ್ಲಿ ಶಾಮೀಲಾಗಿದ್ದಾರೆ. ಅದಕ್ಕೋಸ್ಕರ, ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯ ಮಾಡಿ, ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಬಜೆಟ್ ನಿಜವಾಗಿಯು ಜನರ ಬಗ್ಗೆ ಕಳಕಳಿ ಇಲ್ಲದಿರುವಂಥಾದ್ದು, ರೈತ ವಿರೋಧಿಯಾಗಿರುವಂಥಾದ್ದು, ಜನಸಾಮಾನ್ಯರಿಗೆ ವಿರೋಧಿಯಾಗಿರುವಂಥಾದ್ದು, ಮತ್ತು ನಾಗರಿಕ, ದೀನ–ದಲಿತರಿಗೆ ವಿರೋಧಿಯಾಗಿರುವ ಬಜೆಟ್ ಇದಾಗಿದೆಯೆಂದು ಹೇಳುವ ಮೂಲಕ ಬಜೆಟ್ ಅನ್ನು ವಿರೋಧಿಸುತ್ತಿದ್ದೇನೆ. ಇವೊತ್ತು ಬಜೆಟ್ ಮೇಲೆ ನೀಡಿರುವ ಸಲಹೆ–ಸೂಚನೆಗಳಿವೆ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸೂಕ್ತ ಉತ್ತರ ತಿಳಿಸುವ ಮೂಲಕ ಸ್ಪಷ್ಟೀಕರಣ ನೀಡುವುದು

ಅವಶ್ಯಕವಾಗಿದೆಯೆಂದು ಹೇಳಿ, ಈ ವಿಷಯವಾಗಿ ನನ್ನ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಇವೊತ್ತು ಅವಕಾಶ ಕೊಟ್ಟಿರುವ ಅಧ್ಯಕ್ಷರಾದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**† ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ)** :– ಸನ್ಮಾನ್ಯ ಅಧ್ಯಕ್ಷರೆ, ಇವೊತ್ತಿನ ಈ ಒಂದು ಪರಿಪೂರ್ಣವಾದ ಬಜೆಟ್ ಮೇಲೆ ಮಾತನಾಡಲು ತಾವು ಅವಕಾಶ ಮಾಡಿಕೊಟ್ಟಿರುವುದಕ್ಕೆ ನಾನು ತಮಗೆ ವಂದನೆ ಸಲ್ಲಿಸುತ್ತೇನೆ. ಈ ಸಂದರ್ಭದಲ್ಲಿ ಬಸವಣ್ಣನವರು ಹೇಳಿರುವ ಒಂದು ಮಾತು ನನಗೆ ನೆನಪಿಗೆ ಬರುತ್ತದೆ. ಈ ಬಜೆಟ್ ಬಗ್ಗೆ ನಾನು ಮಾತನಾಡುವಾಗ ಬಹುಶಃ ಶರಣರ ಉದಾಹರಣೆಗಳನ್ನು ತೆಗೆದುಕೊಂಡರೆ ತಪ್ಪಾಗಲಿಕ್ಕಿಲ್ಲವೆಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಬಯಸುತ್ತಿದ್ದೇನೆ. ಬಚ್ಚಲಾ ನೀರು ತಿಳಿಯಿದ್ದರೇನು, ಸಲ್ಲದ ಹೊನ್ನು ಮತ್ತೆಲ್ಲಿದ್ದರೇನು, ಆಕಾಶದ ಮಾವಿನ ಫಲ ಎಂದರೇನು ಕೊಯ್ಯಲಿಲ್ಲ ನಿಲ್ಲಲಿಲ್ಲ ಕೂಡಲಸಂಗನ ಶರಣರ ಅನುಭಾವವಿಲ್ಲದವರು ಎಲ್ಲಿದ್ದರೇನು ಎಂತಾದರೇನು? ಈ ರೀತಿ ಬಸವಣ್ಣನವರು ಹೇಳುತ್ತಾರೆ. ಈ ಬಜೆಟ್‌ಗೆ ಸಮೀಪವಾಗಿರುವ, ನೇರವಾಗಿರುವ ಮಾತು ಇದರಲ್ಲಡಗಿದೆ. ಬಜೆಟ್‌ನಲ್ಲಿ ಸರ್ವಜ್ಞನ ವಚನವನ್ನೂ ಸಹ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಸಲ ವಚನಗಳಿಂದ ಪ್ರೇರಿತರಾಗಿ ಒಳ್ಳೆಯ ಸಂಪ್ರದಾಯ ಹಾಕಿಕೊಟ್ಟಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಸವಣ್ಣ ಮತ್ತು ಸರ್ವಜ್ಞ ಕೆಲವು ವಚನಗಳನ್ನು ಸೇರಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಅನಂತರ, ಬಜೆಟ್‌ನಲ್ಲಿ ಕವಿಗಳ ವಾಣಿಗಳನ್ನೂ ಸಹ ತಂದಿದ್ದಾರೆ. ಕೊನೆಯದಾಗಿ, ಜನರನ್ನು ಮರುಳು ಮಾಡುವುದಕ್ಕೆ ಏನೇನೆಲ್ಲಾ ಪ್ರಯತ್ನಗಳಿವೆಯೋ ಅದೆಲ್ಲವನ್ನೂ ಮಾಡಿದ್ದಾರೆ. ಎಲ್ಲರನ್ನು ಮರುಳು ಮಾಡುವಂಥ ಒಂದು ಪ್ರಯತ್ನ ಈ ಬಜೆಟ್ ಮುಖಾಂತರ ನಡೆದಿದೆ. ಅದೇ ರೀತಿ ಸರ್ವಜ್ಞನ ವಚನ ಅವರು ಏನು ಹೇಳಿದ್ದಾರೆಂದರೆ,

(ಈ ಹಂತದಲ್ಲಿ ಶ್ರೀ ಚಂದ್ರಕಾಂತ ಜಿ. ಬೆಲ್ಲದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

**5.00 ಪಿಎಂ**

ಅನ್ನವನ್ನು ಇಕ್ಕುವುದು ನನ್ನಿಯನು ನುಡಿಯುವುದು ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ, ಇದರ ಮುಂದೆ ಮತ್ತೊಂದು ಮಾತನ್ನು ಸರ್ವಜ್ಞ ಹೇಳಿದ್ದಾನೆ. ವಿದ್ಯೆ ಹೇಳದ ಗುರು, ಬುದ್ಧಿ ಹೇಳದಾ ತಂದೆ, ಬಿದ್ದರೂ ಎದ್ದು ಬಂದು ನೋಡದ ತಾಯಿ ಈ ಮೂರು ಶುದ್ಧ ವೈರಿಗಳು ಸರ್ವಜ್ಞ ಎನ್ನುವ ಮಾತನ್ನು ಕೂಡ ಸರ್ವಜ್ಞರು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಇವರಿಗೆ ಬಹಳ ನೇರವಾಗಿ ಸಮೀಪವಾಗತಕ್ಕಂಥ ವಚನವೂ ಕೂಡ ಇದರಲ್ಲಿ ಬರುತ್ತೆ. ಹೊರಿಸಿಕೊಂಡ ಹೋದ ನಾಯಿ ಮೊಲನೇನ ಹಿಡಿಯಬಲ್ಲದು, ಇಲ್ಲಿ ಬಸವಣ್ಣನವರು ಹೇಳುತ್ತಾರೆ, ಹೊರಸಿಕೊಂಡು ಹೋದ ನಾಯಿ ಮೊಲನೇನ ಹಿಡಿಯಬಲ್ಲದು, ಹಿರಿಯರ ವೀರ ಇಲ್ಲದ ಸಂಭ್ರಮ ಹೇಳುವುದೇ ನಾಚಿಕೆ, ಆನು ಭಕ್ತನೆಂಬೆನೆ ಕೂಡಲ ಸಂಗಮದೇವ ಎಂದು ಹೇಳುತ್ತಾರೆ. ಹೊರಿಸಿಕೊಂಡು ಹೋದ ನಾಯಿ ಮೊಲವನ್ನು ಹಿಡಿಯಲು ಸಾಧ್ಯವಿದೆಯೇ? ಹಿರಿಯ ವೀರ ಏನು ಸೊಬಗು ಹೇಳಿ ಏನಾಗಬೇಕಾಗಿದೆ? ಸಾಕು ಮುಗಿಯಿತು, ಬಹಳ ಹೇಳಿದರೆ ಆಗುವುದಿಲ್ಲ. ಬಹುಶಃ ಇವತ್ತಿನ ಈ ಬಜೆಟ್‌ನ ಪರಿಣಾಮವನ್ನು ನೋಡಿದರೆ, ನಾನು ಆಗಲೇ ಹೇಳಿದೆ, ನಮ್ಮನೆಲ್ಲಾ ಪತ್ರಿಕೆಯವರು ಬಹಳ ಹೊಗಳಿದ್ದಾರೆ ಎಂದು ತಾವು ಹೇಳಿದ್ದಿರಿ. ಇವತ್ತಿನ ದಿವಸ ಇದರಲ್ಲೇನು ಇವರು ಪ್ರಸ್ತಾಪ ಮಾಡಿದ್ದಾರೆ ಇವೆಲ್ಲವನ್ನೂ ಸಾಲವನ್ನು ಹುಟ್ಟಿಸಿ ಶುದ್ಧಿಮಾಡುವವರಂತೆ. ಸಾಲ ಹುಟ್ಟಿಸುವುದು, ಅದ್ಯಾವುದೋ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತವೆ)

ತೆರಿಗೆಯ ರೈತನ ಉತ್ಪನ್ನ ಬರುತ್ತದಂತೆ ಅದು ಯಾವುದು? ಏನು? ಎಲ್ಲಿಂದ ಬರುತ್ತದೆ? ಅದರ ಬಗ್ಗೆ ಏನೂ ಒಂದು ಹೇಳಿಕೆ ಇಲ್ಲ. ಸುಮ್ಮನೆ ಏನೋ ಒಂದನ್ನು ಹೇಳಿಬಿಡುವುದು. ಬಹುಶಃ ನನಗನ್ನಿಸುತ್ತದೆ ಈ ರೀತಿಯಾಗಿದ್ದರೆ ಇದನ್ನು ಉಳಿತಾಯ ಬಜೆಟ್ ಮಾಡಿ ತೋರಿಸಬಹುದಾಗಿತ್ತು ಅದೇನೋ 153 ಕೋಟಿ ರೂ. ಇದರಲ್ಲಿ ಕೊರತೆ ಬಜೆಟ್‌ನ್ನು ತೋರಿಸಿದ್ದೀರಿ. ಬಹುಶಃ ಈ ಬಜೆಟ್‌ನಲ್ಲಿ ಇನ್ನೊಂದು ಸ್ವಲ್ಪ ಇರಲಿ, ಬಹಳ ಅತೀ ಬೇಡ ಎಂದು ಬಿಟ್ಟರೆಂದು ಕಾಣುತ್ತದೆ. ಅದನ್ನು ಬಿಟ್ಟರೆ ಇದು ಕೊರತೆ ಬಜೆಟ್ ಅಲ್ಲ, ಉಳಿತಾಯದ ಬಜೆಟ್ ಎಂದು ಮಾಡಬಹುದಿತ್ತು. ಆ ರೀತಿಯಾಗಿ ಇವತ್ತು ಈ ಬಜೆಟ್‌ನಲ್ಲಿ ಹೇಳಿಕೊಂಡು ಹೋಗಿದ್ದಾರೆ. ನಾನು ಮಂತ್ರಿಯಾಗಿದ್ದಾಗ ಒಂದು ಸೊಸೈಟಿಗೆ ಹೋಗಿದ್ದೆ. ಆ ಸೊಸೈಟಿಯ ಕಾರ್ಯದರ್ಶಿ ಅಲ್ಲಿ ಲಾಭ ಮಾಡಿ ತೋರಿಸಿದ್ದ. ಏನೇನು ಲಾಭ ಎಂದು ನೋಡಿದರೆ, ಬರತಕ್ಕಂಥ ಅಸಲು ಬಡ್ಡಿಯಲ್ಲವನ್ನು ಹಿಡಿದು ಲಾಭ ಮಾಡಿ ತೋರಿಸಿದ್ದ. ಇಲ್ಲಿಯೂ ಅದೇ ರೀತಿ ನಡೆದಿದೆ. 152 ಕೋಟಿ ರೂಯೆಂದು ಹೇಳಿದ್ದಾರೆ. ಹೋದ ಸಲ 150 ಎಂದೇನೋ ಹೇಳಿದ್ದರು, ಆದರೆ 450 ಕೋಟಿ ರೂ ಕೊರತೆಯಾಗಿದೆ. ಇನ್ನೂ ಅವರ ಲೆಕ್ಕದಲ್ಲಿ ಕೊರತೆ ಹೆಚ್ಚು ಇದೆ. ಈ ದೃಷ್ಟಿಯಿಂದ ನೇರವಾಗಿ ಈ ಬಜೆಟ್ ಸರಿಯಾದ ಕಲ್ಪನೆ ಇಲ್ಲದೇ ಮಾಡಿದ್ದಾರೆ. ಮತ್ತು ಇದನ್ನು ಇವರು ಪೂರ್ಣಪ್ರಮಾಣದ ಬಜೆಟ್ ಎಂದು ಹೇಳುತ್ತಾರೆ. ಇದು ಪೂರ್ಣಪ್ರಮಾಣದ ಬಜೆಟ್ ಎಂದು ಹೇಗೆ ಆಗುತ್ತದೆ? ಆಗುವುದಿಲ್ಲ. ಸುಮ್ಮನೆ ಒಂದು ಹೇಳಿಕೆಗೆ ಬರೆದು ಹೀಗೆ ಮಾಡಿ ಕೊಟ್ಟಿದ್ದಾರೆ. ಇದು ಪೂರ್ಣಪ್ರಮಾಣದ ಬಜೆಟ್ ಎಂದು ಹೇಗಾಗುತ್ತದೆಂದು ಹಿರಿಯರಾದ ತಾವೇ ಹೇಳಿ? ಅಂದರೆ ನಾವು ಹೋದ ಮೇಲೆ ಯಾರು ಬರುತ್ತಾರೆ ಅವರು ಟ್ಯಾಕ್ಸ್‌ನ್ನಾದರೂ ಹಾಕಲಿ ಏನಾದರು ಮಾಡಿ ಹಾಳಾಗಿಹೋಗಲಿ ಎಂದು ಮಾಡುವುದೇ ಇದು? ತಾವೇ ಹಣಕಾಸು ಸಚಿವರಾಗಿದ್ದವರು ಪ್ರಾಮಾಣಿಕವಾಗಿ ಹೇಳಿ? ಹಣಕಾಸು ಸಚಿವರಾಗಿದ್ದಂಥ ತಾವು ಇದು ಪೂರ್ಣಪ್ರಮಾಣದ ಬಜೆಟ್ಟಾ? ಇದನ್ನು ನೀವು ಒಪ್ಪುತ್ತೀರಾ? ಜನರಿಗೇಕೆ ಮೋಸ ಮಾಡುತ್ತೀರಿ? ಚುನಾವಣೆ ಬಂದಿದೆ ಎಂದು ಏನೇನೋ ಹೇಳಿ. ರೈತರಿಗೆ 600 ಕೋಟಿ ರೂ, ಇವರಿಗೊಂದು 20 ಕೋಟಿ ರೂ ಏನೇನೋ ಅದು, ಏನೇನೋ ಮಾಡಿಕೊಂಡು ಅದರಲ್ಲಿ ಮತ್ತೆ ಹೊಸ ಹೊಸ ನಿಗಮಗಳನ್ನು ಸ್ಥಾಪನೆ ಮಾಡಲು ಹೊರಟಿದ್ದಾರೆ. ಬಹುಶಃ ನನಗನ್ನಿಸುತ್ತದೆ ಇದಕ್ಕೆ ಮತ್ತೆ ನಾಲ್ಕೈದು ಎಂಎಲ್‌ಎ ಗಳನ್ನು ಅಧ್ಯಕ್ಷರನ್ನು ಮಾಡುತ್ತೀರೆಂದು ಕಾಣುತ್ತದೆ. ಯಾರನ್ನಾದರೂ ಈಗ ಹುಡುಕಿ ಮಾಡಿ. ಯಾವ ದೇಶ, ರಾಜ್ಯ ಹಾಳಾದರೇನು, ತಿನ್ನಲು ಕೂಳು ಇಲ್ಲದಿದ್ದರೇನು, ಕುಡಿಯಲು ನೀರು ಇಲ್ಲದಿದ್ದರೇನು, ನಿಮಗೆ ಪಗಾರ ಕೊಡಲು ರೊಕ್ಕ ಇಲ್ಲದಿದ್ದರೇನು, ಸುಮ್ಮಸುಮ್ಮನೆ ಬಿಎಸ್. ಪಾಟೀಲರು ನಿವೃತ್ತಿಯಾದಮೇಲೆ ತೆಗೆದುಕೊಂಡು ಹೋಗಿ, ದೆಹಲಿಯಲ್ಲೂ ರಾಜ್ಯದ ವಿಶೇಷ ಪ್ರತಿನಿಧಿ ಮಾಡಿದ್ದಾರೆ.

ಮಾನ್ಯ ಸದಸ್ಯರೊಬ್ಬರು : ಅಕ್ಷರ ದಾಸೋಹಕ್ಕೆ ಮಾಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :– ಅಲ್ಲ, ಅಕ್ಷರ ದಾಸೋಹಕ್ಕೆ ರೇವಣಸಿದ್ದಯ್ಯನವರನ್ನು ಹಾಕಿದ್ದಾರೆ. ದೇವೇಗೌಡರ ಚುನಾವಣೆಯೊಳಗೆ ಆ ಮನುಷ್ಯ ಪ್ರಚಾರಕ್ಕೆ ಬಂದುಬಿಟ್ಟ. ಕರೆದುಕೊಂಡು ಬಂದು ಅವರನ್ನು ಅಕ್ಷರ ದಾಸೋಹಕ್ಕೆ ಅಧ್ಯಕ್ಷರನ್ನಾಗಿ ಮಾಡಿದರು. ಬಿ.ಎಸ್. ಪಾಟೀಲರು ನಿವೃತ್ತಿಯಾದಮೇಲೆ ದೆಹಲಿಯಲ್ಲಿ ವಿಶೇಷ ಪ್ರತಿನಿಧಿಯಾಗಿ ನೇಮಕ ಮಾಡಿದ್ದಾರೆ. ಅವರು ಈಗ ಏನು ಮಾಡಬೇಕಿತ್ತು? ಡಿಸಾಲ್ವ್ ಆಗಿದೆ, ಅಲ್ಲೇನು ಕೆಲಸವಿತ್ತು ಅವರದು? ಹೊಸದಾಗಿ ಒಂದು

ಪೈಸೆ ಹಣ ಯಾವುದಾದರೂ ಬಿಡುಗಡೆ ಮಾಡಲು ಅವರಿಗೆ ಸಾಧ್ಯವಿಲ್ಲ. ಸುಮ್ಮನೆ ಏನೋ ಒಂದನ್ನು ಹೇಳಬೇಡಿ. ಅವರು ಒಬ್ಬರು ಒಳ್ಳೆಯ ಅಧಿಕಾರಿಯಾಗಿ ನಿವೃತ್ತಿಯಾಗಿದ್ದರೆ, ನಾಳೆ ಅವರ ಹೆಸರು ಕೆಡಿಸುವ ವ್ಯವಸ್ಥೆ ಅನಂತರ ಸರ್ಕಾರದ ಬೊಕ್ಕಸಕ್ಕೆ ಹೊರೆ. ಅವರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನವನ್ನು ಕೊಟ್ಟಿದ್ದೀರಿ.

**ಶ್ರೀ ಕೆ.ಹೆಚ್. ರಂಗನಾಥ** :- ಇರುವುದೇ ಹತ್ತು ಹನ್ನೆರಡು ಜನ ಸದಸ್ಯರು, ಏಕೆ ಕೂಗುತ್ತೀರಿ?

**ಶ್ರೀ ಎಸ್.ಎಸ್. ಪಾಟೀಲ್** :- ಇದು ನಮ್ಮ ಹಣೆಯ ಬರಹ. ಹಾಗಿದ್ದರೆ ಮುಂದುವರೆಸಿಬಿಡಿ. ಅವರೇ ಹಿರಿಯರಾದಂಥ ಸಚಿವರು, ಆ ಜಾಗದಲ್ಲಿ ಕುಳಿತಂಥವರು. ನನ್ನ ಪ್ರಕಾರ ಈಗ ಇರುವ ಮಂತ್ರಿ ಮಂಡಲದಲ್ಲಿ ನೀವಿಬ್ಬರು ಸ್ವಲ್ಪ ಒಳ್ಳೆಯವರೆಂದು ಕಾಣುತ್ತೀರಿ. ಕೆಲವರ ಪೈಕಿ ನೀವೊಂದಿಬ್ಬರು ಒಳ್ಳೆಯವರು.

**ಶ್ರೀ ಕೆ.ಹೆಚ್. ರಂಗನಾಥ್** :- ಮಾನ್ಯ ಅಧ್ಯಕ್ಷರೆ, ಇವರದ್ದೇ ಇದು ಕತೆ. ಇವರೇ ಇದನ್ನು ಬಿಟ್ಟುಹೋಗಿದ್ದು ಡಿಫಿಸಿಂಟ್ ಫೈನಾನ್ಸ್ ಅದು ಇದು ಎಲ್ಲಾ ಮಾಡಿರುವುದೇ ಇವರು. ಇವರು ಮಾಡಿರುವ ಕಸವನ್ನು ತೆಗೆಯುವುದೇ ನಮಗೆ ಆಗಿದೆ, ಕಸವನ್ನು ಹೊತ್ತು ಹಾಕುವುದೇ ಆಗಿದೆ. ಮಾನ್ಯ ಬೆಲ್ಲದ್‌ರವರಿಗೆ ಇದು ಗೊತ್ತಿದೆ. ಅವರೂ ವ್ಯಾಪಾರಸ್ಥರು.

**ಶ್ರೀ ಎಸ್.ಎಸ್. ಪಾಟೀಲ್** :- ತಾವು ಯಾರ್‍ಯಾರನ್ನು ಏನೇನು ಮಾಡಿದ್ದೀರಿ, ಪಾಪ ಹಿಂದೆ ಮುಖ್ಯಕಾರ್ಯದರ್ಶಿಯಾಗಿದ್ದವರಿಗೆ ಯಾವುದೋ ಒಂದು ಖಾತೆಯನ್ನು ಎರಡು ತಿಂಗಳಿನಿಂದ ಕೊಟ್ಟು ಸುಮ್ಮನೆ ಕೂರಿಸಿದ್ದೀರಿ. ಮುಂದೆ ಏನು ಮಾಡುತ್ತೀರೋ ದೇವರಿಗೇ ಗೊತ್ತು. ಅವರ ಬಗ್ಗೆ ಹೋದ ಸಲವೇ ಹೇಳಬೇಕೆಂದಿದ್ದೆ ಆದರೆ ಇವತ್ತು ಹೇಳುತ್ತೇನೆ. ಎಂಥ ಕೆಟ್ಟ ಹೆಸರನ್ನು ಹೊರೆಸಿ ಅವರನ್ನು ಹೊರಕ್ಕೆ ಹಾಕಿದ್ದಿರಿ. ಬಹಳ ಭ್ರಷ್ಟ ಹಾಗೆ, ಹೀಗೆ ಎಂದು, ಪಾಪ ಅವರು ಬಹಳ ಒಳ್ಳೆಯ ಅಧಿಕಾರಿ, ನಮ್ಮಲ್ಲಿ ಅವರು ಡಿಸಿ ಯಾಗಿ ಕೆಲಸ ಮಾಡಿದವರು. ಅವರ ಬಗ್ಗೆ ನನಗೆ ಒಳ್ಳೆಯ ಅಭಿಮಾನವಿದೆ. ನಾನು ಇವತ್ತೂ ಕೂಡ ಅವರ ಬಗ್ಗೆ ಟೀಕೆ ಮಾಡುವುದಿಲ್ಲ. ಅಂಥ ಮುಖ್ಯಕಾರ್ಯದರ್ಶಿಯವರನ್ನು ತೆಗೆದುಕೊಂಡು ಹೋಗಿ ಯಾವುದೋ ಒಂದಕ್ಕೆ ಅಧ್ಯಕ್ಷರನ್ನಾಗಿ ಮಾಡಿ ಕೂರಿಸಿದ್ದರು. ನಾನೇ ಅವರನ್ನು ಹೋಗಿ ಭೇಟಿ ಮಾಡಿದ್ದೆ. ಇದು ನೀವು ಮಾಡತಕ್ಕ ಕೆಲಸ. ಇವತ್ತು ಅವರೇ ಬಹಳ ಒಳ್ಳೆಯವರೆಂದು ಕಂಡು ಅದೇ ಸರ್ಕಾರದಲ್ಲಿ ಅದೇ ಕಾಂಗ್ರೆಸ್‌ನವರು ಅವರನ್ನು ಒಬ್ಬರು ಮಂತ್ರಿಯಾಗಿ ಮಾಡಿದ್ದೀರಿ. ನೀವು ಮಾಡುವುದು ಯಾವುದು ಖರೆ? ಇದು ಇವರು ಮಾಡತಕ್ಕ ಕೆಲಸ. ಈ ದೃಷ್ಟಿಯಿಂದ ಹೇಳುತ್ತಿದ್ದೇನೆ, ಇವತ್ತು ಬಿ.ಎಸ್. ಪಾಟೀಲರು ದೆಹಲಿಯಲ್ಲಿ ಎರಡು ತಿಂಗಳಿನಲ್ಲಿ ಏನೂ ಮಾಡಲು ಅವರ ಕೈಯಿಂದ ಸಾಧ್ಯವಿಲ್ಲ. ಇವತ್ತು ಬೇಕಾಗಿಯೇ ಅವರನ್ನು ಹಾಗೆ ಮಾಡಿಕೂರಿಸಿ ಅವರ ಹೆಸರನ್ನು ಕೆಡಿಸುವ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ಅನಂತರ ಇದು ರಾಜ್ಯದ ಬೊಕ್ಕಸಕ್ಕೆ ಹೊರೆ. ಇದು ಇವರು ಮಾಡತಕ್ಕ ಕೆಲಸ. ಇನ್ನೂ ಹಲವಾರು ಇದೆ. ಇದರಲ್ಲಿ ನೀವು ಯಾವ ಯೋಜನೆಗಳನ್ನೂ ಮಾಡಿಲ್ಲ. ಸುಮ್ಮನೆ ಹೇಳಿಕೊಂಡು ಹೋಗುವುದು. ಇದನ್ನೆಲ್ಲಾ ಓದಿಬಿಟ್ಟರೆ, ಒಂದೊಂದನ್ನೇ ಓದಲು ಸಮಯ ಕೊಟ್ಟರೆ ಮೂರು ದಿವಸವಾಗುತ್ತದೆ. ಮಧ್ಯದಲ್ಲಿ ತಾವು ಬೆಲ್ಲನ್ನು ಹೊಡೆಯಬಾರದು. ನಾನು ಒಂದೊಂದಾಗಿ ಓದುತ್ತೇನೆ. ಇಲ್ಲದಿದ್ದರೆ ಅಲ್ಲಲ್ಲಿ ಹೇಳಿ ಮುಗಿಸಬೇಕಾಗುತ್ತದೆ. ನಿಜವಾಗಿಯೂ ಇವತ್ತು ಒಂದೊಂದಾಗಿ ನಾವು ಹೇಳಲಿಕ್ಕೆ

ಹೊರಟರೆ ಬಹುಶಃ ಒಂದು ವಾರವಾದರೂ ಇದು ಮುಗಿಯುವುದಿಲ್ಲ, ಇದು ಪೂರ್ಣಪ್ರಮಾಣದ ಬಜೆಟ್ ಎಂದು ಹೇಗೆ ಹೇಳುತ್ತೀರಿ? ಇದು ನನ್ನ ಮೊದಲನೆಯ ಪ್ರಶ್ನೆ? ಇದು ಪೂರ್ಣಪ್ರಮಾಣದ ಬಜೆಟ್ ಆಗಲು ಸಾಧ್ಯವಿದೆಯೋ? ಸುಮ್ಮನೆ ಲೇಖಾನುದಾನವೆಂದು ಮಾಡಿ ತೆಗೆದುಕೊಂಡುಬಿಡಬೇಕಾಗಿತ್ತು. ಡಿಸಾಲ್ವ್ ಮಾಡಲು ಪ್ರಾರಂಭ ಮಾಡಿದ್ದರೆ ಡಿಸಾಲ್ವ್ ಮಾಡಿದ್ದರೆ ಮನೆಗೆ ಹೋಗುತ್ತಿದ್ದೆವು. ಮುಂದೆ ಏನು ಆಗುತ್ತಿತ್ತೋ ಅದು ಆಗುತ್ತಿತ್ತು. ಅದನ್ನು ಬಿಟ್ಟು ಒಂದೆರಡು ಹಾಳೆ ಬರೆದು, ಬರೇ ಓದಿ, ಒಂದೆರಡು ವಚನ ಓದಿ, ಅದ್ಯಾವುದೋ ಎಷ್ಟು ಮಂದಿ ಒಪ್ಪಿಸಿದ್ದಾರೋ ನನಗೂ ಬರುವುದಿಲ್ಲ. ಇಲ್ಲದಿದ್ದರೆ ಅದಕ್ಕೂ ಒಂದು ತೋಡಿ ತರುತ್ತಿದ್ದೆ ಹಮ್ ಪರ್ವರಿಶೇ ಖಾತೆ ಓತನ್ ಕರ್ತೇ ರಹೇ ಹೈ ಎಂದು ಉರ್ದುವಿನ ಒಂದು ಉತ್ತಮವಾದ ಮಾತಿದೆ. ಅದನ್ನೇನೋ ಹೇಳಿದ್ದೀರಿ. ಆ ರೀತಿ ಒಂದೊಂದಾಗಿ ಹೇಳಿ ಜನರನ್ನು ಮರಳು ಮಾಡುವ ವ್ಯವಸ್ಥೆ ಮಾಡಿದ್ದೀರಿ. ಇದನ್ನು ನಿಮ್ಮ ಕಡೆಯಿಂದ ನೀಗಿಸಲು ಸಾಧ್ಯವಿಲ್ಲ, ಕೆಲವು ಪತ್ರಿಕೆಯವರು ಬರೆದಿದ್ದಾರೆ. ಎಲ್ಲಾ ಎಡಿಟೋರಿಯಲ್‌ನವರು ಬಹಳ ಛಲೋ ಬರೆದಿದ್ದಾರೆ, ಎಲ್ಲಾ ಬರೆದಿದ್ದಾರೆ, ಇದೇ ಕೃಷ್ಣರವರು ಈ ರಾಜ್ಯದ ದುರ್ದೈವದಿಂದ ಮುಖ್ಯಮಂತ್ರಿಯಾದರೆ ಈ ಬಜೆಟ್‌ನ ಹಕ್ಕೀಕತ್‌ನ ಚಿಂತೆ ಅವರಿಗೆ ಶುರುವಾಗುತ್ತದೆ. ಇದರ ಬಗ್ಗೆ ವಿಮರ್ಶಕರು, ಆರ್ಥಿಕ ತಜ್ಞರು ಎಲ್ಲರೂ ಹೇಳಿದ್ದಾರೆ, ನೋಡಲು ಎಲ್ಲಾ ಚೆನ್ನಾಗಿದೆ, ನೀವು ಯಾವ್ಯಾವುದನ್ನು ಹೇಳಿದ್ದೀರಿ, ಒಂದೊಂದೇ ಹೇಳಿಬಿಡುತ್ತೇನೆ. ಪರಿಶಿಷ್ಟ ವರ್ಗಕ್ಕೆ ಸುರಕ್ಷತೆ ಒದಗಿಸಬೇಕಾಗಿ ಗ್ರಾಮೀಣ ಮಹಿಳೆಯರನ್ನು ಗೃಹ ಬಂಧನದಿಂದ ಹೊರಕ್ಕೆ ತರಲು ಅವರಿಗೆ ಶಿಕ್ಷಣ ಪೌಷ್ಟಿಕ ಆಹಾರ ಎಂದು ಇಲ್ಲಿ ಹೇಳುತ್ತಾರೆ. ಬಡತನ ಮತ್ತು ವಂಚಿತರನ್ನು ರಕ್ಷಿಸುವ ಆಶಾಭಾವನೆ ನನಗೆ ಇದೆ. ಎಂದು ಹೇಳಿದ್ದೀರಿ. ಹತ್ತಾರ ಬೆಳವಣಿಗೆಯನ್ನು ನಿರೀಕ್ಷೆ ಮಾಡುತ್ತಿದ್ದೀರಿ. ನೀರಾವರಿಯನ್ನು ರೈತರ ಅಂಗಳಕ್ಕೆ ತೆಗೆದುಕೊಂಡು ಹೋಗುವುದು ನನ್ನ ನಿರಂತರ ಯೋಜನೆಯಾಗಿದೆ. ಬಜೆಟ್‌ನಲ್ಲಿ ಏನು ಮಾಡಿದ್ದೀರಿ? ಇಲ್ಲೇ ತೋರಿಸುತ್ತೇನೆ. ನೀರಾವರಿಗೆ ಹಣವನ್ನು ಕಡಿಮೆ ಮಾಡಿದ್ದೀರಿ. ಇನ್ನು ರೈತರ ಅಂಗಳಕ್ಕೆ ಹೋಗುತ್ತೀರಾ? ನೀರಾವರಿಯನ್ನು ರೈತರ ಅಂಗಳಕ್ಕೆ ತೆಗೆದುಕೊಂಡು ಹೋಗುತ್ತಾರಂತೆ, ಎಲ್ಲಾ ರೈತರಿಗೆ ಕೊಡುತ್ತಾರಂತೆ, ಅಲ್ಲಿ ಏನು ಮಾಡಿದ್ದಾರೆಂದರೆ 600 ಕೋಟಿ ರೂ ಕೆಇಬಿ ಬಿಲ್ಲನ್ನು ಬಿಟ್ಟಂತೆ ಮಾಡಿದ್ದಾರೆ. ಅದು ಯಾವ ಬಿಲ್ಲು, ತೆಗೆಸಿ ನೋಡಿ, ಬಡ್ಡಿಗೆ ಬಡ್ಡಿಯನ್ನು ಹಾಕಿ ಕೂಡಿ ಇಟ್ಟಿದ್ದಾರೆ. ಅವರು. ರೈತರಿಂದ ಅಸಲನ್ನು ಈಗಾಗಲೇ ವಸೂಲಿ ಮಾಡಿದ್ದಾರೆ. ಅದರ ಲೆಕ್ಕವನ್ನು ತರಿಸಿಬಿಡಿ. ಬಡ್ಡಿಗೆ ಬಡ್ಡಿ ಬಡ್ಡಿಯ ಮೇಲೆ ಬಡ್ಡಿಯನ್ನು ಅವರು ಹಾಕುತ್ತಾರೆ, 18 ಪರ್‌ಸೆಂಟ್ ಬಡ್ಡಿ ಅದಕ್ಕೆ, ಆ ರೀತಿ ಬಡ್ಡಿಯ ಮೇಲೆ ಬಡ್ಡಿ ಸೇರಿಕೊಂಡು 600 ಕೋಟಿ ರೂ ಆಗಿದೆ. ಅದು ವಸೂಲಾಗದಂಥ ಹಣ. ಅದು ವಸೂಲಿಯೇ ಆಗುವುದಿಲ್ಲ. ಅಂದರೆ ಮುಳುಗುವಂಥದ್ದು. ಇವರು ರೈತರ ಹೊಲ ಮನೆ ಜಪ್ತಿ ಮಾಡಿದರೂ ಅದು ಬರುವುದಿಲ್ಲ. ಆ 600 ಕೋಟಿ ರೂ ಹಣವನ್ನು ಬಿಡುತ್ತೇವೆಂದು ಹೇಳಿದ್ದಾರೆ. ಬಿಡುತ್ತೇವೆಂದು ಹೇಳಿ ಇಲ್ಲಿ ಬಜೆಟ್‌ನಲ್ಲಿ ಏನು ಮಾಡಿದ್ದಾರೆಂದರೆ, ಇಲ್ಲಿ ನೋಡುತ್ತೇನೆ. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ನೀರಾವರಿಗೆ ಹೋದ ವರ್ಷದ ಬಜೆಟ್‌ನಲ್ಲಿ ಪ್ರತಿಶತ ಶೇಕಡ 31%ರಷ್ಟು ಹಣವನ್ನು ಮೀಸಲಿಡಲಾಗಿತ್ತು. ಆದರೆ ಈ ಬಾರಿ ಕೇವಲ ಶೇಕಡ 24.22% ನಷ್ಟ ಹಣವನ್ನು ಮಾತ್ರ ಮೀಸಲಿಟ್ಟಿದ್ದೀರಿ. ಇದು ನೀರಾವರಿಗೆ ನಮ್ಮ ಸರ್ಕಾರ ಕೊಡುತ್ತಿರುವ ಆದ್ಯತೆಯಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ನೀರಾವರಿಗೆ ಕಡಿಮೆ ಹಣ ಒದಗಿಸಲಾಗಿದೆ. ಒಂದು ಕಡೆ ರೈತರಿಗೆ 600 ಕೋಟಿ ರೂಗಳನ್ನು [illegible]

ನೀರಾವರಿಗೆ ಅಷ್ಟು ಹಣ ಕೊಡುವುದನ್ನು ಕಡಿಮೆ ಮಾಡಿದ್ದೀರಿ. ಯಾರಾದರೂ ಸರಿಯೇ ಪ್ರತಿ ವರ್ಷ ನೀರಾವರಿಗೆ ಕೊಡುವ ಹಣವನ್ನು ಹೆಚ್ಚು ಮಾಡುತ್ತಾ ಹೋಗುತ್ತಾರೆ. ಆದರೆ ದುರ್ದೈವದಿಂದ ನೀವು ಇಲ್ಲಿ ನೀರಾವರಿಗೆ ಕೊಡುವ ಹಣವನ್ನು ಕಡಿಮೆ ಮಾಡಿದ್ದೀರಿ. ಇದು ನಿಮ್ಮ ಬಜೆಟ್! ಹೀಗಿರುವಾಗ ನೀವು ರೈತರಿಗೆ ನೀರಾವರಿಯನ್ನು ಹೇಗೆ ಒದಗಿಸಲು ಸಾಧ್ಯವಾಗುತ್ತದೆ? ಇದು ನಿಮ್ಮಿಂದ ಸಾಧ್ಯವೇ ಇಲ್ಲ ಬಿಡಿ. ಮೊದಲೇ ನಿಮ್ಮಲ್ಲಿ ಹಣದ ಕೊರತೆ ಇದೆ. ಸುಮಾರು 3–4 ಸಾವಿರ ಕೋಟಿ ರೂಪಾಯಿಗಳು ನೀರಾವರಿಗೆ ಕೊರತೆಯಾಗುತ್ತದೆ. ಇದು ಹುಡುಗಾಟಿಕೆ ಏನಲ್ಲ. ನೀವು ಸುಮ್ಮನೆ ಹೇಳಿಕೊಳ್ಳುತ್ತಿದ್ದೀರಿ. ನೌಕರರ ಪಗಾರ ಕೊಡುವುದಕ್ಕು ಸಹ ನಿಮ್ಮ ಬಳಿ ಹಣ ಇಲ್ಲ. ಇದು ಕಣ್ಣಿಗೇ ಕಾಣುತ್ತದೆ. ನೀವು ಹೇಳುವುದಾಗಿದ್ದರೆ ಎಲ್ಲವನ್ನೂ ವಿವರವಾಗಿ ಹೇಳಬೇಕಾಗಿತ್ತು. ಸುಮ್ಮ ಸುಮ್ಮನೆ ಏನೇನೋ ಹೇಳಿ, ಬಜೆಟ್‌ನಲ್ಲಿ ಏನೋ ಒಂದು ತೋರಿಸಿದ್ದೀರಿ. ಹೋದ ವರ್ಷ ನೀವು ಟ್ಯಾಕ್ಸ್–ಪಾಕ್ಸ್ ಎಲ್ಲವನ್ನೂ ಕೂಡ ಹಾಕಿದ್ದೀರಿ. ಈ ವರ್ಷ ನೀವು ಏನು ಮಾಡಿದ್ದೀರಿ? ನಿಜವಾಗಿಯೂ ಹೇಳುವುದಾದರೆ, ಇವರು ಮಾಡಿದಂತಹ ಕೆಲಸದಿಂದ ಈ ಸದನಕ್ಕೂ ಕೂಡ ಮೋಸ ಮಾಡಿದಂತಾಗಿದೆ. ಕಳೆದ ವರ್ಷದ ಬಜೆಟ್ ಆದ ಮೇಲೆ, ಸದನ ಕರೆದು ಈ ವರ್ಷದ ಬಜೆಟ್ ಅನ್ನು ಮಂಡಿಸುವುದಕ್ಕಿಂತ ಪೂರ್ವದಲ್ಲಿ ಒಂದೆರಡು ವಾರಗಳ ಹಿಂದೆ ಸುಮಾರು 900–1000 ಕೋಟಿ ರೂಪಾಯಿಗಳಾಗುವಷ್ಟು ಟ್ಯಾಕ್ಸ್ ಅನ್ನು ಹಾಕಿದ್ದೀರಿ. ಆನಂತರ ಅದರಲ್ಲಿ ಸುಮಾರು 300 ಕೋಟಿ ರೂಪಾಯಿಗಳಷ್ಟು ರಿಯಾಯಿತಿ ಕೊಟ್ಟಂತೆ ಮಾಡಿ, ನಾವು ಎಲ್ಲವನ್ನೂ ಕಡಿಮೆ ಮಾಡಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಅಲ್ಲದೆ ಈ ವರ್ಷದ ಬಜೆಟ್‌ನಲ್ಲಿ ನಾವು ಯಾವ ಹೊಸ ತೆರಿಗೆಯನ್ನು ಸಹ ಹಾಕಿಲ್ಲವೆಂದು ತೋರಿಸಿಕೊಳ್ಳುತ್ತಿದ್ದೀರಿ. ಇದು ಮೋಸವಲ್ಲವೇ? ಇದು ಮೋಸ, ಹೌದೋ? ಅಲ್ಲವೋ ಎಂಬುದನ್ನು ನೀವೇ ಹೇಳಿ. ಸದನಕ್ಕೆ ನೀವು ವಂಚನೆ ಮಾಡುತ್ತಿದ್ದೀರಿ. ಸದನ ಕರೆದು ಬಜೆಟ್ ಮಂಡಿಸುವ ಮುಂಚೆಯೇ ಅಷ್ಟೊಂದು ಟ್ಯಾಕ್ಸ್‌ಗಳನ್ನು ನೀವ್ಯಾಕೆ ಹಾಕಿದಿರಿ? ಸದನದಲ್ಲೇ, ಈ ಬಜೆಟ್‌ನಲ್ಲೇ ಆ ತೆರಿಗೆ ಪ್ರಸ್ತಾವಗಳನ್ನೂ ಸೇರಿಸಿ ಇಲ್ಲಿ ಮಂಡಿಸಬೇಕಾಗಿತ್ತು. ನೀವು ಆ ರೀತಿ ಮಾಡಲಿಲ್ಲ. ಈಗಾಗಲೇ ಚುನಾವಣೆ ಬರುತ್ತಿದೆ. ನೀವು 12ಕ್ಕೋ ಅಥವಾ 13ಕ್ಕೋ ಸದನವನ್ನು ವಿಸರ್ಜಿಸಲು ಹೊರಟಿದ್ದೀರಿ. ಮುಂದೆ ಚುನಾವಣೆ ಬರುವ ಟೈಮ್‌ಗೆ ಮುನ್ನ ಮೊದಲು ಏರಿಸಿ, ನಂತರ ಏನೂ ತೆರಿಗೆ ಹಾಕಿಲ್ಲವೆಂದು ಹೇಳುತ್ತಿದ್ದೀರಿ. ಜನರೇನು ಹುಚ್ಚರು ಎಂದು ತಿಳಿದುಕೊಂಡಿದ್ದೀರಾ? ಜನರಿಗೆ ಇವೆಲ್ಲಾ ತಿಳಿಯುವುದಿಲ್ಲವೆಂದು ಭಾವಿಸಿದ್ದೀರಾ? ಯಾರೂ ಏನೂ ಓದುವುದಿಲ್ಲವೆಂದು ನೀವು ತಿಳಿದುಕೊಂಡಿದ್ದೀರಾ? ಜನರನ್ನು ಮೋಸ ಮಾಡುವಂತಹ ಎಲ್ಲಾ ತರಹದ ವ್ಯವಸ್ಥೆಯನ್ನೂ ಸಹ ನೀವು ಮಾಡಿದ್ದೀರಿ. ಅದರ ಬಗ್ಗೆ ಒಂದೊಂದಾಗಿ ನಾನು ಹೇಳುತ್ತಾ ಹೋಗುತ್ತೇನೆ. 'ಪ್ಯಾಕೇಜ್' ಇತ್ಯಾದಿ ಹೊಸ ಹೊಸ ಹೆಸರುಗಳನ್ನು ಬಜೆಟ್‌ನಲ್ಲಿ ಹೇಳಿ ಜನರಿಗೆ ಮೋಸ ಮಾಡಿದ್ದೀರಿ. ನೀವು ಕೇಂದ್ರ ಸರ್ಕಾರವನ್ನು ಈಗ ಬಯ್ಯುವುದಕ್ಕೆ ಶುರು ಮಾಡಿದ್ದೀರಿ. ಮೊದಲು ಅವರನ್ನು ಹೊಗಳುತ್ತಿದ್ದಿರಿ. ಅವರನ್ನು ಬೈದರೆ ಅವರೆಲ್ಲಿ ರಾಜ್ಯಕ್ಕೆ ಸಹಾಯ ಕೊಡುವುದನ್ನು ನಿಲ್ಲಿಸುತ್ತಾರೋ, ಅದರಿಂದ ಮೊದಲೇ ದುಡ್ಡಿಲ್ಲದಿರುವಾಗ ನಮಗೆಲ್ಲಿ ತೊಂದರೆಯಾಗುತ್ತದೋ ಎಂಬ ಕಾರಣದಿಂದ ನೀವು ಮೊದಲಿಗೆ ಅವರನ್ನು ಹೊಗಳುತ್ತಿದ್ದಿರಿ. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ಕೇಂದ್ರ ಸರ್ಕಾರವನ್ನು ಇಲ್ಲಿ ಹೊಗಳುತ್ತೇ ಇದ್ದರು. ಆದರೆ ಈಗ ಅವರನ್ನು ಬಯ್ಯಲು ಶುರು ಮಾಡಿದ್ದಾರೆ. ಏಕೆಂದರೆ, ಈಗ ಚುನಾವಣೆ ಬಂತಲ್ಲಾ! ಚುನಾವಣೆಯಲ್ಲಿ ಉಪಯೋಗಿಸಿಕೊಳ್ಳುವ

ಸಲುವಾಗಿ ಈಗ ನೀವು ಕೇಂದ್ರವನ್ನು ಬಯ್ಯಲು ಶುರು ಮಾಡಿದ್ದೀರಿ. ಇಷ್ಟು ದಿವಸಗಳ ಕಾಲ ನೀವು ಏಕೆ ಅವರನ್ನು ಬಯ್ಯಲಿಲ್ಲ? ನೀವು ಆಗಲೇ ಅವರನ್ನು ಬಯ್ಯಬೇಕಾಗಿತ್ತು. ನಮ್ಮ ಪಕ್ಷದವರು ಇವತ್ತು ಇಲ್ಲಿ ನಿಂತುಕೊಂಡು ನಿಮ್ಮನ್ನೂ ಬಯ್ಯುತ್ತವೆ, ಕೇಂದ್ರವನ್ನೂ ಬಯ್ಯುತ್ತೇವೆ. ಆಗಲೇ ಮಾನ್ಯ ಜಗದೀಶ್ ಶೆಟ್ಟರ್‌ರವರು ಇನ್‌ಶ್ಯೂರೆನ್ಸ್ ಬಗ್ಗೆ ಏನೇನೋ ಹೇಳಿದರು. ಇನ್‌ಶ್ಯೂರೆನ್ಸ್ ಬಗ್ಗೆ ಮಾತನಾಡುವಾಗ ನಾನು ಅವರಿಗೆ ಸರಿಯಾದ ಉತ್ತರವನ್ನು ಹೇಳುತ್ತೇನೆ. ಕ್ರಾಪ್ ಇನ್‌ಶ್ಯೂರೆನ್ಸ್‌ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಜವಾಬ್ದಾರರಾಗಿದ್ದಾರೆ. ಇದರಲ್ಲಿ ನೇರವಾಗಿ ಹೆಚ್ಚಿನ ಜವಾಬ್ದಾರಿ ಕೇಂದ್ರ ಸರ್ಕಾರದವರ ಮೇಲಿದೆ. ಬೆಳೆ ವಿಮೆ ವಿಚಾರದಲ್ಲಿ ರೈತರಿಗೆ ಮೋಸ ಮಾಡಲಾಗಿದೆ. ಅದರ ಬಗ್ಗೆ ಮುಂದೆ ಮಾತನಾಡುವುದಕ್ಕಿಂತ, ಈಗಲೇ ಎಲ್ಲಾ ವಿವರಗಳನ್ನೂ ಹೇಳಿಯೇ ಬಿಡುತ್ತೇನೆ. ಆನಂತರ ಉಳಿದ ವಿಚಾರಗಳ ಬಗ್ಗೆ ಹೇಳುತ್ತೇನೆ. ನಮ್ಮಲ್ಲಿ ಹೋದ ಸಲ ಪಾಪ! ಶಿರಹಟ್ಟಿ ಎಂ.ಎಲ್.ಎ. ನವರಿಗೆ ಮೋಸವಾಗಿತ್ತು. ಈ ಸಲ ಅದು ನಮ್ಮಲ್ಲಿ ಆಗಿದೆ. ನಮ್ಮ ಸುದೈವವೋ, ದುರ್ದೈವವೋ ನಮ್ಮ ಜಿಲ್ಲೆಯವರೇ ಈಗ ಅದಕ್ಕೆ ಮಂತ್ರಿಯಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಮೀಟಿಂಗ್ ಕರೆದಂತಹ ಸಂದರ್ಭದಲ್ಲಿ ನಾವು, ಅಧಿಕಾರಿಗಳಿಂದ ಮೋಸ ಆಗುತ್ತದೆ, ಪ್ರಸ್ತಾವನೆ ನೋಡಿ ಕಳುಹಿಸಿ ಎಂದು ಹೇಳಿದ್ದೆವು. ಮಾನ್ಯ ಅಧ್ಯಕ್ಷರೇ, ತಾವೂ ಆ ಜಿಲ್ಲೆಯವರೇ. ತಾವು ಅಲ್ಲೆಲ್ಲಾ ಓಡಾಡಿ ನೋಡಿದವರಾಗಿದ್ದೀರಿ. ಮುಂಡರಗಿ ತಾಲ್ಲೂಕಿನಲ್ಲಿ ಈ ವರ್ಷ ಬೆಳೆ ವಿಮೆ ಬಂದಿದೆಯೇ ಎಂಬುದನ್ನು ನೀವೇ ಹೇಳಿ. ಹುಟ್ಟಿದ ಬೆಳೆ ಎಲ್ಲಾ ಒಣಗಿ ಹೋಗಿದೆ. ನಮ್ಮ ತಾಲ್ಲೂಕಿನ ಡಂಬಳದಲ್ಲಿ ಶೇಂಗಾ ಬೆಳೆಯಲ್ಲಿ ಎಕರೆಗೆ 30 ಕೆ.ಜಿ ಉತ್ಪನ್ನ ಬಂದರೆ ಅದಕ್ಕೆ ಇನ್‌ಶ್ಯೂರೆನ್ಸ್ ಸಿಗುವುದಿಲ್ಲ. ಹೇಗೆ ಮಾಡಿದರೂ ಸಹ ಒಂದು ಎಕರೆಗೆ ಕನಿಷ್ಟ 30 ಕೆ.ಜಿ. ಉತ್ಪನ್ನ ಬಂದೇ ಬರುತ್ತದೆ. ಇದು ನೀವು ಕೊಡುವ ಇನ್‌ಶ್ಯೂರೆನ್ಸ್! ಏಕೆ ನೀವು ರೈತರಿಗೆ ಮೋಸ ಮಾಡುತ್ತೀರಿ? ರೈತರು ನಮ್ಮನ್ನು ಈಗ ಹಳ್ಳಿಯಲ್ಲಿ ಓಡಾಡಲು ಬಿಡುತ್ತಿಲ್ಲ. ರೈತರು ಸಾಲ ಮಾಡಿ ಇನ್‌ಶ್ಯೂರೆನ್ಸ್ ಕಂತಿನ ದುಡ್ಡು ತುಂಬಿದ್ದಾರೆ. ಒಂದು ಎಕರೆಗೆ 30 ಕೆ.ಜಿ., ಒಂದು ಹೆಕ್ಟೇರ್‌ಗೆ 90 ಕೆ.ಜಿ. ಉತ್ಪನ್ನ ಬಂದರೆ, ಅದು ಥ್ರೆಶೋಲ್ಡ್ ಇನ್‌ವೆಸ್ಟ್‌ಮೆಂಟ್ ಬಂದಿದೆ ಎಂಬ ಅರ್ಥವಂತೆ! ಅದರಿಂದಾಗಿ ಅಂತಹವರಿಗೆ ಇನ್‌ಶ್ಯೂರೆನ್ಸ್ ಸಿಗುವುದಿಲ್ಲವಂತೆ! ಹಾಗಾದರೆ ರೈತರೇಕೆ ಇಂತಹ ಇನ್‌ಶ್ಯೂರೆನ್ಸ್ ಅನ್ನು ಮಾಡಿಸಬೇಕು? ಇದು ಇವತ್ತು ಇವರು ಮಾಡತಕ್ಕಂಥ ಕೆಲಸವಾಗಿದೆ. ಎಲ್ಲಾ ಅಂಕಿ ಅಂಶಗಳೂ ಕೂಡ ಇಲ್ಲೇ ಇದೆ. ಇವರ ಪ್ರಕಾರ ನಮ್ಮ ಡಂಬಳ ವಿಭಾಗಕ್ಕೆ ನಮ್ಮಲ್ಲಿ ಶೇಂಗಾ ಬೆಳೆಗೆ ಈ ವರ್ಷ ಇನ್‌ಶ್ಯೂರೆನ್ಸ್ ಸಿಗುವುದಿಲ್ಲ. ಇಂತಹ ವ್ಯವಸ್ಥೆ ಇವತ್ತು ಇದೆ. ಮಾನ್ಯ ಸಚಿವರು ಎಲ್ಲವನ್ನೂ ಕೂಡ ಕುಳಿತುಕೊಂಡು ಲೆಕ್ಕ ಹಾಕಬೇಕಾಗುತ್ತದೆ. ನೀವು ಸುಮ್ಮನೆ ರೈತರನ್ನು ಮೋಸ ಮಾಡುವುದಕ್ಕೆ ಹೋಗಬೇಡಿ. ಹೋಗಲಿ, ನೀವು ವಿಮಾ ಕಂತನ್ನೇ ತುಂಬಬೇಡಿ ಎಂದಾದರೂ ನೀವು ರೈತರಿಗೆ ಹೇಳಿಬಿಡಿ. ಮಾನ್ಯ ಶೆಟ್ಟರ್‌ರವರು ಇದ್ದರೆ, ನಾನು ಅವರಿಗೂ ಸಹ ಈ ಬಗ್ಗೆ ಹೇಳುತ್ತಿದ್ದೆ. ನೀವಾದರೂ ಬೆಳೆ ವಿಮೆ ಬಗ್ಗೆ ಸ್ವಲ್ಪ ಗಮನ ಹರಿಸಿ ನೋಡಿ, ಮಾತನಾಡಿ. ಸುಮ್ಮನೆ ಹಾಗೆಯೇ ಕುಳಿತುಕೊಳ್ಳಬೇಡಿ. ಕೇಂದ್ರವನ್ನು ನೀವು ಹೊಗಳುವುದು, ರಾಜ್ಯವನ್ನು ಇವರು ಹೊಗಳುವುದು, ಹೀಗೆ ಮಾಡಿಕೊಂಡು ಕುಳಿತುಕೊಳ್ಳಬೇಡಿ. ಈ ರೀತಿಯಾಗಿ ಇಬ್ಬರು ಒಬ್ಬರಿಗೊಬ್ಬರು ಹೊಗಳಿಕೊಳ್ಳುತ್ತಾ ಹೋದರೆ ನಿಮ್ಮಿಬ್ಬರ ನಡುವೆ ರೈತ ಮುಳುಗಿ ಹೋಗುತ್ತಾನೆ. ಇನ್‌ಶ್ಯೂರೆನ್ಸ್ ಪದ್ಧತಿಯನ್ನು ಬದಲಾವಣೆ ಮಾಡಲಿಕ್ಕೆ ಹೇಳಿ. ಇನ್‌ಶ್ಯೂರೆನ್ಸ್ ಪದ್ಧತಿಯನ್ನು ಬದಲಾವಣೆ ಮಾಡಲು ಸಾಧ್ಯವಾಗದೇ ಇದ್ದಾಗ, ಆ [illegible]

ಬಿಡಿ. ಇಂತಹ ಕಷ್ಟ ಕಾಲದಲ್ಲಿ ರೈತರು ಬಡ್ಡಿಗೆ ಸಾಲ ತಂದು ವಿಮಾ ಕಂತು ತುಂಬಿದ್ದಾರೆ. ಹೋದ ವರ್ಷ ಬೆಳೆ ವಿಮೆ ಹಣ ಕೈಗೆ ಬಾರದಿದ್ದರು ಸಹ, ಎಲ್ಲೋ ಒಂದು ಕಡೆ ಸಾಲ ಹುಟ್ಟಿಸಿಕೊಂಡು ಬಂದು ಈ ವರ್ಷದ ವಿಮಾ ಕಂತನ್ನು ರೈತರು ತುಂಬಿದ್ದಾರೆ. ಹೋದ ವರ್ಷದ ಕಂತು ಮತ್ತು ಈ ವರ್ಷದ ಕಂತು ಎರಡನ್ನೂ ಕೂಡ ಅವರು ತುಂಬಿದ್ದಾರೆ. ಹೋದ ವರ್ಷದ ಮಾರ್ಚ್‌ನಲ್ಲೇ ತುಂಬತಕ್ಕಂಥ ರೊಕ್ಕವನ್ನು ಇನ್ನೂ ತುಂಬಿಲ್ಲ. ಆದರೂ ಕೂಡ ನಿಮ್ಮ ಡಂಬಳ ಭಾಗದಲ್ಲಿ ಥ್ರೆಶೋಲ್ಡ್‌ಗಿಂತ ಹೆಚ್ಚು ಉತ್ಪನ್ನ ಬಂದಿದೆ, ಆದ್ದರಿಂದ ನಿಮಗೆ ಕ್ರಾಪ್ ಇನ್‌ಶ್ಯೂರೆನ್ಸ್ ಬರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಬಿತ್ತಿದ್ದೆಲ್ಲಾ ಒಣಗಿ ಹೋಗಿದೆ. ಇದು ಇರುವ ವಾಸ್ತವ ಸಂಗತಿಯಾಗಿದೆ. ಬಿತ್ತಿ, ಹುಟ್ಟಿ ಒಂದು ತಿಂಗಳಲ್ಲೇ ಒಣಗಿರುವುದನ್ನು ಯಾವನು ಹೋಗಿ ಅಲ್ಲಿ ಕಟ್ಟಿಂಗ್ ಮಾಡಿದ್ದಾನೋ, ಉತ್ಪನ್ನ ಅಂದಾಜು ಮಾಡಿದ್ದಾನೋ ಗೊತ್ತಿಲ್ಲ. ಅದರ ಬಗ್ಗೆ ವಿವರಗಳು ನಮಗೆ ಸಿಗುವುದಿಲ್ಲ. ಹೋದ ಸಲ ಪಾಪ! ಶಿರಹಟ್ಟಿ ಎಂ.ಎಲ್.ಎ. ಅಲ್ಲಿ ಓಡಾಡುವುದಕ್ಕೆ ತಯಾರಿರಲಿಲ್ಲ. ಈ ವರ್ಷ ನಾನು ಅಲ್ಲಿ ಓಡಾಡಲಿಕ್ಕೆ ತಯಾರಿಲ್ಲ. ಇದು ಈ ಇನ್‌ಶ್ಯೂರೆನ್ಸ್ ಸ್ಥಿತಿ! ಆ ಕಾರಣದಿಂದ ನಾನು ಏನಾದರೂ ಮಾಡಿ ಈ ಬೆಳೆ ವಿಮೆ ಪದ್ಧತಿಯನ್ನು ಸುಧಾರಿಸಿ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅದಾಗದಿದ್ದರೆ ಕನಿಷ್ಟ ಪಕ್ಷ ಸರ್ಕಾರದವರು ರೈತರು ತುಂಬಿರುವ ಕಂತಿನ ಹಣವನ್ನಾದರೂ ವಾಪಸ್ ಕೊಡಿಸಿ. ಸುಮ್ಮನೆ ರೈತರಿಗೆ 600 ಕೋಟಿ ರೂಪಾಯಿಗಳ ರಿಯಾಯಿತಿ ಕೊಟ್ಟಂತೆ ಮಾಡಿದ್ದೀರಿ. ಯಾರಿಗೆ ಬೇಕು ಆ 600 ಕೋಟಿ ರೂ.ಗಳು? ಅದು ರೈತರು ಕೊಡಬೇಕಾಗಿರತಕ್ಕಂಥ ದುಡ್ಡು ಅಲ್ಲವೇ ಅಲ್ಲ, ಬೇಕಾದರೆ ಆ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಿ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದರೆ ಇದೆಲ್ಲಾ ಹೇಳಬೇಕಾಗುತ್ತದೆ. ಸುಮ್ಮನೆ 600 ಕೋಟಿ ರೂಪಾಯಿಗಳ ಬಾಕಿ ಮನ್ನಾ ಮಾಡಿದ್ದೇವೆ ಎಂದು ನೀವು ಹೇಳಿದರೆ ನಾನು ಅದನ್ನು ಸುಮ್ಮನೆ ಕೇಳುವವನಲ್ಲ. ಈ ಬಾಕಿ ಎಷ್ಟು ವರ್ಷದಿಂದ ಇತ್ತು? ಅದರಲ್ಲಿ ಈಗಾಗಲೇ ಎಷ್ಟು ವಸೂಲಿಯಾಗಿದೆ? ಬಡ್ಡಿ ಎಷ್ಟಿದೆ? ಬಡ್ಡಿ ಮೇಲೆ ಹಾಕಿರುವ ಬಡ್ಡಿ ಎಷ್ಟಿದೆ? 600 ಕೋಟಿ ರೂಪಾಯಿಗಳಿಗೆ ನನಗೆ ಲೆಕ್ಕ ಕೊಡಿ. ಕೆ.ಇ.ಬಿ. ತರಹದವರು ನಿಮಗೆ ಎಲ್ಲಿಯೂ ಸಿಗುವುದಿಲ್ಲ. ನೀವು ಕೇಳಿದರೆ ಅವರು ಬರೇ ಸುಳ್ಳು ಲೆಕ್ಕಗಳನ್ನೇ ಕೊಡುತ್ತಾರೆ. ನಾನೇ ಸಾರ್ವಜನಿಕ ಉದ್ದಿಮೆ ಸಮಿತಿಯಲ್ಲಿ ಅವರನ್ನು ಕರೆಸಿ ಕೇಳಿದರೆ, ಒಂದಕ್ಕೂ ಅವರು ಸರಿಯಾದಂತಹ ಲೆಕ್ಕವನ್ನು ಕೊಡಲಿಲ್ಲ. ಆ ಕಾರಣದಿಂದ ನೀವು 600 ಕೋಟಿ ರೂಪಾಯಿಗಳ ಬಾಕಿ ಮನ್ನಾ ಎಂದೇನು ಹೇಳುತ್ತಿದ್ದೀರಿ, ಅದು ಸುಳ್ಳು ಎಂದು ನಾನು ಹೇಳುತ್ತಿದ್ದೇನೆ. ಇನ್‌ಶ್ಯೂರೆನ್ಸ್ ವಿಚಾರದಲ್ಲೂ ಕೂಡ ಇವತ್ತು ರೈತರಿಗೆ ಅನ್ಯಾಯವಾಗಿದೆ. ಅದನ್ನು ದಯವಿಟ್ಟು ತೀವ್ರದಲ್ಲೇ ತುಂಬಿ ಕೊಡಬೇಕೆನ್ನುವ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ ಸರ್ಕಾರ ಡಾ॥ ನಂಜುಂಡಪ್ಪನವರ ಕಮಿಟಿಯನ್ನು ನೇಮಿಸಿದರು. ಆ ವರದಿಯನ್ನು ಜಾರಿಗೆ ತರುತ್ತೇವೆ ಎಂದು ಸರ್ಕಾರ ಹೇಳಿತು. ಆ ಬಗ್ಗೆ ಬಜೆಟ್‌ನಲ್ಲೂ ಸಹ ಸರ್ಕಾರ ಉಲ್ಲೇಖ ಮಾಡಿದೆ. ಡಾ॥ ನಂಜುಂಡಪ್ಪನವರ ವರದಿಯನ್ನು ನಾವು ಜಾರಿಗೆ ಕೊಡುತ್ತೇವೆ, ಅದನ್ನು ಪಂಚಾಯತ್ ಮಟ್ಟದಲ್ಲಿ ಜಾರಿಗೊಳಿಸುತ್ತೇವೆ ಎಂದು ಸರ್ಕಾರ ಬಜೆಟ್‌ನಲ್ಲಿ ಎಲ್ಲೋ ಒಂದು ಕಡೆ ಹೇಳಿದೆ. ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಮಂಡಳಿ ರದ್ದು ಮಾಡಿದ್ದು ಸರಿ ಎಂದು ಇಲ್ಲಿ ಹೇಳಿ ಮಾನ್ಯ ಖರ್ಗೆಯವರು ಅಲ್ಲಿಗೆ ಹೋಗಲಿ ನೋಡೋಣ. ಎಂತಹ ಅನ್ಯಾಯ ನೀವು ಅವರಿಗೆ

ಮಾಡುತ್ತಿದ್ದೀರಿ? ಹೈದರಾಬಾದ್–ಕರ್ನಾಟಕದ ಅತ್ಯಂತ ಹಿಂದುಳಿದಂತಹ ಪ್ರದೇಶವಾಗಿದೆ. ಮಂಡಳಿ ವ್ಯಾಪ್ತಿಗೆ ಬರುವವರು ಇಲ್ಲಿ ಯಾರ್ಯಾರಿದ್ದೀರಿ, ಅವರಲ್ಲಿ ಒಬ್ಬರಾದರೂ ಅದನ್ನು ರದ್ದು ಮಾಡಿದ್ದು ಸರಿ ಎಂದು ಇಲ್ಲಿ ಹೇಳಿ ನೋಡೋಣ. ನೀವೆಲ್ಲರೂ ಆ ರೀತಿ ಮಾಡಿದ್ದು ಸರಿ ಎಂದು ಇಲ್ಲಿ ಹೇಳಿ ಅಲ್ಲಿಗೆ ಹೋಗಿ ನೋಡೋಣ. ನೀವು ಸುಮ್ಮನೆ ಅದು ಸರಿ ಎಂದು ಹೇಳುವುದಲ್ಲ. ನಾಳೆ ಬಜೆಟ್ ಮೇಲೆ ಮಾತನಾಡುವಾಗ ಅದರ ಬಗ್ಗೆಯೂ ಕೂಡ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಸುಮ್ಮನೆ ಕೈ ಎತ್ತಿ ಬಜೆಟ್ ಅನ್ನು ಅಂಗೀಕರಿಸಬೇಕಾಗುತ್ತದೆ. ಹೈದರಾಬಾದ್--ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರದ್ದು ಮಾಡಿ, ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ಎಂದು ಮಾಡಿ ಅದಕ್ಕೆ 5 ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಸಾಯುವಾಗ ಬಾಯಿಗೆ ಒಂದು ತೊಟ್ಟು ನೀರು ಬಿಡುತ್ತಾರೆ ಅಂತರಲ್ಲಾ, ಆ ರೀತಿ ಇದಾಗಿದೆ. ಆ 5 ಕೋಟಿ ರೂಪಾಯಿಗಳ ಹಣ ಬರೀ ಅವರ ಪಗಾರಕ್ಕೆ ಸಾಕಾಗುವುದಿಲ್ಲ. ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಪರಿಸ್ಥಿತಿ ನೋಡಬೇಕು. ಆಯಿತು, ಅದಂತೂ ಹೋದದ್ದು ಸರಿ. ನಾನು ಅದನ್ನು ಸರಿ ಎನ್ನುತ್ತೇನೆ. ಆ ರೀತಿಯಾದರೂ ಹೈದರಾಬಾದ್–ಕರ್ನಾಟಕದವರು ಹೇಳಲಿ. ಮಾನ್ಯ ವೀರೇಂದ್ರ ಪಾಟೀಲ್‌ರವರ ಕಾಲಕ್ಕೆ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಗೆ 50 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರು. ಬರು ಬರುತ್ತಾ ಅದನ್ನು ಕಡಿಮೆ ಮಾಡಿಕೊಳ್ಳುತ್ತಾ ಬರಲಾಗಿದೆ. ಮಾನ್ಯ ಘೋರ್ಪಡೆಯವರ ಬಳ್ಳಾರಿ ಕೂಡ ಹೈದರಾಬಾದ್–ಕರ್ನಾಟಕದ ವ್ಯಾಪ್ತಿಗೆ ಬರುತ್ತದೆ. ಅವರು ಇಲ್ಲೇ ಇದ್ದಾರೆ. ಅವರಾದರೂ ಈ ಹೈದರಾಬಾದ್--ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರದ್ದು ಮಾಡಿದ್ದನ್ನು ಸರಿ ಎಂದು ಒಪ್ಪುತ್ತಾರೋ? ಆ ಮಂಡಳಿಗೆ ಕೊಡುತ್ತಿದ್ದ 35–40 ಕೋಟಿ ರೂಪಾಯಿಗಳನ್ನು ಸರ್ಕಾರದ ಜನಪ್ರಿಯ ಕಾರ್ಯಕ್ರಮಗಳಿಗಾಗಿ ಹಣ ಕೊಡುವ ಸಲುವಾಗಿ ಅನುದಾನ ಕಡಿಮೆ ಮಾಡುತ್ತಾ ಬರಲಾಯಿತು. ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ಮಾಡಬೇಕೆನ್ನುವ ಮನಸ್ಸು ನಿಮಗೆ ಇದ್ದರೆ ಅದಕ್ಕೆ ಹೆಚ್ಚಿಗೆ ಹಣ ಕೊಡಿ. ಮಾನ್ಯ ನಂಜುಂಡಪ್ಪನವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಕೇವಲ ಉತ್ತರ ಕರ್ನಾಟಕದ ತಾಲ್ಲೂಕುಗಳಷ್ಟೇ ಅಲ್ಲ, ದಕ್ಷಿಣ ಕರ್ನಾಟಕದ ಕೆಲವೊಂದು ತಾಲ್ಲೂಕುಗಳೂ ಕೂಡ ಹಿಂದುಳಿದಿವೆ ಎಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಅದರಲ್ಲಿ ಬಹುಶಃ ಮಾನ್ಯ ರಂಗನಾಥ್‌ರವರ ಹಿರಿಯೂರು ಸಹ ಇದೆ ಎಂದು ಕಾಣುತ್ತದೆ. ನಾನು ಇಲ್ಲವೆಂದು ಹೇಳುವುದಿಲ್ಲ. ನಾವೂ ಕೂಡ ಇಲ್ಲೆಲ್ಲಾ ನೋಡಿದ್ದೇವೆ. ಇಂತಹ ಹಿಂದುಳಿದಂತಹ ತಾಲ್ಲೂಕುಗಳು ಇಡೀ ರಾಜ್ಯಾದ್ಯಂತ ಎಷ್ಟಿವೆ ಎಂಬುದನ್ನು ಗುರುತಿಸಿ. ಅದರ ಬಗ್ಗೆ ತಾವೇ ಹೇಳಿದ್ದೀರಿ. ಏನು ಎಂದರೆ,.......

ಶ್ರೀ ಎಂ.ವೈ. ಘೋರ್ಪಡೆ :– ಮಾನ್ಯ ಅಧ್ಯಕ್ಷರೆ, ಬ್ಯಾಕ್‌ವರ್ಡ್ ತಾಲ್ಲೂಕುಗಳ ಬಗ್ಗೆ ನಂಜುಂಡಪ್ಪ ಕಮಿಟಿ ಪ್ರಕಾರ 39 ತಾಲ್ಲೂಕುಗಳು ಅತಿ ಬ್ಯಾಕ್‌ವರ್ಡ್ ಎಂದು ಪಟ್ಟಿ ಮಾಡಿದ್ದಾರೆ. ನಮ್ಮ ಚಿಂತನೆ ಏನೆಂದರೆ, ಈ 39 ತಾಲ್ಲೂಕುಗಳಿಗೆ ವಿಶೇಷ ಗಮನ ಕೊಡಬೇಕೆಂದು ಬಜೆಟ್‌ನಲ್ಲಿ ಇಲ್ಲದೆ ಹೋದರೂ ಕೂಡ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವರ್ಲ್ಡ್ ಬ್ಯಾಂಕ್‌ನಿಂದ ವರ್ಷಕ್ಕೆ 180 ಕೋಟಿ ರೂ ಇಂಬ್ಯಾಲೆನ್ಸ್ ಸರಿ ಮಾಡುವುದಕ್ಕೋಸ್ಕರ ಕೊಡುವ ಸಾಧ್ಯತೆ ಇದೆ. ಅದು ಬಂದರೆ ಈ ಬ್ಯಾಕ್‌ವರ್ಡ್ ತಾಲ್ಲೂಕುಗಳಿಗೆ ಉಪಯೋಗಿಸಬೇಕೆಂದು ನಾವು ಶಿಫಾರಸ್ಸು ಮಾಡಿದ್ದೇವೆ.

ಇದರ ಬಗ್ಗೆ ಬಜೆಟ್‌ನಲ್ಲಿ ಸ್ಪಷ್ಟವಾದ ವಿಚಾರ ಇಲ್ಲದೆ ಹೋದರೂ ಕೂಡ ಅದರ ಬಗ್ಗೆ ತಾವು ಒತ್ತಾಯ ಮಾಡಲಿಕ್ಕೆ ಅವಕಾಶ ಇದೆ. ಸಾಧ್ಯತೆ ಕೂಡ ಇದೆ.

**ಶ್ರೀ ಎಸ್.ಎಸ್. ಪಾಟೀಲ್ :–** ಅವರು ಏನೇನು ಮಾಡಬೇಕು, ಹೇಗೆ ಪ್ಯಾಕೇಜ್ ಮಾಡಬೇಕು, ಈ ಸಾರಿ ಉತ್ತರ ಕರ್ನಾಟಕ ಪ್ಯಾಕೇಜ್ ಕೊಡುತ್ತೇವೆ, ಚುನಾವಣಾ ಬಜೆಟ್ ಆಗುತ್ತದೆ. ನಂಜುಂಡಪ್ಪನವರ ವರದಿಯಲ್ಲಿ ಏನು ಹೇಳಿದ್ದಾರೆ, ಆ ವರದಿಯಲ್ಲಿ ಎಲ್ಲಾ ತಾಲ್ಲೂಕುಗಳನ್ನು ಕ್ರೋಢೀಕರಿಸಿ ಅವುಗಳ ಅಭಿವೃದ್ಧಿಗೆ ಏಳು ವರ್ಷದ ಪ್ಯಾಕೇಜ್ ಮಾಡಿ, ಅದರ ಪ್ರಕಾರ ವರ್ಷ ಇಷ್ಟು ಕೋಟಿ ಸಾವಿರ ಖರ್ಚು ಮಾಡಿ ಎಂದು ಕ್ಲೀಯರ್ ಆಗಿ ಹೇಳಿದ್ದಾರೆ. ಅದನ್ನು ನೀವು ಮಾಡುತ್ತೀರಿ ಎಂದು ನಾವು ತಿಳಿದುಕೊಂಡಿದ್ದೆವು. ಇದು ಬಿಟ್ಟು ಚುನಾವಣೆಗೆ ರೈತರ ಓಟು ಬೇಕೆಂದು ರೈತರಿಗೆ ಮೋಸ ಮಾಡುವುದಕ್ಕೆ 600 ಕೋಟಿ ರೂಪಾಯಿ ಕರೆಂಟ್ ಬಿಲ್ ಬಿಡುತ್ತೇವೆಂದು ಹೇಳಿದಿರಿ. ಹೆಣ್ಣು ಮಕ್ಕಳಿಗೆ ಒಲೆ ಕೊಡುತ್ತೇವೆಂದು ಹೇಳಿದರು ಕೊಡಿ, ಬಹಳ ಒಳ್ಳೆಯ ಯೋಜನೆ ಇಲ್ಲವೆಂದು ಹೇಳುವುದಿಲ್ಲ. ಇದನ್ನು ಬಿಟ್ಟು ಇದನ್ನು ಹಾಳು ಮಾಡಿ ನಿಮಗೆ ಕೊಡುವುದಕ್ಕಾಗುವುದಿಲ್ಲ. ನಿಮ್ಮ ಬಳಿ ದುಡ್ಡು ಇಲ್ಲ. ಅದಕ್ಕೆ 35 ಕೋಟಿ ರೂ ಇದಕ್ಕೆ 10 ಕೋಟಿ ರೂ ಬರೀ ಕೋಟಿ ಮತು ಹೇಳುತ್ತೀರಿ, ಎಲ್ಲಿಂದ ಕೊಡುತ್ತೀರಿ, ನೀವು ಇನ್ನು ಎರಡು ತಿಂಗಳು ಇರುತ್ತೀರಿ. ಮತ್ತೆ ಏನಾಗುತ್ತದೆ ಎಂದು ನೋಡೋಣ ಎಂದು ಹೇಳಿದ್ದೀರಿ. ಮುಂದೆ ಬಂದರೆ ನೋಡೋಣ ಎಂದು ಹೇಳಿದಾರೆ. ಇದು ಕೊಡುವುದಕ್ಕಾಗುವುದಿಲ್ಲ. ಹೋದ ವರ್ಷ ಏನೇನು ಮಾಡಿದ್ದೀರಿ ಎಂದು ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಹೇಳಿ. ಹೋದ ವರ್ಷ ಬಜೆಟ್‌ನಲ್ಲಿ ಏನೇನು ಮಾಡಿದ್ದೀರಿ, ಹೇಳಿ, ಎಷ್ಟೆಷ್ಟು ಖರ್ಚು ಮಾಡಿದ್ದೀರಿ ಎಂದು ಹೇಳಿ ಉದಾಹರಣೆಗೆ ಹೇಳುತ್ತೇನೆ. ಮಂಡ್ಯ ಪ್ಯಾಕೇಜ್ ಮಾಡಿದ್ದೀರಿ, ಎಷ್ಟು ಖರ್ಚು ಮಾಡಿದ್ದೀರಿ, ಹೇಳಿ ನೋಡೋಣ. ಪ್ರಾಮಾಣಿಕವಾಗಿ ಹೇಳಿ. 300 ಕೋಟಿ ರೂಪಾಯಿ ಮಂಡ್ಯ ಪ್ಯಾಕೇಜ್ ಎಂದು ಮಾಡಿದ್ದೀರಿ. ಎಷ್ಟು ಖರ್ಚು ಮಾಡಿದ್ದೀರಿ ನಾನು ಅವತ್ತು ಟೀಕೆ ಮಾಡಿ ಬೈದಿದ್ದೆ. ಬೇರೆ ರೋಡ್ ಕಾಣಲಿಲ್ಲವಾ, ಮಾನ್ಯ ಮುಖ್ಯ ಮಂತ್ರಿಗಳಗೆ ಬರೀ ಮಂಡ್ಯ ರೋಡ್ ಅಷ್ಟೇ ಕಂಡಿದ್ದು ಎಂದು ಹೇಳಿದ್ದೆ. ನೀವು ಮಾಡಲಿಲ್ಲ. 300 ಕೋಟಿ ರೂಪಾಯಿಯಲ್ಲಿ ಏಳು ಕೋಟಿ ರೂ ಎಂದು ಹೇಳುತ್ತಾರೆ. ಅದು ಕೆಲಸ ಮಾಡಿಸಿದ್ದಾರೆ. ಕಂಟ್ರಾಕ್ಟರ್ ಬಿಲ್ ಕೊಟ್ಟಿಲ್ಲ. ಪ್ರಾಮಾಣಿಕವಾಗಿ ಎಷ್ಟು ಖಚು ಮಾಡಿದ್ದೀರಿ ಹೇಳಿ. ಬಳ್ಳಾರಿ ಪ್ಯಾಕೇಜ್‌ಗೆ ಎಷ್ಟು ಖರ್ಚು ಮಾಡಿದ್ದೀರಿ ಹೇಳಿ, ನಾನು ಬಳ್ಳಾರಿಗೆ ಹೋಗಿದ್ದೆ, ಬಳ್ಳಾರಿ ರೋಡ್ ಭಾರಿ ರೋಡ್ ಆಗಿವೆ, ಸೋನಿಯಾಗಾಂಧಿ ಬಂದು ಹೋಗಿದ್ದಾರೆ, ಭಾರೀ ಪ್ಯಾಕೇಜ್ ಎಲ್ಲಾ ಆಗಿದೆ ಎಂದು ತಿಳಿದುಕೊಂಡಿದ್ದೆ. ಸಿಂಗಟಾಲೂರಿಗೆ ಹೊಸದಾಗಿ ಬ್ರಿಡ್ಜ್ ಆಗಿರುವುದಕ್ಕೆ ನಾನು ಬೆಂಗಳೂರಿನಿಂದ ಊರಿಗೆ ಹೋಗುವಾಗ ಕೊಟ್ಟೂರಿನ ಮೇಲೆ ಹಾದು ಹೋದೆ. ನೀವು ಅಲ್ಲಿ ಹೋಗಿದ್ದೀರಾ, ಜಿಲ್ಲಾ ಉಸ್ತುವಾರಿ ಸಚಿವರೇ ಆ ರಸ್ತೆಗೆ ಹೋಗಿದ್ದೀರಾ? ನಿಮ್ಮ ಕಾರು ಅಲ್ಲಿಗೆ ಹೋಗುತ್ತಾ? ಕೊಟ್ಟರೂ ಉಜ್ಜಯಿನಿ ರೋಡಿನಲ್ಲಿ ಹೋಗಿದ್ದೀರಾ? ಆ ರಸ್ತೆಯನ್ನು ನೀವು ನೋಡಿದ್ದೀರಾ, ಇನ್ನೂ ಬಹಳ ಇವೆ, ಒಂದು ನಿಮಗೆ ಉದಾಹರಣೆ ಹೇಳಿದೆ. ನನ್ನ ಕಾರು ಬರಲಿಲ್ಲ. ಬಂದು ನಿಂತು ಬಿಟ್ಟಿತು. ಟೈರ್ ಬರ್ಸ್ಟ್ ಆಯಿತು. ಒಂದು ಹಂತದಲ್ಲಿ ನಮ್ಮ ಡ್ರೈವರ್ ಎಷ್ಟು ಸಾವಕಾಶವಾಗಿ ಹೋದರೂ ಢಗ್ ಎಂದು ಬಿದ್ದಿತು. ಮಣ ಮಣಕ್ಕೆಲ್ಲಾ ತಗ್ಗು. ಇವರು ಬಳ್ಳಾರಿಪ್ಯಾಕೇಜ್, ಸೋನಿಯಾ ಪ್ಯಾಕೇಜ್. ಹೆಸರು ಹೇಳಬೇಕು ಎಂದು ಹೇಳುತ್ತಾರೆ ಇವರು.

**ಶ್ರೀ ಎಂ.ವೈ. ಘೋರ್ಪಡೆ** :- ಅಧ್ಯಕ್ಷರೆ, ಈ ರೀತಿ ಎಷ್ಟೋ ರಸ್ತೆಗಳು ರಿಪೇರಿ ಸ್ಟೇಜ್‌ನಲ್ಲಿ ಇರುತ್ತವೆ. ಮತ್ತೆ ಪುನಃ ಹೊಸದಾಗಿ ಮಾಡುವ ಸ್ಟೇಜ್‌ನಲ್ಲಿ ಇರುತ್ತವೆ. ಅಂತಹ ಕಡೆ ನೀವು ಹೋಗಿ ನೋಡಿ ಬಳ್ಳಾರಿ ಜಿಲ್ಲೆಯಲ್ಲಿ ಕೆಲಸವಾಗಿಲ್ಲ ಎಂದು ಹೇಳುವುದು ಸರಿಯಲ್ಲ. 40 ವರ್ಷದ ಅನುಭವದಿಂದ ನಾನು ಹೇಳುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ಟಾರ್ ರಸ್ತೆ ಈ ಕಳೆದ ನಾಲ್ಕು ವರ್ಷಗಳಲ್ಲಿ ಆದಷ್ಟು ಹಿಂದೆ 40 ವರ್ಷಗಳಲ್ಲಿ ಆಗಲಿಲ್ಲ. ಸಂಡೂರು ರಸ್ತೆ ಮಾತ್ರ ರಿಪೇರಿಯಲ್ಲಿದೆ. ಹೊಸದಾಗಿ ಮಾಡಬೇಕು. ಹಳೆಯ ರಸ್ತೆ ತೆಗೆಯದೆ ಹೋದರೆ ಹೊಸ ರಸ್ತೆ ಬರುವುದಿಲ್ಲ. ಎಲ್ಲೋ ಒಂದು ಕಡೆ ನಾವು ನೋಡಿದ್ದೀರಿ. ಕೊಟ್ಟೂರು ರಸ್ತೆ, ಸಂಡೂರು ರಸ್ತೆ ಇಲ್ಲಿ ರಸ್ತೆಯೇ ಆಗಿಲ್ಲವೆಂದು ಹೇಳುವುದು ಸರಿಯಲ್ಲ.

**ಶ್ರೀ ಎಸ್.ಎಸ್. ಪಾಟೀಲ್** :- ತಾವು ಒಂದು ಕಮಿಟಿ ಮಾಡಿ ಅವರೇ ಬಗಲಿ, ನಾನು ಹಾಗೆಯೇ ಎಸ್.ಎಸ್. ಪಾಟೀಲ್ ಆಗಿಯೇ ಬರುತ್ತೇನೆ. ಮಾಜಿ ಎಂ.ಎಲ್.ಎ ಆಗಿ ಬರುತ್ತೇನೆ. ಯಾರಾದರೂ ಒಂದು ಮೂರು ಜನರ ಕಮಿಟಿ ಮಾಡಿ ಹೋಗೋಣ. ಬಳ್ಳಾರಿ ಜಿಲ್ಲೆ ತುಂಬಾ ಓಡಾಡೋಣ. ಮಾನ್ಯ ಸಗೀರ್ ಅಹಮದ್‌ರವರು ಇಲ್ಲ. ಸಗೀರ್ ಅಹಮದ್‌ರವರು ಅವತ್ತು ಹೇಳಿದರು, ಏನ್ರೀ ಪಾಟೀಲರೇ ರಸ್ತೆಗಳು ಬಹಳ ಚೆನ್ನಾಗಿ ಆಗಿವೆ, ಎಂದು ಎಲ್ಲಿಯಾದರೂ ಹೋಗೋಣ ನೋಡಿ ಎಂದರು. ಅವರದು ಒಂದು ರಸ್ತೆ ಇದೆ. ಅರಸೀಕೆರೆಯಿಂದ ಹಿಡಿದು ಬೀರೂರು, ಕಡೂರು ರಸ್ತೆ ಇದೆ, ಬೀರೂರು ಎಂಎಲ್ಎ, ಕಡೂರು ಎಂಎಲ್ಎ, ನೀಲಕಂಠಪ್ಪನವರ ಕ್ಷೇತ್ರ ತರೀಕೆರೆ ರಸ್ತೆ ನೋಡಬೇಕು. ನೀವು ಅಲ್ಲಿಗೆ ಹೋಗಿದ್ದೀರಾ? ನೀವು ಇಡೀ ರಾಜ್ಯದಲ್ಲಿ ಓಡಾಡಬೇಕು. ಗ್ರಾಮೀಣಾಭಿವೃದ್ಧಿ ಸಚಿವರು ನೀವು. ನಿಮಗೆ ಹೆಚ್ಚು ಕೇಳುವುದು ಈಗ. ನೀವು ಹೋದ ವರ್ಷ 8000 ರೂ ಇಟ್ಟಿದ್ದೇವೆಂದು ಹೇಳಿದ್ದಿರಿ, ಎಷ್ಟು ಹಣ ಬಿಡುಗಡೆ ಮಾಡಿದ್ದಿರಿ, ಸುಳ್ಳನ್ನು ಏಕೆ ಇದರಲ್ಲಿ ಇಡುತ್ತೀರಿ ಹೇಳಿ, ಇದಕ್ಕೆ ನಿಮ್ಮದೇ ಒಂದು ಇಲಾಖೆಯದು ಕೇಳುತ್ತೀನಿ, ಹೋದ ಸಾರಿ ಪ್ರತಿ ಕಿಲೋಮೀಟರ್ 8000 ರೂಪಾಯಿ ಇಟ್ಟಿದ್ದೀರಿ. ಹೋದಸಾರಿ ರಸ್ತೆ ರಿಪೇರಿಗೆ ಬಿಡುಗಡೆ ಮಾಡಿಸಿದ್ದೀರಾ? ಒಂದಾದರೂ ಗುಂಡಿ ತುಂಬಿದ್ದೀರಾ? ಮೊನ್ನೆ ನಾನು ಕಡೂರಿನಿಂದ ಹೋಗಿ ಮಾಡಿಸಿದ್ದೀರಾ? ಒಂದಾದರೂ ಗುಂಡಿ ತುಂಬಿದ್ದೀರಾ? ಮೊನ್ನೆ ನಾನು ಕಡೂರಿನಿಂದ ಹೋಗಿ ನೋಡುತ್ತೇನೆ. ಕಾರು ಹೋಗುತ್ತಲೇ ಇಲ್ಲ. ನೀವು ಪ್ರಾಮಾಣಿಕವಾಗಿ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿ. ಸುಳ್ಳನ್ನು ಏಕೆ ಹೇಳುತ್ತೀರಿ, ನಿಮ್ಮ ಇಲಾಖೆಯಿಂದ ಎಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ ಎಂದು ಪ್ರಾಮಾಣಿಕವಾಗಿ ಹೇಳಿ. ಸುಮ್ಮನೆ ಒಂದು ಅಂಕಿಗೆ ಸಹಿ ಹಾಕಿ ಬಿಡುವುದು. ನಬಾರ್ಡ್ ರೋಡ್ಸ್ ಎಲ್ಲಾ ಹಾಳಾಗಿ ಹೋಗಿವೆ. ಒಂದಕ್ಕೂ ಗುಂಡಿ ತುಂಬಿಲ್ಲ. ಮುಂದೆ ಕೊಡುತ್ತಾರೆ ಬಿಡುತ್ತಾರೆ ಅದು ಇರಲಿ, ನಿಮ್ಮ ಉತ್ತರದಲ್ಲಿ ನೀವು ಈಗಲೇ ಹೇಳಬೇಕು. ಒಂದು ಕಿಲೋಮೀಟರ್‌ಗೆ 8000 ರೂಪಾಯಿ ಇಟ್ಟಿದ್ದೀರಿ, ನೀವೇ ಉತ್ತರದಲ್ಲಿ ಹೇಳಿದ್ದೀರಿ. ಎಷ್ಟು ಬಿಡುಗಡೆ ಮಾಡಿದ್ದೀರಿ, ಇದನ್ನು ಉತ್ತರದಲ್ಲಿ ನಾಳೆ ಹೇಳಿ. 6 ಕೋಟಿ, 10 ಕೋಟಿ, 100 ಕೋಟಿ ರೂ ಹೀಗೆ ಜನರಿಗೆ ಮೋಸ ಮಾಡುವುದಕ್ಕೆ ಹೊರಟಿದ್ದೀರಾ? ಎಲೆಕ್ಷನ್ ಬಂದಿದೆ ಏನಾದರೂ ಓದಿ ಹೋಗಿ ಬಿಡೋಣ ಎಂದು ತಿಳಿದುಕೊಂಡಿದ್ದೀರಿ. ಹೋದ ವರ್ಷದ್ದು ಹೇಳಿ, ಹೋದ ವರ್ಷದ್ದೆಲ್ಲಾ ಬರೆದು ಹೇಳಬೇಕಾಗಿತ್ತು. ನಿಮ್ಮ ಇಲಾಖೆ ಬಗ್ಗೆ ಕೇಳುತ್ತೇನೆ. ಒಂದು ಉದಾಹರಣೆ ಕೊಡಿ. ನಿಮ್ಮ ಬಳಿ ಉತ್ತರ ಇಲ್ಲ. ಹಣ ಬಿಡುಗಡೆ ಮಾಡಲಿಲ್ಲ. ನೀವು ಅಲ್ಲಿ ಬಂದು ನೋಡಿ ಏನು ಗತಿ ಆಗಿದೆ ಎಂಬು. ನೀವು ಎಲೆಕ್ಷನ್‌ಗೆ

ನಿಲ್ಲುವುದಿಲ್ಲ. ನಿಮ್ಮ ಮಗ ಸ್ವತಂತ್ರವಾಗಿ ನಿಲ್ಲುತ್ತಾರೆ. ಆ ಮಾತು ಬೇರೆ. ನಾನು ಇನ್ನು ಚುನಾವಣೆಗೆ ನಿಲ್ಲುವುದಿಲ್ಲವೆಂದು ನೀವು ಡಿಕ್ಲೇರ್ ಮಾಡಿದ್ದೀರಿ. ಮತ್ತೆ ನಿಲ್ಲುತ್ತೀರೋ ಹೇಗೆ, ಮುದುಕರದ್ದು ಹೇಳುವುದಕ್ಕೆ ಬರುವುದಿಲ್ಲ. ಇಲ್ಲವೆಂದು ಹೇಳುವುದು ಮತ್ತೆ ಟಿಕೆಟ್ ಕೊಟ್ಟರೆ ವಾಪಸ್ ಬರುವುದು. ನಿಜವಾಗಿ ಹೇಳಬೇಕೆಂದರೆ, ಇವರು ರಾಜೀನಾಮೆ ಕೊಡುತ್ತಾರೆಂದು ಇದ್ದೆ. ಇವರು ರಾಜೀನಾಮೆ ಕೊಡಲಿಲ್ಲ. ಸಹಕಾರ ಮಂತ್ರಿಗಳು ಬಂದರು, ಸಹಕಾರದಲ್ಲಿ ಬಹಳ ಕೇಳಿದ್ದಾರೆ. ಬಜೆಟ್‌ನಲ್ಲಿ ಸಹಕಾರ ಉದ್ಧಾರ ಆಗಿ ಹೋಗಿದೆ. ಏಕೆ ಇದ್ದೀರಿ ನೀವು, ಆ ಬಜೆಟ್ ನೋಡಿ ನೀವು ರಾಜೀನಾಮೆ ಕೊಡಬೇಕಾಗಿತ್ತು. ಏನೋ ಅನಿವಾರ್ಯ. ನಿಮ್ಮ ಮೈಸೂರು ಕುಸ್ತಿ ದಿನಾ ಪೇಪರ್‌ನಲ್ಲಿ ಬರೆಯುತ್ತಾರೆ. ನೀವು ಒಬ್ಬರೇ ಏನೂ ಮಾಡುವುದಕ್ಕಾಗುವುದಿಲ್ಲ. ನಾನೂ ಆ ಇಲಾಖೆಯ ಮಂತ್ರಿಯಾಗಿ ಕೆಲಸ ಮಾಡಿದವನು ಮುಖ್ಯಮಂತ್ರಿಗಳು ಮತ್ತು ಆರ್ಥಿಕ ಸಚಿವರೂ ಏನಾದರೂ ಮಾಡಿದರೆ ಉಪಯೋಗವಾಗುತ್ತದೆ. ಎಲ್ಲಾ ಚುನಾವಣೆಗಾಗಿ ಇದರಲ್ಲಿ ಹೇಳಿಕೊಂಡು ಹೋಗಿದ್ದೀರಿ. ಯಾವುದು ಆಗಬೇಕು, ಯಾವುದು ಆಗಲಿಕ್ಕೆ ಸಾಧ್ಯ ಇದೆ. ಇದು ಹೇಳಿದರೆ ಅಡ್ಡಿ ಇಲ್ಲ. ಎಲ್ಲಾ ಬೋಗಸ್. ಹೋದ ಸಲ ರೊಕ್ಕದ್ದೆಲ್ಲಾ ಇವರು ಏನು ಹೇಳಿದ್ದಾರೆ, ಇವತ್ತು ನಿಮಗೆ ಹೇಳುತ್ತೇನೆ, ಹೊಸ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಹೇಳಿದ ಕೂಡಲೇ ಬೋರ್ ಹಾಕಿಸುತ್ತೇನೆಂದು ಹೇಳುತ್ತಾರೆ. ಅಯ್ಯೋ ಕರ್ಮ, ಯಾವ ಡಿಸಿಗೆ ಕೇಳಿದರೂ ಹಣ ಇಲ್ಲವೆಂದು ಹೇಳುತ್ತಾರೆ. ಚುನಾವಣೆ ಬಂದಿದೆ, ನಿಮ್ಮ ಎಂಎಲ್‌ಎಗಳು ಏನು ಮಾಡುತ್ತಾರೆ, ಪಾಪ ಅವರಿಗೆ ದಿಕ್ಕೇ ತೋರದ ಹಾಗಾಗಿದೆ. ಚುನಾವಣೆಗೆ ಹಳ್ಳಿಗೆ ಹೋದಾಗ ತಿಳಿಯುತ್ತದೆ. ಈಗ ತಿಳಿಯುವುದಿಲ್ಲ. ಏನೋ ಎಂಪಿಗಳು ಹೇಳಿದ್ದರಿಂದ ಚುನಾವಣೆ ಮಾಡುವುದಕ್ಕೆ ಹೊರಟಿದ್ದೀರಿ, ಮಾಡಿ, ನಮ್ಮದೇನೂ ತಕರಾರು ಇಲ್ಲ. ನಾವು ತಯಾರಿದ್ದೇವೆ. ಬೇಕಾದಾಗ ಚುನಾವಣೆ ಮಾಡಿ. ನೀವೇನೋ ತಿಳಿದುಕೊಂಡಿದ್ದೀರಿ ನೀವು ಎಲ್ಲಾ ದಳದವರು ಒಡೆದು ಹೋಗಿದ್ದೀರಿ, ಆ ದಳ ಆಗಿದ್ದೀರಿ ಎಂದು ಹೇಳಬಹುದು. ಆದರೆ ಜನ ನಿಮಗೆ ಮಾತ್ರ ಓಟು ಹಾಕುವುದಿಲ್ಲ. ನಿಮ್ಮ ಪರಿಸ್ಥಿತಿ ಆ ಮಟ್ಟಕ್ಕೆ ಹೋಗಿದೆ. ಆ ಪರಿಸ್ಥಿತಿ ನೀವು ತಿಳಿದುಕೊಂಡು ಹೋಗಿ ನೋಡಿ. ಬಿಜೆಪಿಯವರು ಮೂರು ರಾಜ್ಯಗಳಲ್ಲಿ ಗೆದ್ದಿದ್ದೇವೆಂದು ತಿಳಿದುಕೊಂಡಿದ್ದೀರಿ ನಿಮ್ಮ ಕತ್ತರಿ ದೊಡ್ಡದು ಇದೆ. ಏನೇನೂ ಮಾಡಿಲ್ಲ. ರೈತರದ್ದು ಅವರ ಹಣೆಬರಹ ಒಂದು ಒಪ್ಪಿಕೊಳ್ಳುವ ಮಾತು, ರಸ್ತೆ ಕೆಲಸ ಆಗಿದೆ.

**5.30 ಪಿಎಂ**

**ಶ್ರೀ ಆರಗ ಜ್ಞಾನೇಂದ್ರ** :– ಮಾನ್ಯ ಪಾಟೀಲರೆ, ಬಡ್ಡಿ ದರವನ್ನು ಕಡಿಮೆ ಮಾಡಲಿಲ್ಲವೇನು? ನಿಮ್ಮ ಪ್ರಧಾನ ಮಂತ್ರಿಗಳು ಮೇಲಿದ್ದಾಗ ಕಾರ್ ಕೊಳ್ಳುವವರಿಗೆ 11 ಪರ್ಸೆಂಟ್ ಬಡ್ಡಿ ಇತ್ತು. ಅನ್ನು ಬೆಳೆದು ಕೊಡುವ ರೈತನಿಗೆ $16^1/_2$ ಪರ್ಸೆಂಟ್ ಬಡ್ಡಿ ಹಾಕುತ್ತಿದ್ದೀರಿ. ಈಗ 9 ಪರ್ಸೆಂಟ್ ಬಡ್ಡಿಗೆ ತರಲಾಗಿದೆ. ಆ ಬಗ್ಗೆ ಒಂದು ಮಾತನ್ನು ನಾವು ಹೇಳಬೇಕು. ಸಬ್ಸಿಡಿ ಕೊಟ್ಟಿರುವ ಬಗ್ಗೆ ತಾವು ಹೇಳಬೇಕು.

**ಶ್ರೀ ಎಸ್.ಎಸ್. ಪಾಟೀಲ್** :– ಒಳ್ಳೆಯ ಮಾತುಗಳನ್ನೇ ಹೇಳುವುದಕ್ಕೆ ನಾನು ಹೊರಟಿದ್ದೇನೆ. ಅವರು ಹಲವಾರು ಯೋಜನೆಯನ್ನು ಹೇಳಿ ಮಾಡುವುದಕ್ಕೆ ಹೊರಟಿದ್ದಾರೆ. ಇನ್ನೂ ಹೆಚ್ಚು ಕೆಲಸ ಮಾಡಬೇಕು. ಆದರೆ ಬಜೆಟ್‌ನಲ್ಲಿ ಹೇಳಿದ ಕೂಡಲೇ ಮಾಡೇ ಮಾಡುತ್ತಾರೆ ಎಂದು

ನಾನಾದರೂ ಹೇಗೆ ಹೇಳಲಿ. ಹೆಣ್ಣು ಮಕ್ಕಳಿಗೆ ಉರುವಲುವಿನಿಂದ ತೊಂದರೆಯಾಗುತ್ತದೆ ಎನ್ನುವ ಕಾರಣ ಅವರಿಗೆ ಗ್ಯಾಸ್ ಸೌಲಭ್ಯ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅದು ನಿಜವಾಗಿ ಯೋಗ್ಯವಾದುದು. ಈ ರೀತಿ ಕೊಟ್ಟರೆ ಯಾವ ಅಡ್ಡಿಯೂ ಇರುವುದಿಲ್ಲ. ಈ ರೀತಿ ಮಾಡಿದರೆ ಆರ್ಥಿಕವಾಗಿಯೂ ಅವರು ಮುಂದುವರಿಯುತ್ತಾರಲ್ಲದೇ ಇದರ ಜೊತೆಗೆ ಈಗೇನು ಉರುವಲುಗಾಗಿ ಅರಣ್ಯ ಕಡಿಯುತ್ತಾರೆ ಅದೂ ಕೂಡ ಇನ್ನು ಮುಂದೆ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ. ಹೆಣ್ಣು ಮಕ್ಕಳಿಗೆ ಗ್ಯಾಸ್ ಸೌಲಭ್ಯ ಮಾಡಿಕೊಡುವುದರಿಂದ ಖಂಡಿತವಾಗಿ ಅರಣ್ಯ ನಾಶವಾಗದೇ ಹಾಗೆಯೇ ಉಳಿಯುತ್ತದೆ. ನಾನು ಇದನ್ನು ಇಲ್ಲ ಎಂದು ಹೇಳುವುದಿಲ್ಲ. ಆದರೆ ನೀವು ಗ್ಯಾಸ್ ಕೊಡಬೇಕಲ್ಲ. ನೀವೆಲ್ಲ ಹೇಳಿರುವ ಹಿಂದಿನ ಉದಾಹರಣೆಗಳನ್ನು ನೋಡಿದರೆ ಬರೀ ಸುಳ್ಳೇ ಹೇಳುತ್ತೀರಿ. ಈ ಪುಸ್ತಕದಲ್ಲಿ ನೀವು ಏನು ಹೇಳಿದ್ದೀರಿ ಅವೆಲ್ಲವೂ ಚುನಾವಣಾ ದೃಷ್ಟಿಯಿಂದಲೇ ಹೇಳಿರುವುದು. ನೀವು ಇದರಲ್ಲಿ ಒಂದನ್ನೂ ಮಾಡುವುದಿಲ್ಲ, ಇನ್ನು ಒಂದು ತಿಂಗಳಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಇನ್ನು ಮುಂದೆ ನೀವು ಬರುತ್ತೀರೋ ಅಥವಾ ಇಲ್ಲವೋ ಗೊತ್ತಿಲ್ಲ. ನಿಮಗೇನು ಧೈರ್ಯವೆಂದರೆ ಸಿಂಧ್ಯಾರವರು ಮತ್ತು ಎಸ್.ಎಸ್. ಪಾಟೀಲರವರು ಒಂದುಗೂಡುವುದಿಲ್ಲವಾದ ಕಾರಣ ನಾವು ಮತ್ತೆ ಗೆದ್ದು ಬಂದೇ ಬರುತ್ತೇವೆ ಎಂದು ತಿಳಿದುಕೊಂಡು ಬಿಟ್ಟಿದ್ದೀರಿ. ಇಷ್ಟೇ ನೀವು ತಿಳಿದಿರುವುದು. ಇವರು ಹೇಗೂ ಬಡಿದಾಡುತ್ತಾರೆ. ಈ ಚೆನ್ನಿಗಪ್ಪನ ಹಣೆಬರಹ, ಎಸ್.ಎಸ್. ಪಾಟೀಲರ ಹಣೆಬರಹ ತಿಳಿದದ್ದಾಗಿದೆ. ನಾಳೆ ಹೇಗಿದ್ದರು ಇವರ ಗುದ್ದಾಟದಲ್ಲಿ ನಾವೇ ಗೆದ್ದು ಬರುತ್ತೇವೆ ಎಂದಷ್ಟೇ ನೀವು ತಿಳಿದಿರುವುದು. ಈ ಧೈರ್ಯ ಒಂದು ಬಿಟ್ಟರೆ ಉಳಿದ ಯಾವ ರೀತಿಯಲ್ಲೂ ನಿಮಗೆ ಧೈರ್ಯವಿಲ್ಲ. ಆದರೆ ಅದೇನೂ ನಡೆಯುವುದಿಲ್ಲ. ಅದೇನು ಆಗುತ್ತದೆಯೋ ನೋಡಿಬಿಡೋಣ. ಆದರೆ ಒಟ್ಟಿನಲ್ಲಿ ಈಗ ಏನಾಗಿದೆಯೆಂದರೆ ಬಿ.ಜೆ.ಪಿ.ಯವರು ಮೂರು ರಾಜ್ಯಗಳಲ್ಲಿ ಗೆದ್ದುಬಂದಿದ್ದೇವೆಂದು ಏನು ಹೇಳಿ ಚುನಾವಣೆಗೆ ಸಾರಿದ್ದಾರೋ ಅದರಲ್ಲಿ ಅವರು ಇಲ್ಲಿ ಕಳಚಿಬೀಳುತ್ತಾರೆ. ಅದೇ ರೀತಿ ಕಾಂಗ್ರೆಸ್‌ನವರಿಗೆ ಇಲ್ಲಿ ಏನು ಧೈರ್ಯ ಎಂದರೆ ಚೆನ್ನಿಗಪ್ಪನವರು ಮತ್ತು ಎಸ್.ಎಸ್. ಪಾಟೀಲ್‌ರವರು ಗುದ್ದಾಡುತ್ತಾ ಒಂದಾಗುವುದಿಲ್ಲವಾದ್ದರಿಂದ ನಾವೇ ಗೆದ್ದು ಬರುತ್ತೇವೆ ಎನ್ನುವ ಧೈರ್ಯದಿಂದ ಇದ್ದಾರೆ. ನಮ್ಮಲ್ಲೂ ಕೂಡ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಾ ಇರುವುದರಿಂದ ಈಗ ನಾವೂ ಕೂಡ ಏನು ಹೇಳುವುದಕ್ಕಾಗುತ್ತಿಲ್ಲದ ಪರಿಸ್ಥಿತಿ ಇದೆ. ಈ ಸ್ಥಿತಿಯಲ್ಲಿ ನಾವೆಲ್ಲರೂ ಇದ್ದೇವೆ. ಆದ್ದರಿಂದ ನಾನು ಇನ್ನೂ ಮಾತನಾಡುವ ವಿಷಯ ಬಹಳಷ್ಟು ಇರುವುದರಿಂದ ಈಗ 5.30ಕ್ಕೆ ಮುಗಿಸಿ ಮತ್ತೆ ನಾಳೆ ಮುಂದುವರಿಸುತ್ತೇನೆ. ಏಕೆಂದರೆ ಇದು ಕಡೆಯ ಬಜೆಟ್ ಆಗಿರುವುದರಿಂದ ಏನಿಲ್ಲವೆಂದರೂ ನಾನು ಇನ್ನೂ ಎರಡು ಗಂಟೆಗಳ ಕಾಲ ಮಾತನಾಡಿ ಹಲವಾರು ವಿಷಯಗಳನ್ನು ಹೇಳಬಯಸುತ್ತೇನೆ. ಅಧ್ಯಕ್ಷರು ಬಿ.ಎ.ಸಿ. ಮೀಟಿಂಗ್ ಮಾಡುತ್ತಿದ್ದಾರೆ. ಅದು ಏನು ಮುಗಿಯಿತೋ ಅಥವಾ ಇಲ್ಲವೋ ಹೇಳಿ. ಈ ಬಾರಿ ಕೊನೆಯ ಬಜೆಟ್ ಆದ್ದರಿಂದ ನಾನು ಇನ್ನೂ ಹೆಚ್ಚು ಮಾತನಾಡುತ್ತೇನೆ. ಅಧ್ಯಕ್ಷರು ಬೇಡ ಕುಳಿತುಕೊಳ್ಳಿ ಎಂದರೂ ನಾನು ಕುಳಿತುಕೊಳ್ಳುವುದಿಲ್ಲ. ಒಟ್ಟಿನಲ್ಲಿ ನಾವು ಎಷ್ಟು ಮಾತನಾಡಿದರೂ ಕಂಠಶೋಷಣೆಯಾಗಿ ಕಂಠ ಬಿದ್ದುಹೋಗುವುದಕ್ಕೆ ಬರುತ್ತಿದೆ. ಇವೊತ್ತು ಹಳ್ಳಿಗೆ ಹೋದರೆ ಜನರು ನೀರಿಲ್ಲ, ನೀರಿಲ್ಲ ಎಂದು ಹೇಳಿ ನೀನು ಯಾವ ಎಂ.ಎಲ್.ಎ ಎಂದು ಕೇಳುತ್ತಾರೆ. ಈ ರೀತಿ ಅನ್ನಿಸಿಕೊಂಡು, ಅನ್ನಿಸಿಕೊಂಡು ನಮಗೆ ಸಾಕಾಗಿಹೋಗಿದೆ. ಆಡಳಿತ ಪಕ್ಷದ ಶಾಸಕರಿಗೆ ಆ ರೀತಿ ಅಂದಿದ್ದಾರೋ [illegible]

ಅವರು ಆ ರೀತಿ ಅನ್ನಿಸಿಕೊಂಡ ಹಾಗೆ ಕಾಣುವುದಿಲ್ಲ. ಅವರಿಗೆ ಪಾಪ ಹಾಗೆ ಹೇಳಿರುವುದಿಲ್ಲವೆಂದು ಕಾಣುತ್ತದೆ. ಏಕೆಂದರೆ ಅವರು ಮುಂದೆ ಆರಿಸಿ ಬರುವವರಿದ್ದಾರೆ ಮತ್ತು ಸರ್ಕಾರ ನಡೆಸುವವರು ಎನ್ನುವ ಕಾರಣ ಮುಂದೆ ಮಾಡುತ್ತಾರೆ ಎಂದು ಅವರು ತಿಳಿದುಕೊಂಡು ಬಿಟ್ಟಿದ್ದಾರೆ. ಆದರೆ ನಮಗೆ ಮಾತ್ರ ಹಳ್ಳಿಯಲ್ಲಿ ಜನರು ಬೈಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಿಮಗೂ ಬೈಯ್ದಿರಬೇಕು. ಅವರೂ ಈಗ ಸಿಟ್ಟಾಗುತ್ತಿದ್ದಾರೆ. ಹುಬ್ಬಳ್ಳಿ–ಧಾರವಾಡದಲ್ಲಂತೂ ಪ್ರತಿ ದಿವಸ ನೀರು ಬರುತ್ತಿರಬೇಕು.

**ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ** :– ಎಲ್ಲಾ ಕಡೆಯೂ ರೈತರಿಗೆ ನೀರಿನ ತೊಂದರೆ ಇದೆ. ಜನಗಳಿಗೆ ಕುಡಿಯುವ ನೀರಿಗೂ ತೊಂದರೆ ಇದೆ.

**ಶ್ರೀ ಎಸ್.ಎಸ್. ಪಾಟೀಲ್** :– ಆದ್ದರಿಂದ ಸರ್ಕಾರ ಪೂರ್ಣ ಪ್ರಮಾಣದ ಆಯವ್ಯಯ ಮಂಡಿಸಿದೆಯೆಂದ ಮೇಲೆ ಅದು ಪೂರ್ಣ ಪ್ರಮಾಣದ ಆಯವ್ಯಯವಾಗಿ ಪ್ರಾಮಾಣಿಕವಾಗಿ ಇರಬೇಕಾಗುತ್ತದೆ. ಆ ರೀತಿ ಇಲ್ಲದಿದ್ದರೆ ಕೇಂದ್ರದವರು ತೆಗೆದುಕೊಂಡ ಹಾಗೆ ನಾಲ್ಕು ತಿಂಗಳಿಗೆ ಲೇಖಾನುದಾನವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಆ ರೀತಿ ಮಾಡಿದ್ದರೆ ನಾವೆಲ್ಲರು ಮೊನ್ನೆಯೇ ಹೋಗಿಬಿಡುತ್ತಿದ್ದೆವು. ಅದನ್ನು ಬಿಟ್ಟು ಈ ರೀತಿ ಮಾಡಿರುವುದು ಸರಿಯಲ್ಲ. ಕಳೆದ ಬಾರಿಯ ಬಜೆಟ್ ಪುಸ್ತಕ ಬಹಳ ದೊಡ್ಡದು ಮತ್ತು ದಪ್ಪ ಇತ್ತು. ಈ ಬಾರಿ ಕೇವಲ ಸಣ್ಣ ಪುಸ್ತಕವಿದೆ. ಇದರಲ್ಲಿ ಬರೇ ಪ್ಯಾಕೇಜ್‌ಗಳ ಬಗ್ಗೆ ಹೇಳಲಾಗಿದೆ. ಬರೇ ಪ್ಯಾಕೇಜ್ ಸರ್ಕಾರವಾಗಿದೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ** :– ಒಂದು ರೀತಿ ಅದು ಕಗ್ಗಂಟು ಇದ್ದಹಾಗೆ ಇದೆ.

**ಶ್ರೀ ಎಸ್.ಎಸ್. ಪಾಟೀಲ್** :– ಕಗ್ಗಂಟೇನದು; ಕಗ್ಗಂಟಂತೆ. ಅದು ಸರಿ ಇದೆ ಬಿಡಿ. ಮತ್ತೆ ಈ ರೀತಿ ಹೇಳಿದ್ದರಿಂದ ನಿಮಗೂ ಮತ್ತು ಬಿ.ಜೆ.ಪಿ.ಯವರಿಗೂ ಸಿಟ್ಟು ಬರುತ್ತದೆ ಎಂದು ನನಗೆ ಅಂಜಿಕೆಯಾಗಿದೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ** :– ಆ ರೀತಿ ಏನೂ ಇಲ್ಲ.

**ಶ್ರೀ ಎಸ್.ಎಸ್. ಪಾಟೀಲ್** :– ಆ ರೀತಿ ಏನೂ ಇಲ್ಲವೇನು? ಇನ್ನು ಮೊನ್ನೆ ಮೊನ್ನೆ ನೀವು ಅವರೊಂದಿಗೆ ಹೋಗಿರುವುದರಿಂದ ಅಂಥದ್ದೇನೂ ಸಿಟ್ಟಿಲ್ಲ ಬಿಡಿ.

**ಶ್ರೀ ಕರಡಿ ಸಂಗಣ್ಣ** :– ಅಂಥದ್ದೇನೂ ಇಲ್ಲ. ಈಗ ನೀವು ಹೇಳಿದ್ದಿರಲ್ಲಾ ಪ್ಯಾಕೇಜ್ ಎಂದು ಕರೆದು, ಅದನ್ನು ನಮ್ಮ ಗ್ರಾಮೀಣ ಭಾಗದಲ್ಲಿ ಅದನ್ನು ಕಗ್ಗಂಟು ಎಂದು ಕರೆಯುವುದಕ್ಕೆ ಪ್ರಾರಂಭಿಸಿದ್ದಾರೆ.

**ಶ್ರೀ ಎಸ್.ಎಸ್. ಪಾಟೀಲ್** :– ಕಗ್ಗಂಟು ಎನ್ನುವುದು ಸರಿ ಇದೆ ಬಿಡಿ. ಇನ್ನು ನೀರಾವರಿಗೆ ಈ ಬಜೆಟ್‌ನಲ್ಲಿ ಬಹಳ ಕಡಿಮೆ ಹಣ ಇಟ್ಟಿದ್ದಾರೆ. ಇದಕ್ಕೆ ಇನ್ನೂ ಹೆಚ್ಚು ಹಣ ಇಡಬೇಕಾಗಿತ್ತು. ಎಷ್ಟು ಕಡಿಮೆ ಮಾಡಿದ್ದೀರಿ ಎಂಬುದನ್ನು ತಾವು ಪುಸ್ತಕ ತೆಗೆದುನೋಡಿ. ನಿಮ್ಮ ಮುಂದೆ ಇದೆಯಲ್ಲ. ಇನ್ನು ಮಾಹಿತಿ ತಂತ್ರಜ್ಞಾನದ ಬಗ್ಗೆ ಹೇಳುವುದಾದರೆ ನಿಜವಾಗಿ ಅದರಲ್ಲಿ ಕರ್ನಾಟಕ ಸ್ವಲ್ಪ ಮುಂದಿದೆ. ಆದರೆ ಮಾಹಿತಿ ತಂತ್ರಜ್ಞಾನ ಸಚಿವರು ಏನು ಹೇಳುತ್ತಾರೆಂದರೆ ಇದನ್ನು ನಾವು ಮಾಡಿದ್ದು, ನಾವು ಮಾಡಿದ್ದು ಎಂದು ಹೇಳಿಕೊಳ್ಳುತ್ತಾರೆ. ಆದರೆ ಇಲ್ಲ. ನಾವು ಮಾಡಿದ್ದನ್ನು ಇವರು ಮುಂದುವರಿಸಿಕೊಂಡು ಹೋಗಿದ್ದಾರಷ್ಟೆ. ಈಗೇನು ನೀವು ವಿಕಾಸ ಸೌಧವನ್ನು ಕಟ್ಟಿಸಿದ್ದೀರೋ ಅದು ಯಾರ ಯೋಜನೆ ಹೇಳಿ. ಇದಲ್ಲದೇ ಎರಡೂ ವಿಧಾನ ಸೌಧವನ್ನು ಸಂಪರ್ಕ ಬೆಳೆಸುವ ಸಲುವಾಗಿ ಸುರಂಗ ಮಾರ್ಗ ಮಾಡಬೇಕು ಎಂದು ಇತ್ತು. ಸಿಂಧ್ಯಾರವರಿಗೂ ಆ ಬಗ್ಗೆ

ಗೊತ್ತು. ಒಟ್ಟಿನಲ್ಲಿ ಬಜೆಟ್ ಬಗ್ಗೆ ನಾನು ಹೇಳುವುದೇನೆಂದರೆ ಇದೊಂದು ಚುನಾವಣೆಯ ಸ್ಟಂಟ್. ಬಸವಣ್ಣನವರು ಹೇಳಿದ ಹಾಗೆ ಇದೊಂದು ಆಕಾಶದ ಮಾವಿನ ಫಲ. ಬಸವಣ್ಣನವರು ಹೇಳಿದ್ದಾರೆ. ಆಕಾಸದ ಮಾವಿನ ಫಲ ಕೊಯ್ಯಲಿಲ್ಲ. ಮೆಲ್ಲಲಿಲ್ಲ ಎಂದು. ಆ ರೀತಿ ಈ ಬಜೆಟ್ ಭಾಷಣ ಆಕಾಶದ ಮಾವಿನ ಫಲ. ಈ ರೀತಿ ನಿಮ್ಮ ಬಜೆಟ್ ಇರುವುದರಿಂದ ದಯವಿಟ್ಟು ಇದನ್ನು ಸುಧಾರಿಸಬೇಕಾಗಿದೆ. ಇದರಲ್ಲಿ ತಿದ್ದುಪಡಿಯನ್ನು ಮಾಡಿಕೊಳ್ಳಿ. ಆ ಬಗ್ಗೆ ಏನಾದರೂ ಹೇಳುವುದಿದ್ದರೆ ಹೇಳಿ. ಉತ್ತರ ಕರ್ನಾಟಕದ ಬಗ್ಗೆ ಬಜೆಟ್‌ನಲ್ಲಿ ನೀವು ಹೇಳಬೇಕು. ಆ ರೀತಿ ಹೇಳದಿದ್ದರೆ ನೀವು ದೊಡ್ಡ ಪೆಟ್ಟು ತಿನ್ನುತ್ತೀರಿ. ಈ ಬಗ್ಗೆ ಉತ್ತರ ಕರ್ನಾಟಕ ಭಾಗದ ಎಂ.ಎಲ್.ಎ.ಗಳು ಬಹಳ ಎಚ್ಚರ ವಹಿಸಬೇಕಾಗುತ್ತದೆ. ಅದರಲ್ಲು ಹೆಚ್ಚಾಗಿ ಕಾಂಗ್ರೆಸ್ ಶಾಸಕರು ಹೆಚ್ಚು ಎಚ್ಚರ ವಹಿಸಬೇಕಾಗುತ್ತದೆ. ಏಕೆಂದರೆ ನೀವು ಅಧಿಕಾರದಲ್ಲಿದ್ದೀರಿ. ಇನಾಮದಾರ್‌ರವರೆ, ಬೇರೆ ಪಕ್ಷದಲ್ಲಿರುವವರು ಹೇಗಿದ್ದರೂ ಕಚ್ಚಾಡುತ್ತಿದ್ದಾರೆಯಾದ್ದರಿಂದ ನಾವು ಗೆದ್ದೇ ಗೆಲ್ಲುತ್ತೇವೆಂದು ನೀವು ತಿಳಿದುಕೊಂಡಿದ್ದರೆ ಅದು ಬಹಳ ತಪ್ಪು ಕಲ್ಪನೆ. ಈಗ ಜನರು ಬಹಳ ವಿಚಾರವಂತರಾಗಿದ್ದಾರೆ. ಬಹಳ ವಿಚಾರವಂತರಿದ್ದಾರೆ. ನಿಮ್ಮ ಬಜೆಟ್ ಓದಿದ ಕೂಡಲೇ ಇದನ್ನು ಹಾಗೆಯೇ ನಂಬಿಕೊಂಡು ಇರುತ್ತಾರೆ ಎಂದು ನೀವು ತಿಳಿದುಕೊಳ್ಳಬೇಡಿ. ಹೆಣ್ಣು ಮಕ್ಕಳಿಗೆ ಗ್ಯಾಸ್‌ನ ಒಲೆ ಕೊಡುತ್ತಾರೆ ಎಂದರೆ ಅವರು ನಂಬುವುದಿಲ್ಲ. ಉದಾಹರಣೆಗೆ ಹಿಂದಿನ ಬಜೆಟ್‌ಗಳ ಬಗ್ಗೆ ಹೇಳುತ್ತೇನೆ. ವಿಧವಾ ಸ್ತ್ರೀ ವೇತನ ಹೋಗಿದೆಯೇ? ವಿಧವಾ ಸ್ತ್ರೀ ವೇತನ ಎಷ್ಟೆಷ್ಟು ತಿಂಗಳು ಎಷ್ಟೆಷ್ಟು ಹೋಗಿದೆಯೆಂದು ಪ್ರಾಮಾಣಿಕವಾಗಿ ಹೇಳಿ. ವಿಧವಾ ಸ್ತ್ರೀ ವೇತನ ಕಳುಹಿಸಿದಿರೆ? ಹೆರಿಗೆ ಭತ್ಯೆ ಕಳುಹಿಸಿದಿರೆ? ವೃದ್ಧಾಪ್ಯ ವೇತನಕ್ಕೆ ಹಣ ಕಳುಹಿಸಿದಿರೆ?

**ಶ್ರೀ ಹೆಚ್. ವಿಶ್ವನಾಥ್** :- ನಮ್ಮ ಕಡೆ ಬಂದಿದೆ.

**ಶ್ರೀ ಎಸ್.ಎಸ್. ಪಾಟೀಲ್** :- ಎಲ್ಲಿ ಬಂದಿದೆ? ಮತ್ತೆ ನಿಮಗೆ ತಗಲು ಮಂತ್ರಿ ಎಂದು ಹೇಳಬೇಕಾಗುತ್ತದೆ. ನೀವು ಮತ್ತು ಮಾನ್ಯ ಡಿ.ಕೆ. ಶಿವಕುಮಾರ್‌ರವರು ಸೆಷನ್‌ನಲ್ಲಿ ಒಟ್ಟಿಗೆ ಇದ್ದಾಗ ನಾನು ಹೇಳುತ್ತೇನೆ. ಈಗ ಬೇಡ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** :- ಪಾಟೀಲರೆ, ಬೆಳಿಗ್ಗೆ ಸಭಾಪತಿಯವರು ಅಲ್ಲಿ ಕುಳಿತಾಗ ಹೇಳಿದರು, ಅವರ ಕ್ಷೇತ್ರದ ಪಂಚಾಯಿತಿಗೆ ಮೂರು ಲಕ್ಷ ರೂಪಾಯಿಗಳು ಬಂದಿದೆಯೆಂದು ಹೇಳಿದರು. ಇವರೇನಾದರೂ ಡಿಸ್ಕ್ರಿಮಿನೇಟ್ ಮಾಡಿ ಅವರವರಿಗೆ ಮಾತ್ರ ಕಳುಹಿಸಿಕೊಟ್ಟು ಬಿಟ್ಟಿದ್ದಾರೇನೋ ನನಗಂತೂ ಗೊತ್ತಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** :- ನೋಡಿ. ನೀವು ಹೇಳಿದ ಹಾಗೆ ಡಿಸ್ಕ್ರಿಮಿನೇಟ್ ಮಾಡಿದ್ದಾರೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** :- ಬೆಳಿಗ್ಗೆ ಅವರು ಹೇಳಿದಾಗ ಆಗ ಸುಮ್ಮನೆ ತಾವು ಇದ್ದಿರಿ.

**ಶ್ರೀ ಎಸ್.ಎಸ್. ಪಾಟೀಲ್** :- ಅವರು ಹೇಳುತ್ತಾರೆ ಎಂದರೆ ಏನ್ ಹೇಳಿದ ಹಾಗೆ ಆಯ್ತು ಹೇಳಿ. ಅವರು ಆ ಛೇರ್‌ನಲ್ಲಿ ಕುಳಿತು ಹೇಳಿದ್ದರಿಂದ ನಾವು ಏನೂ ಹೇಳುವುದಕ್ಕೆ ಆಗಲಿಲ್ಲ. ಅವರು ಇಲ್ಲಿ ಕುಳಿತು ಹೇಳಿದ್ದರೆ ಅದಕ್ಕೆ ಉತ್ತರನವನ್ನು ನಾನು ಹೇಳುತ್ತಿದ್ದೆ. ಅದನ್ನು ಬಿಟ್ಟು ಅಧ್ಯಕ್ಷರ ಛೇರ್‌ನಲ್ಲಿ ಕುಳಿತು ಹೇಳಿದರೆ ನಾವು ಸುಮ್ಮನೆ ಇರಬೇಕಾಗುತ್ತದೆ. ಕೆಲವು ಬಾರಿ ಅಧ್ಯಕ್ಷರ ಛೇರ್‌ನಲ್ಲಿ

ಕುಳಿತವರು ಸರ್ಕಾರ ಕೊಡಬೇಕಾದ ಉತ್ತರವನ್ನೇ ಕೊಡುವ ಕೆಲಸವನ್ನು ಮಾಡುತ್ತಿದ್ದಾರೆ. ಈ ರೀತಿ ನಡೆದಿದೆ. ಸರ್ಕಾರ ಕೊಡಬೇಕಾದ ಉತ್ತರವನ್ನು ಅಧ್ಯಕ್ಷ ಪೀಠದಲ್ಲಿ ಕುಳಿತವರು ಕೊಟ್ಟಿರುವ ಪ್ರಸಂಗಗಳು ನಡೆದಿವೆ. ಆ ಬಗ್ಗೆ ಅಧ್ಯಕ್ಷರಿಗೆ ಕೇಳಿದರೆ ಅಧ್ಯಕ್ಷರನ್ನೇ ನಾವು ಟೀಕೆ ಮಾಡಿದ ಹಾಗಾಗುತ್ತದೆಂದು ನಾವು ಮಾತನಾಡದೇ ಸುಮ್ಮನೇ ಕುಳಿತೆವು ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವ ಮುಂಚೆ ಸರ್ಕಾರ ಉತ್ತರ ಕೊಡುವ ಮುಂಚೆ ಅಧ್ಯಕ್ಷರೇ ಉತ್ತರ ಕೊಟ್ಟುಬಿಡುತ್ತಾರೆ. ಏನು ಮಾಡುವುದು ಹೇಳಿ? ಇದು ಸರಿಯಲ್ಲ ಎಂದು ಅಧ್ಯಕ್ಷರ ಬಗ್ಗೆ ಮಾತನಾಡಿದ ಹಾಗಾಗುತ್ತದೆ ಎಂದು ತಿಳಿದು ನಾವು ಸುಮ್ಮನೆ ಇರುತ್ತೇವೆ. ಆ ರೀತಿ ಸಭಾಪತಿಯವರು ಅಧ್ಯಕ್ಷರ ಪೀಠದಲ್ಲಿ ಕುಳಿತು ಮಾತನಾಡಿದ್ದನ್ನು ಅವರ ಛೇರ್‌ನಲ್ಲಿ ಎದ್ದುನಿಂತು ಅದೇ ವಿಚಾರ ಹೇಳಿದ್ದರೆ ಆಗ ನಾನು ಆ ಬಗ್ಗೆ ಮಾತನಾಡಿ ಹೇಳುತ್ತಿದ್ದೆ. ಅಧ್ಯಕ್ಷ ಪೀಠದಲ್ಲಿ ಕುಳಿತ ಯಾರೇ ಆಗಲಿ ಪಕ್ಷಾತೀತವಾಗಿರುತ್ತದೆ. ಮುಂದೆ ಚುನಾವಣೆ ನಡೆಯುತ್ತದೆ ಎಂಬ ವಿಚಾರವೇ ಅವರ ತಲೆಯಲ್ಲಿ ಇರಬಾರದು. ಅದು ಬಿಟ್ಟು ವಿಶ್ವನಾಥ್‌ರವರು ಉತ್ತರ ಕೊಡಬೇಕಾದ್ದನ್ನು ಬೆಲ್ಲದ್‌ರವರು ಅಧ್ಯಕ್ಷ ಪೀಠದಲ್ಲಿ ಕುಳಿತು ಉತ್ತರ ಹೇಳಿಬಿಟ್ಟರೆ ನಾವೇನು ಮಾಡುವುದು ಹೇಳಿ? ಜಗದೀಶ್ ಶೆಟ್ಟರ್‌ರವರೇ, ನೀವು ಈ ಬಗ್ಗೆ ಹೇಳಬೇಕಾಗುತ್ತದೆ. ನೀವು ಕೇಳಿದ ಪ್ರಶ್ನೆಗಳಿಗೆ ಉತ್ತರ ಯಾರಿಂದ ಬಂದವು? ಇದು ಈ ರೀತಿ ನಡೆಯುತ್ತಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ ಬಜೆಟ್ ಭಾಷಣದಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು ಮತ್ತು ಉತ್ತರ ಕರ್ನಾಟಕದ ಬಗ್ಗೆ ಪ್ಯಾಕೇಜ್ ಸಾರಬೇಕು. ನಂಜುಂಡಪ್ಪ ವರದಿಯನ್ನು ಯಾವಾಗ ಜಾರಿಗೆ ಕೊಡುತ್ತೀರಿ ಎಂಬ ಬಗ್ಗೆ ನೇರವಾಗಿ ನಮಗೆ ಹೇಳಿ. ಆ ರೀತಿ ಹೇಳಿದರೆ ಮಾತ್ರ ಕೆಲಸವಾಗುತ್ತದೆಯೇ ಹೊರತು ಇಲ್ಲದಿದ್ದರೆ ಇಲ್ಲ. ಇನ್ನು ಸಹಕಾರ ಮಂತ್ರಿಗಳು ಬಹಳ ಅಪರೂಪದಲ್ಲಿ ಸದನದಲ್ಲಿ ಇದ್ದಾರೆ. ಈ ನಡುವೆ ಅವರು ಸದನದಲ್ಲಿ ಇರುವುದನ್ನು ಕಡಿಮೆ ಮಾಡಿದಾರೆ. ಕ್ಷೇತ್ರದಲ್ಲಿಯೇ ಹೆಚ್ಚು ಓಡಾಡುವುದಕ್ಕೆ ಹೆಚ್ಚು ಮಾಡಿದ್ದಾರೆ. ಡಿ.ಕೆ. ಶಿವಕುಮಾರ್‌ರವರು ಮತ್ತು ವಿಶ್ವನಾಥ್‌ರವರು ಗುದ್ದಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮಹದೇವ್‌ರವರು ಪಾಪ ನ್ಯಾಯ ಮಾಡುವುದಕ್ಕೆ ಹೊರಟಿದ್ದಾರೆ. ಪೇಪರ್‌ನಲ್ಲಿ ದಿನ ವಿಶ್ವನಾಥ್‌ರವರ ಸುದ್ದಿ ಬರುತ್ತಿದೆ. ಅದೇ ಏನಾದರೂ ನಮ್ಮ ಬಗ್ಗೆ ಈ ರೀತಿ ಪೇಪರ್‌ನಲ್ಲಿ ಬಂದಿದ್ದರೆ ಏನು ದಿನ ಇವರು ಹೀಗೆ ಹೊಡೆದಾಡುತ್ತಾರೆ ಎಂದು ಹೇಳುತ್ತಿದ್ದಿರಿ. ಅಯ್ಯೋ ಏನು ಗುದ್ದಾಡುತ್ತಾರೆ ಪಕ್ಷದಲ್ಲಿ ಎಂದು ಹೇಳುತ್ತಿದ್ದಿರಿ. ಈಗ ನಿಮ್ಮದೇನು ಆಗಿದೆ ಹೇಳಿ ಹಣೆಬರಹ.

**ಶ್ರೀ ಹೆಚ್. ವಿಶ್ವನಾಥ್** :– ಈಗ ನಾವು ಏನು ಗುದ್ದಾಡಿದ್ದೇವೆ ಸ್ವಲ್ಪ ಹೇಳಿ.

**ಶ್ರೀ ಎಸ್.ಎಸ್. ಪಾಟೀಲ್** :– ಕೆಳಗೆ ಬಿದ್ದಿಲ್ಲವಷ್ಟೆ.

**ಶ್ರೀ ಆರಗ ಜ್ಞಾನೇಂದ್ರ** :– ಮಾನ್ಯ ಪಾಟೀಲರೇ, ಅವರೇನೇ ಆದರೂ ಸಮಬಲದ ಕುಸ್ತಿ ಪಟುಗಳು.

**ಶ್ರೀ ಎಸ್.ಎಸ್. ಪಾಟೀಲ್** :– ನೀವು ಹಾಗೆ ಹೇಳುತ್ತೀರೇನೋ. ಅದು ಖರೆ ಇದೆ. ಸಮಬಲದಲ್ಲಿ ನಡೆದಿದೆ. ಸ್ವಲ್ಪ ಶಿವಕುಮಾರ್‌ರವರ ಬಲ ಜಾಸ್ತಿ ಇದೆ. ವಿಶ್ವನಾಥ್‌ರವರೆ, ನಿಮ್ಮ ಬಲ ನಡುವೆ ಇದೆ. ಅವರ ಬಲ ಜಾಸ್ತಿ ಇದೆ. ನಿಮಗೂ ಆ ವಿಚಾರ ಗೊತ್ತಿದೆ. ಬಲ ಜಾಸ್ತಿ ಇದ್ದಾಗ ಅವರು ಬಗ್ಗುವುದಿಲ್ಲ. ಆದ್ದರಿಂದ ಬಹಳ ಗುದ್ದಾಡುವುದಕ್ಕೆ ತಾವು ಹೋಗಬೇಡಿ. ಇನ್ನು ಬಜೆಟ್‌ನಲ್ಲಿ

ಏನು ಹೇಳಿದ್ದಾರೆಂದರೆ ಇಡೀ ಜಗತ್ತೇ ನೋಡುತ್ತಿರುವಂತೆ ಕರ್ನಾಟಕವು ರಾಷ್ಟ್ರದ ಆರ್ಥಿಕ ರಂಗದಲ್ಲಿ ರಾಜ್ಯಾಡಳಿತ ವಲಯದಲ್ಲಿ ಮತ್ತು ಸಮಾಜದಲ್ಲಿ ಅಗ್ರನಾಯಕನಾಗಿ ಕಂಗೊಳಿಸುತ್ತಿದ್ದು ಜಾಗತಿಕ ಕರ್ನಾಟಕವಾಗಿ ಹೊರಹೊಮ್ಮುತ್ತಿದೆ ಎಂದು ನಾನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ ಎಂದಿದ್ದಾರೆ. ಇದು ಒಪ್ಪುವ ಮಾತು. ಕರ್ನಾಟಕವನ್ನು ಎಲ್ಲರೂ ಹೊಗಳುತ್ತಾರೆ. ಸರಿ ಇದೆ. ಇನ್ನು ಕಳೆದ ಐದು ವರ್ಷಗಳಲ್ಲಿ ಸತತ ಮೂರು ವರ್ಷ ಬರಗಾಲವಿದ್ದರೂ ಸಹಿತ ಜೀವನದ ಎಲ್ಲಾ ನಡೆಗಳಲ್ಲಿ ಎಲ್ಲಾ ವರ್ಗದ ಜನರೂ ಶಾಂತಿ, ಸಮೃದ್ಧಿ, ಪ್ರಗತಿಯನ್ನು ಕಂಡಿದ್ದಾರೆ. ಮಾನ್ಯ ಅಧ್ಯಕ್ಷರೆ ಇದು ನೋಡಿ ಹೇಗಿದೆ? ಇದು ಬಜೆಟ್‌ನಲ್ಲಿ ಹೇಳುವ ಮಾತು? ಆಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ಖರ್ಗೆಯವರು, ಬರೀ ಬಜೆಟ್ ಬಗ್ಗೆ ಮಾತನಾಡಬೇಕೆಂದು ಹೇಳಿದರು. ಆದರೆ ಇವರು ಹೇಳಿದ್ದು ಏನು? ಬಜೆಟ್ ಬಗ್ಗೆ ಏನಾದರೂ ಹೇಳಿದ್ದಾರಾ? ಮತ್ತೆ 'ನನ್ನ ಸರ್ಕಾರವು ಸಂಕಷ್ಟಕ್ಕೆ ಒಳಗಾದ ಜನರ ನೆರವಿಗೆ ಸಕಾಲದಲ್ಲಿ ಧಾವಿಸಿದ್ದು ಸಂರಕ್ಷಿಸಿದ್ದು ಇದಕ್ಕೆ ಮುಖ್ಯ ಕಾರಣವಾಗಿದೆ. ಎಲ್ಲಾ ಸಕಾಲದಲ್ಲಿ ಧಾವಿಸಿಬಿಟ್ಟರಂತೆ. ಧಾವಿಸಿ ಎಲ್ಲರನ್ನೂ ಸುಖವಾಗಿ ಇಟ್ಟಿದ್ದ ಕಾರಣ ಜನತ್ತು ಇದಕ್ಕೆ ಮುಖ್ಯ ಕಾರಣವಾಗಿದೆ ಎಂದು ಹೇಳಿದ್ದಾರೆ. 'ಈ ಬಾರಿ ಬರ ಪರಿಹಾರದ ನೆರವು ಮತ್ತು ಆಗಾಧತೆ ಹಿಂದೆಂದೂ ಕಂಡರಿಯದಷ್ಟು ಬೃಹತ್ ಪ್ರಮಾಣದಲ್ಲಿತ್ತು. ಒಂದು ತಿಂಗಳು ಯೋಜನೆ ಶುರು ಮಾಡಿ. ಮಾನ್ಯ ವಿಶ್ವನಾಥ್ ರವರೆ, ನೀವು ಪ್ರಾಮಾಣಿಕವಾಗಿ ಹೇಳಿ, ಒಂದು ತಿಂಗಳಲ್ಲಿ ಕೂಲಿಕಾರರಿಗೆ ಎಷ್ಟು ದಿವಸ ಕೆಲಸ ಕೊಟ್ಟಿದ್ದೀರಿ? ನೀವೆಲ್ಲರೂ ಹಾಗೂ ನಿಮ್ಮ ಎಂಎಲ್‌ಎ ಗಳು ಹೇಳಲಿ. ಕರೆದುಕೊಂಡು ಹೋಗುತ್ತೇವೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಜನ ಹೇಳಲಿ ಏಕೆಂದರೆ ಇಲ್ಲಿ ಸ್ವಲ್ಪ ಕೆಲಸ ಮಾಡಿಸಿದ್ದೀರಿ. ಆದರೆ ಇಲ್ಲಿ ಕೆಲವು ತಾಲ್ಲೂಕುಗಳಲ್ಲಿ ಕಡ ಬರ ಇದೆ. ತಿಂಗಳಿಗೆ ಬಹಳ ಎಂದರೆ ಎರಡು ದಿವಸ ಕೆಲಸ ಕೊಟ್ಟರಿ. ಈಗ ಅದು ಬಂದ್ ಆಗಿದೆ. ಮಾನ್ಯ ಜಗದೀಶ್ ಶೆಟ್ಟರ್ ಸರ್ಕಾರದವರು ಇವರಿಗೆ ಕಳುಹಿಸಿಯೇ ಇಲ್ಲವಂತೆ, ಅಲ್ಲಿ 40 ಲಕ್ಷ ಟನ್ ಕೊಟ್ಟಿರುವುದು ನಿಜವೆ?

ಶ್ರೀ ಜಗದೀಶ್ ಶೆಟ್ಟರ್ :- 10 ಲಕ್ಷ ಮೆಟ್ರಿಕ್ ಟನ್ ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಆಂಧ್ರದಲ್ಲಿ ಎಷ್ಟು ಕೊಟ್ಟಿದ್ದಾರೆ? ಅದಕ್ಕೂ ಕೂಡ ನೀವು ಹೋರಾಡಬೇಕು. ನಾನು ಯಾರ ಮಾತನ್ನೂ ಒಪ್ಪುವುದಿಲ್ಲ. ಇಲ್ಲಿ ರೈತರು ಹಾಗೂ ಬಡವರು ಇದ್ದಾರೆ. ಕರ್ನಾಟಕ ಬಹಳ ಕಷ್ಟದಲ್ಲಿ ಇದೆ. ಸುಮ್ಮನೆ ಹಾಗೆ ಹೇಳುವುದು ಅಲ್ಲ. ನಿಮ್ಮದೂ ಕೂಡ ತಪ್ಪಿದೆ.

ಶ್ರೀ ಆರಗ ಜ್ಞಾನೇಂದ್ರ :- ಇಲ್ಲಿಗೆ ಕೇಂದ್ರ ಸಚಿವರು ಬಂದಾಗಲೇ ಕ್ಲಾರಿಫೈ ಮಾಡಿದ್ದಾರೆ. ಅದೇನೆಂದರೆ ಬಿಲೋ ಪಾವರ್ಟಿ ಲೈನ್‌ನಲ್ಲಿ ಇರುವಂತಹ ಜನರ ಸಂಖ್ಯೆಯ ಆಧಾರದ ಮೇಲೆ ಅದನ್ನು ಮಾಡಿದ್ದಾರೆ. ಆದುದರಿಂದ ಆಂಧ್ರದಲ್ಲಿ ಬಿಪಿಎಲ್‌ನ ಸಂಖ್ಯೆ ಹಾಗೂ ನಮ್ಮ ಕರ್ನಾಟಕದಲ್ಲಿ ಇರುವ ಬಿಪಿಎಲ್ ಸಂಖ್ಯೆ ವ್ಯತ್ಯಾಸ ಇದೆ. ಅದಕ್ಕೆ ಅದರ ಆಧಾರದ ಮೇಲೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಇಲ್ಲಿ ಇವರು ಬಿಪಿಎಲ್ ಲಿಸ್ಟ್ ಸರಿ ಮಾಡಿಲ್ಲವಲ್ಲ.

ಶ್ರೀ ಎಸ್.ಎಸ್. ಪಾಟೀಲ್ :- ನಿಜವಾಗಿ ಇವರದ್ದು ತಪ್ಪು ಇದೆ. 60 ಲಕ್ಷ ಇದ್ದರೆ ಇಳಿಸಿ 20 ಲಕ್ಷ ಕಳುಹಿಸಿದ್ದಾರೆ. ಆದರೆ ಈಗ ಏನೋ ಚುನಾವಣೆ ಬರುತ್ತದೆಂದು ಹೇಳಿ ಎಲ್ಲರಿಗೂ

ಹಳದಿ ಕಾರ್ಡ್ ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರೆ, ನಿಮ್ಮನ್ನು ನಾವು ಕೇಳುವುದು, ನೀವು ಹಳ್ಳಿಯವರಿಗೆ ನೇರವಾಗಿ ಸಂಬಂಧ ಇದ್ದೀರಿ. ನಿಮ್ಮ ಇಲಾಖೆಯಲ್ಲಿ ಏನೇನೂ ಆಗಲಿಲ್ಲ. ಐದು ವರ್ಷವಾಯಿತು, ನೀವು ಒಬ್ಬ ಹಿರಿಯ ಸಚಿವರಾಗಿ, ದೇವರಾಜು ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ, ನೀವು ಫೈನಾನ್ಸ್ ಮಿನಿಸ್ಟರ್ ಇದ್ದಿರಿ. ಬಹಳ ಒಳ್ಳೆಯ ಹೆಸರು ಇತ್ತು. ಆಗ ನಿಮಗೆ ಇವತ್ತು ಏನು ಮಾಡೋದು? ಯಾವುದೋ ಕೈಯಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟಿರಿ. ದುಡ್ಡು ಬಿಡುಗಡೆಯಾಗುವುದಿಲ್ಲ. ನೀವು ಮಂದಿಗೆ ಹೇಳುವುದಕ್ಕೆ ತಯಾರಿಲ್ಲ. ನೀವು ರಾಜೀನಾಮೆ ಕೊಟ್ಟು ಹೋಗಬೇಕಾಗಿತ್ತು. ನಿಮಗೆ ಬಹಳ ಗೌರವ ಇತ್ತು. ಏನಿದೆ ನಿಮ್ಮ ಹಳ್ಳಿಯಲ್ಲಿ? ಏನೇನೂ ಇಲ್ಲ. ಹಳ್ಳಿಗಾಡಿನಲ್ಲಿ ನೋಡಬೇಕು ಏನೇನೂ ಇಲ್ಲ. ಈಗ ಸದನಕ್ಕೆ ಎಲ್ಲಾ ಸಚಿವರು ಬಂದರು ಬರಲಿ. ನಮ್ಮ ಚಿಕ್ಕಮಗಳೂರು ಉಸ್ತುವಾರಿ ಸಚಿವರು ಬಂದರು. ನೀವು ಇಲ್ಲಿ ಇರಲಿಲ್ಲವಾದ್ದರಿಂದ ನಾನು ಬರೀ ಗ್ರಾಮೀಣಾಭಿವೃದ್ಧಿ ವಿಚಾರವಾಗಿ ಅಷ್ಟೇ ಕೇಳಿದೆ. ನೀವು ಕಡೂರು ಹತ್ತಿರ ಅಲ್ಲೊಂದು ರೋಡ್‌ನಲ್ಲಿ ನಿಮ್ಮ ಕಾರು ಹೋಗಿದೆ ಏನು? ಅಲ್ಲಿ ನೀವು ಯಾವತ್ತಾದರೂ ಹೋಗಿದ್ದೀರಾ? ನೀವು ಹೋಗೇ ಇಲ್ಲವೆಂದು ಕಾಣುತ್ತದೆ.

**ಶ್ರೀ ಡಿ.ಬಿ. ಚಂದ್ರೇಗೌಡ** :– ಹೋಗಿದ್ದೇನೆ, ಯಾವಾಗಲೂ ಅಲ್ಲೇ ಹೋಗುವುದು.

**ಶ್ರೀ ಎಸ್.ಎಸ್. ಪಾಟೀಲ್** :– ನಾನು ದಯವಿಟ್ಟು ಹೇಳುತ್ತೇನೆ, ನೀವು ಗ್ರಾಮೀಣಾಭಿವೃದ್ಧಿಗೆ ಒತ್ತು ಕೊಡುತ್ತೇನೆಂದು ಹೇಳಿ ಒತ್ತು ಕೊಟ್ಟಿಲ್ಲ. ಹಣ ಬಿಡುಗಡೆಯಾಗಿಲ್ಲ. ಬಜೆಟ್‌ನಲ್ಲಿ ಎಷ್ಟು ಹಣ ಇಟ್ಟಿದ್ದೀರಿ ಅಷ್ಟು ಹಣ ಬಿಡುಗಡೆಯಾಗಿಲ್ಲ. ಹೋದವರ್ಷಕ್ಕಿಂತ ಈ ವರ್ಷ ಗ್ರಾಮೀಣಾಭಿವೃದ್ಧಿಗೆ ಹಣವನ್ನು ಕಡಿಮೆ ಮಾಡಿದ್ದೀರಿ. ಇದು ನನ್ನ ವಾದ ಇರುವುದು ನೋಡಿ. ನಮ್ಮ ಕಾಲದಲ್ಲಿ ಗ್ರಾಮೀಣಾಭಿವೃದ್ಧಿಗೆ ಬಜೆಟ್‌ನಲ್ಲಿ 520 ಇತ್ತು. ಅದನ್ನು ಕಡಿಮೆ ಮಾಡಿ ನೀವು ಏನು ಮಾಡಿದಿರಿ ಎಂದರೆ ಹೋದಬಾರಿ 338 ಕೊಟ್ಟಿದ್ದೀರಿ. ಈ ಸಲ 146 ಕೊಟ್ಟಿದ್ದೀರಿ, ಅಲ್ಲಿ ಕುಡಿಯುವ ನೀರಿಗೆ ಕಡಿಮೆ ಮಾಡಿದ್ದೀರಿ. ನಿಮಗೆ ಹೇಳಿ ಕೊಳ್ಳುತ್ತಾ ಹೋಗುತ್ತೇನೆ. ಏಕೆಂದರೆ ಚಂದ್ರೇಗೌಡ ಸಾಹೇಬರು ಬಂದಮೇಲೆ ಸ್ವಲ್ಪ ಹೆಚ್ಚು ಆಸಕ್ತಿಯಿಂದ ಇದ್ದವರು, ಏಕೆ ಆಸಕ್ತಿ ಇತ್ತೆಂದರೆ ನಮ್ಮ ಪಕ್ಷದಲ್ಲಿ ಇದ್ದು ಕೆಲಸ ಮಾಡಿದವರು. ಅದಕ್ಕೆ ಅವರಿಗೆ ಬಡವರ ಬಗ್ಗೆ ಹಳ್ಳಿಗರ ಬಗ್ಗೆ ಕಾಳಜಿ ಇದೆ. ಅದಕ್ಕೆ ನಾನು ಹೇಳುತ್ತಿದ್ದೇನೆ. ನೀವು ಮೂಲ ಆ ಪಕ್ಷದಿಂದಲೇ ಬಂದಿದ್ದರೆ ಹೇಳುವುದಕ್ಕೆ ಆಗುತ್ತಿರಲಿಲ್ಲ. ಇನ್ನು ನೀರಾವರಿ ಮತ್ತು ಪ್ರವಾಹ, ಅದರ ಬಗ್ಗೆ ಹೇಳುತ್ತೇನೆ.

**ಶ್ರೀ ಹೆಚ್. ವಿಶ್ವನಾಥ್** :– ಒಂದು ಕಡೆಯಿಂದ ಓದಿಬಿಡಿ. ಇದು ಹೇಗಾಗುತ್ತದೆ ಎಂದರೆ....

**ಶ್ರೀ ಎಸ್.ಎಸ್. ಪಾಟೀಲ್** :– ಒಂದು ಕಡೆಯಿಂದ ಇದನ್ನು ಓದಿದರೆ ಮೂರು ದಿವಸವಾದರೂ ನನ್ನ ಭಾಷಣ ಮುಗಿಯುವುದಿಲ್ಲ. ಬೇಗ ಮುಗಿಸಿ ಎಂದು ಹೇಳುತ್ತಾರೆ. ಅದಕ್ಕೆ ಅಲ್ಲಲ್ಲಿ ಹೇಳಬೇಕಲ್ಲಾ ಎಂದು ಮೇಜರ್ ಆಗಿ ಹೇಳುತ್ತಾ ಹೋಗುತ್ತಿದ್ದೇನೆ.

**ಶ್ರೀ ಹೆಚ್. ವಿಶ್ವನಾಥ್** :– ತಾವು ಹೇಳುತ್ತಿದ್ದೀರಿ ಬಹಳ ಸಂತೋಷ. ನಮಗೆ ಹೇಗೆ ಅನ್ನಿಸುತ್ತಿದೆ ಎಂದರೆ ವರ್ಕಿಂಗ್ ಕ್ಯಾಪಿಟಲ್ ಕಡಿಮೆ, ಟರ್ನ್‌ಓವರ್ ಜಾಸ್ತಿ ತರಹ ಕಾಣುತ್ತಿದೆ. (ನಗು)

ಶ್ರೀ ಎಸ್.ಎಸ್. ಪಾಟೀಲ್ :- ನಮ್ಮ ಸಹಕಾರ ಸಚಿವರೇ ನಿಮಗೆ ಕೋ-ಅಪರೇಟಿವ್ ಬಗ್ಗೆ ಗೊತ್ತಿಲ್ಲ. ಹಿಂದೆ ವಿದ್ಯಾ ಮಂತ್ರಿಯಾಗಿದ್ದರು, ಆಗ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆಯಿಂದ ಸಹಕಾರ ಖಾತೆ ಕೊಟ್ಟಿದ್ದು ಅವರಿಗೆ ಶಿಕ್ಷೆ ಎಂದು ಆಗಿದೆ. ಆಮೇಲೆ ಇನ್ನೊಬ್ಬರು ಇದ್ದಾರೆ, ನಮ್ಮ ಕೃಷಿ ಸಚಿವರು ಜಿಲ್ಲಾ ಉಸ್ತುವಾರಿ ಸಚಿವರು, ಅವರಿಗೆ ನೀರಾವರಿಯಿಂದ ಕೃಷಿಗೆ ಕೊಟ್ಟ ಕೂಡಲೇ ಡೀ ಗ್ರೇಡ್ ಮಾಡಿದ ಹಾಗೆ ಅಂತೆ. ಕೆಲಸ ಮಾಡುವವರಿಗೆ ಯಾವುದು ಏನ್ರಿ. ಸಹಕಾರ ಇಲಾಖೆ ಎಂದರೆ ದೊಡ್ಡ ಇಲಾಖೆ. ಎಲ್ಲರಿಗೂ ಸಹ ಸಹಾಯ ಮಾಡಬಹುದು. ಇದು ನಿಮಗೆ ಈಗ ಅನುಭವವಾಗುತ್ತದೆ. ನಿಜ ಹೇಳುವುದಾದರೆ ನಿಮ್ಮ ಬಗ್ಗೆ ನನಗೆ ಗೌರವ ಇದೆ. ಇಲ್ಲವೆಂದು ಹೇಳುವುದಿಲ್ಲ. ನೀವು ಪ್ರಾಥಮಿಕ ಶಿಕ್ಷಣ ಮಂತ್ರಿಯಾಗಿದ್ದಾಗ ಕೆಲಸ ಮಾಡಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ಕೆಲವು ತಪ್ಪು ಆಗಿರಬಹುದು. ಕೆಲವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಸುಮ್ಮನೆ ನಿಮ್ಮನ್ನು ಕೂರಿಸಿಬಿಟ್ಟರು. ಏನು ಮಾಡೋದು?

ಶ್ರೀ ಹೆಚ್. ವಿಶ್ವನಾಥ್ :- ಯಶಸ್ವಿನಿ ಕಾರ್ಯಕ್ರಮದಲ್ಲಿ ಒಳ್ಳೆಯ ಕೆಲಸ ಆಗಿದೆ.

ಶ್ರೀ ಎಸ್.ಎಸ್. ಪಾಟೀಲ್ :- ಅಯ್ಯೋ ಅದೊಂದು ಹೇಳಿಕೊಳ್ಳುವುದಕ್ಕೆ ಶುರುವಾಯಿತು.

ಶ್ರೀ ಹೆಚ್. ವಿಶ್ವನಾಥ್ :- ಅಯ್ಯೋ ಎಂದರೆ ಹೇಗೆ ಪಾಟೀಲರೆ ಒಳ್ಳೆಯದನ್ನು ಒಪ್ಪಿಕೊಳ್ಳಬೇಕು ನೀವು. ಕೆಲವು ತಿದ್ದುಪಡಿ ಮಾಡಿಕೊಳ್ಳಬೇಕು.

ಶ್ರೀ ಎಸ್.ಎಸ್. ಪಾಟೀಲ್ :- ಯಶಸ್ವಿನಿಯನ್ನು ಒಪ್ಪುತ್ತೇನೆ. ಆದರೆ ಸಂಸ್ಥೆಗಳು ಮುಚ್ಚುವುದಕ್ಕೆ ಹೋಗಿದ್ದಾವೆ. ಯಶಸ್ವಿನಿಯಲ್ಲಿ ತುಂಬಿಸಿಕೊಳ್ಳುವವರು ಇನ್ನು ಯಶಸ್ವಿನಿಯಲ್ಲಿ ಸೊಸೈಟಿ ತುಂಬಿದರೆ ಆ ಸೊಸೈಟಿ ಮುಚ್ಚುತ್ತವೆ. ಮುಚ್ಚಿ ಹೋಗಿವೆ. ನೀವು ಲೆಕ್ಕ ತೆಗೆಸಿ ನೋಡಿ. ಎಲ್ಲಾ ಬ್ಯಾಂಕುಗಳು ಮುಚ್ಚಿ ಹೋಗುತ್ತವೆ. ನೀವು ಬಡ್ಡಿ ಮನ್ನಾ ಎಂದು ಹೇಳಿದಿರಿ. 880 ಕೋಟಿ ರೂಪಾಯಿ ಪ್ಯಾಕೇಜ್, ಏನು ಮಾಡಿದ್ದೀರಿ? ಏನೇನು ಪ್ರಗತಿ ಸಾಧಿಸಿದ್ದೀರಿ? ಏನು ಆಗಿವೆ ಎಂಬುದನ್ನೂ ಹೇಳಿ ನನ್ನ ಪ್ರಕಾರ ಏನೂ ಆಗಿಲ್ಲ.

ಶ್ರೀ ಹೆಚ್. ವಿಶ್ವನಾಥ್ :- 880 ಕೋಟಿ ರೂಪಾಯಿ ಎಂದು ಹೇಳಿ ಏನೂ ಆಗಿಲ್ಲ ಎಂದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ :- ಬಡ್ಡಿ ಮನ್ನಾ ಎಂದು ಹೇಳಿ ಎಷ್ಟು ಕೋಟಿ ರೂಪಾಯಿ ಮನ್ನಾ ಮಾಡಿದಿರಿ? ಹೇಳಿ ಉತ್ತರ ನನಗೆ. 180 ಕೋಟಿ ರೂಪಾಯಿ ಎಂದು ಲೆಕ್ಕ ಹೇಳಿದಿರಿ, ಎಂಟತ್ತು ಕೋಟಿ ರೂಪಾಯಿ ಕೂಡ ಅಲ್ಲಿ ಹೋಗಿಲ್ಲ. ನಂತರ ಲ್ಯಾಂಡ್ ಬ್ಯಾಂಕ್ ಹೇಳಿದಿರಿ. ದಯವಿಟ್ಟು ಕೇಳಿ, ನೀವು ಅಂಕಿ ಕೊಟ್ರೆ

ಶ್ರೀ ಹೆಚ್. ವಿಶ್ವನಾಥ್ :- ತಾವು ಹಿರಿಯ ಸಚಿವರಾಗಿದ್ದವರು ಇಲಾಖೆ ನಡೆಸಿದಂತಹವರು. ನಿಜ, 127 ಕೋಟಿ ರೂಪಾಯಿ ಒಂದು ಸಲ ಮಾಡಿದ್ದೇವೆ. ಒಂದು ಸಾರಿ 40 ಕೋಟಿ ರೂಪಾಯಿ ಮಾಡಿದ್ದೇವೆ. ಆದರೆ ನೀವು ಎಂಟತ್ತು ಕೋಟಿ ರೂಪಾಯಿ ಹೋಗಿಲ್ಲವೆಂದರೆ ಹೇಗೆ? ತಾವು ದಯಮಾಡಿ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ, ಡಿಸಿಸಿ ಬ್ಯಾಂಕ್‌ಗಳಲ್ಲಿ ಕೇಳಿ ಎಷ್ಟು ಕೋಟಿ ರೂಪಾಯಿ ಜಮಾ ಆಗಿದೆ ಎನ್ನುವುದನ್ನು ತಿಳಿದು ದಯಮಾಡಿ ಮಾತನಾಡಿದರೆ ಒಳ್ಳೆಯದು.

**ಶ್ರೀ ಎಸ್.ಎಸ್. ಪಾಟೀಲ್** :– 127 ಕೋಟಿ ರೂಪಾಯಿಯಲ್ಲಿ ಎಷ್ಟು ಜಮಾ ಆಗಿದೆ ಎಂದು ಹೇಳಿ. ಇಲ್ಲ ಎಂದರೆ ಅವುಗಳು ಮುಚ್ಚುವುದಕ್ಕೆ ಹತ್ತಿದ್ದಾವೆ ಎಂದು ಹೇಳಿದೆ. ದುಡ್ಡು ಜಮಾ ಆಗಿಲ್ಲ ಅಲ್ಲಿ. ನಿಮ್ಮ ಹತ್ತಿರ ಎಲ್ಲಾ ಇದೆ. ನನಗೆ ಯಾವುದೋ ಎರಡು ಸೊಸೈಟಿ ಹೇಳಿರಬಹುದು. ಅದಕ್ಕೆ ಜಮಾ ಆಗಿಲ್ಲ. ನಿಮ್ಮ ಕಡೆ ರಾಜ್ಯದ ಅಂಕಿ ಇದೆ. 127 ಕೋಟಿ ರೂಪಾಯಿಯಲ್ಲಿ ಎಷ್ಟು ತುಂಬಿದೆ ಎಂದು ಹೇಳಿ, ನಿಮ್ಮ ಬಾಯಿಯಲ್ಲಿ ಇದೆಯಲ್ಲಾ ಲೆಕ್ಕ. ಹೇಳಿ ನೋಡೋಣ ಇಲ್ಲ. ಈ ಸೊಸೈಟಿ ಮುಚ್ಚಿ ಹೋಗುತ್ತಿವೆ. ಈಗ ರೈತರಿಂದ ಬಡ್ಡಿ ಬರುವ ಹಾಗೆ ಇಲ್ಲ. ನೀವು ತುಂಬುತ್ತಾ ಇಲ್ಲ. ಆ ಸೊಸೈಟಿ ಉಳಿದಿದ್ದು ಹೇಗೆ? ಆ ಬ್ಯಾಂಕುಗಳು ಉಳಿದಿದ್ದು ಹೇಗೆ? ಎಲ್ಲಾ ಮುಚ್ಚಿ ಹೋಗಿವೆ. ನಾಳೆ ಮುಂಗಾರು ಮಳೆ ಬಂದರೆ ಸಾಲ ಕೊಡುವುದಕ್ಕೆ ನಿಮ್ಮ ಕಡೆಯಿಂದ ಸಾಧ್ಯವಿಲ್ಲ. ನೀವು ಅವತ್ತು ಇರುತ್ತಿರೋ ಇಲ್ಲವೋ, ಆ ಮಾತು ಮಾತು ಬೇರೆ. ಆದರೆ ಮುಂದೆ ಬಂದವರು ಮಾಡಬೇಕಲ್ಲಾ. ನೀವು ಬರಬಹುದ, ಇನ್ನೊಬ್ಬರು ಬರಬಹುದು. ಆದರೆ ಪರಿಸ್ಥಿತಿ ನೋಡಿ, ನೀವು ಇನ್ನು ಕೂಡ ತುಂಬಲಿಲ್ಲ. ಬಡ್ಡಿ ಮನ್ನಾ ಎಂದು ಹೇಳಿದಿರಿ, ಜಮಾ ಆಗಿದೆಯಾ? ಇದು ನನ್ನ ಪ್ರಶ್ನೆ ಇರುವುದು. ಅದನ್ನು ನಾಳೆ ಉತ್ತರದಲ್ಲಿ ಹೇಳಿ. 127 ಕೋಟಿ ರೂಪಾಯಿಯಲ್ಲಿ ಎಷ್ಟು ಕೋಟಿ ರೂಪಾಯಿ ಜಮಾ ಮಾಡಿದ್ದೀರಿ? ಯಾವ್ಯಾವ ಸೊಸೈಟಿಯಲ್ಲಿ, ಯಾವ್ಯಾವ ಡಿಸಿಸಿ ಬ್ಯಾಂಕ್‌ಗೆ, ಅಪೆಕ್ಸ್ ಬ್ಯಾಂಕ್‌ಗೆ ಎಷ್ಟು ಜಮಾ ಆಗಿದೆ? ರೈತರ ಸಾಲಕ್ಕೆ ಎಷ್ಟು ಜಮಾ ಆಗಿದೆ? ನೀವು 880 ಕೋಟಿ ರೂಪಾಯಿ ಏನು ಹೇಳಿದ್ದೀರಿ, ಅದಕ್ಕೆ ವಿವರ ಕೊಡಿ.

**ಶ್ರೀ ಡಿ.ಬಿ. ಚಂದ್ರೇಗೌಡ** :– ಡೀಟೈಲ್ ಹೇಳುತ್ತೇವೆ.

**ಶ್ರೀ ಎಸ್.ಎಸ್. ಪಾಟೀಲ್** :– ಇದರಲ್ಲಿ ಹೇಳಬೇಕಾಗಿತ್ತು. 880 ಕೋಟಿ ರೂಪಾಯಿ ಪ್ಯಾಕೇಜ್ ಮಾಡಿದ್ದೇವೆ ಎಂದರೆ ಹೇಗೆ? ಇನ್ನೊಂದು ವಿಚಾರ ಕೊಟ್ಟಿದ್ದೀರಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ನಿಮ್ಮ ಹಾವಭಾವ ನೋಡಿದರೆ ಸಹಕಾರ ಮಂತ್ರಿ ವಿಶ್ವನಾಥ್‌ರವರ ಮೇಲೆ ಕುಸ್ತಿ ಮಾಡಲಿಕ್ಕೆ ನಿಂತಿದ್ದೀರಿ ಎಂದು ಅನ್ನಿಸುತ್ತಿದೆ.

**ಶ್ರೀ ಎಸ್.ಎಸ್. ಪಾಟೀಲ್** :– 2003–04ನೇ ಸಾಲಿನ ಆಯವ್ಯಯದ ಮೇಲೆ ತೆಗೆದುಕೊಂಡ ಕ್ರಮಗಳು ಇದನ್ನು ಅಷ್ಟು ಓದಿ ಹೇಳಬೇಕೆಂದರೆ ಎಷ್ಟು ದಿವಸ ಬೇಕಾಗುತ್ತದೆ? ಇಲ್ಲಿ ಕೊಟ್ಟಿದ್ದೀರಿ, ಇದರಲ್ಲಿ ಏನೇನು ಹೇಳಿದ್ದೀರಿ, ಏನೇನು ಮಾಡಿದ್ದೀರಿ ಎನ್ನುವ ಬಗ್ಗೆ ಮೊದಲು ಒಂದೆರಡನ್ನು ನೋಡಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ ಅಡಿಯಲ್ಲಿ ಶೇಕಡ 9 ಬಡ್ಡಿದರದಲ್ಲಿ ಸಾಲ ಪಡೆಯುವ ಬಗ್ಗೆ. ಶೇಕಡ 9 ರಷ್ಟು ಬಡ್ಡಿ ಸಾಲವನ್ನು ಕೊಟ್ಟಿದ್ದೀರಾ? ಇದರ್ಲಿ ಏತಕ್ಕೆ ಹೇಳಿದಿರಿ?

**ಶ್ರೀ ಹೆಚ್. ವಿಶ್ವನಾಥ್** :– ಕಿಸಾನ್ ಕ್ರೆಡಿಟ್ ಕಾರ್ಡ್ ಉಪಯೋಗದಿಂದ ಬಡ್ಡಿಯಭಾರ ಕಡಿಮೆಯಾಗಿದೆ ಎನ್ನುವುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಬಿಜಾಪುರದಲ್ಲಿ ಟ್ರಯಲ್ ತೆಗೆದುಕೊಂಡಿದ್ದೇವೆ, ಶೇಕಡ 100 ಭಾಗಕ್ಕೆ ಕಿಸಾನ್ ಕ್ರೆಡಿಟ್ ಕಾರ್ಡ್ ಹಂಚುವ ಮೂಲಕ ಶೇಕಡ 7–9 ಒಳಗೆ ವರ್ಕ್‌ಔಟ್ ಆಗಿದೆ, ಎಷ್ಟು ಬೇಕೋ ಅಷ್ಟು ಉಪಯೋಗಿಸಿದ್ದೇನೆ.

**ಶ್ರೀ ಎಸ್.ಎಸ್. ಪಾಟೀಲ್** :– ಕಿಸಾನ್ ಕ್ರೆಡಿಟ್ ಯೋಜನೆಯಡಿಯಲ್ಲಿ ಶೇಕಡ 9 ಬಡ್ಡಿದರಲ್ಲಿ ಸಾಲ ಪಡೆಯುವ ಬಗ್ಗೆ ಎಂದು ಹೇಳಿದ್ದೀರಿ. ಶೇಕಡ 9 ಬಡ್ಡಿದರದಲ್ಲಿ ಕೊಡುತ್ತೀರಾ? ನಾನು ಕೇಳುತ್ತಿರುವುದು ಅವರಿಂದ ಶೇಕಡ 9 ರಷ್ಟು ಬಡ್ಡಿ ದರವನ್ನು ತೆಗೆದುಕೊಳ್ಳುತ್ತೀರಾ? ಇದು ನನ್ನ ಪ್ರಶ್ನೆ, ಇಲ್ಲಿ ನೀವು ರೈತರಿಗೆ ಮೋಸ ಮಾಡಲು ಆ ರೀತಿ ಬರೆದಿದ್ದೀರಿ; ಶೇಕಡ 9 ಬಡ್ಡಿದರಲ್ಲಿ

ನೀವು ಆಕರಣೆ ಮಾಡಿರುವ ಒಂದು ಉದಾಹರಣೆಯನ್ನು ನನಗೆ ತೋರಿಸಿ, ನಿಮ್ಮಲ್ಲಿ ಕ್ಷಮೆ ಕೇಳುತ್ತೇನೆ. ಅಲ್ಲಿ ಬಡ್ಡಿ ದರವನ್ನು ಶೇಕಡ 13–14 ರಷ್ಟು ಹಾಕುವುದು.

ಶ್ರೀ ಹೆಚ್. ವಿಶ್ವನಾಥ್ :– ಈಗ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ರಾಜ್ಯದಲ್ಲಿ ಸುಮಾರು 12 ಲಕ್ಷ ಕುಟುಂಬಗಳನ್ನು ಗುರುತಿಸಿ ನಾವು ಈಗಾಗಲೇ ಸುಮರು 8 ಲಕ್ಷ ಕುಟುಂಬಗಳಿಗೆ ಪೂರೈಸಿದ್ದೇವೆ. ಬಿಜಾಪುರದಲ್ಲಿ ಶೇಕಡ 100ಕ್ಕೆ 100 ರಷ್ಟು ಪ್ರಯೋಗಾತ್ಮಕವಾಗಿ ತೆಗೆದುಕೊಂಡು ಅದನ್ನು ನಾವು ವರ್ಕ್‌ಔಟ್ ಮಾಡಿದಂತಹ ಸಂದರ್ಭದಲ್ಲಿ ಸುಮಾರು ಶೇಕಡ 7 ರಿಂದ ಎಂಟೂವರೆ ಪರ್ಸೆಂಟ್ ಶೇ 7 ಬಡ್ಡಿಗೆ ಆ ಭಾರ ಇಳಿದಿದೆ. ಕಿಸಾನ್ ಕಾರ್ಡ್ ಅಪರೇಟ್ ಮಾಡುವುದರ ಮೂಲಕ ಅದನ್ನು ಇಳಿಸಿದ್ದೇವೆನ್ನುವುದನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಸ್.ಎಸ್. ಪಾಟೀಲ್ :– ನಾನು ಕೇಳುವುದು, ಬಡ್ಡಿ ಆಕರಣೆ ಮಾಡುತ್ತೇವೆಯಲ್ಲಾ ನೂರಕ್ಕೆ ಎಷ್ಟು ಪರ್ಸೆಂಟ್ ಎಂದು ಅವನು ಹದಿನೈದು ದಿವಸದಲ್ಲಿ ಹಚ್ಚಿರಬಹುದು ಇದೆಲ್ಲ ಕತೆ ಮಂತ್ರಿಗಳು ನನಗೆ ಹೇಳಲಿಕ್ಕೆ ಬರಬೇಡಿ, ಇದು ಕತೆ ನಿಮ್ಮದು. ನಾನು ಅವರನ್ನು ನೇರವಾಗಿ ಕೇಳುತ್ತೇನೆ. ಬಡ್ಡಿ ಆಕರಣೆ ಮಾಡುವ ಮುನ್ನ ಸೆಕ್ರೆಟರಿ ನೂರಕ್ಕೆ 9 ಪರ್ಸೆಂಟ್ ಅಂತೆ ಆಕರಣೆ ಮಾಡುತ್ತಾನೋ ಇಲ್ಲವೋ ಅಷ್ಟನ್ನು ಹೇಳಿ, ಅಲ್ಲಿ 14 ಪರ್ಸೆಂಟ್ 18 ಪರ್ಸೆಂಟ್ ಬಡ್ಡಿ ಆಕರಣ ಮಾಡಿ ಇಲ್ಲಿ 9 ರಂತೆ ಆಕರಣೆ ಮಾಡಿದ್ದೇವೆಂದು ಹೇಳುತ್ತೀರಲ್ಲಾ ಇದ್ಯಾವುದು ತಗಲು ನಡೆಯಿರಿ ಹೋಗೋಣ ಯಾವುದು ಆ ಬಿಜಾಪುರದ ಬ್ಯಾಂಕ್? ನಮಗೆ ಕಥೆ ಹೇಳುವುದು ಬೇಡ ನಮಗೆ ನೇರನಾಗಿ ಶೇಕಡ 9 ಬಡ್ಡಿದರದಲ್ಲಿ ಸಾಲ ಕೊಡುತ್ತೇವೆಂದು ಹೇಳಿದ್ದೀರಿ, ಮೋಸ ರೈತರಿಗೆ ಕಡುಮೋಸ ಇಲ್ಲಿ 2003–04ನೇ ಸಾಲಿನಲ್ಲಿ ಏನೇನು ಪುಸ್ತಕದಲ್ಲಿ ಹೇಳಿದ್ದೀರಿ. ಮಾಡಿದ್ದೇವೆಂದು ನಾನು ಒಂದೆರಡನ್ನು ನೋಡಿದ್ದೇನೆ ಪೂರ್ಣ ನೋಡಲಾಗಲಿಲ್ಲ. ಇದರಲ್ಲಿ ನೀವು ಹೇಳಿದ್ದೀರಿ. ಉತ್ತರ ಕರ್ನಾಟಕದ ಏಳು ಹಿಂದುಳಿದ ಜಿಲ್ಲೆಗಳಲ್ಲಿ 75 ಹೊಸ ವಸತಿನಿಲಯಗಳನ್ನು ಆರಂಭಿಸುವ ಬಗ್ಗೆ ಕಳೆದ ವರ್ಷದ ಆಯವ್ಯಯದಲ್ಲಿ ಹೇಳಿದ್ದೀರಿ, ಪ್ರಗತಿಯಲ್ಲಿದೆ ಎಂದು ಹೇಳಿದ್ದೀರಿ. 2003–04ನೇ ಸಾಲಿನ ಆಯವ್ಯಯದ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ ನಿಮಗೆ ಕನ್ನಡ ಬರುವುದಿಲ್ಲ. ನನಗೂ ಕೂಡ ಅರ್ಧಂಬರ್ಧ ಇಂಗ್ಲಿಷ್ ಬರುತ್ತದೆ. ಇಲ್ಲಿರುವಂತೆ ಓದುತ್ತೇನೆ Action taken report on Budget 2003-04. ಉತ್ತರ ಕರ್ನಾಟಕಕ್ಕೆ 75 ಹೊಸ ವಸತಿನಿಲಯಗಳನ್ನು ಆರಂಭಿಸುವ ಬಗ್ಗೆ, ಪ್ರಗತಿಯಲ್ಲಿದೆ ಅದೇನು ಪ್ರಗತಿ ಒಂದೂ ಕೊಟ್ಟಿಲ್ಲ. ಇದು ನಿಮ್ಮ ಪ್ರಗತಿ. ಇನ್ನು ಅಲ್ಪಸಂಖ್ಯಾತರನ್ನು ಒಲೈಸುವುದಕ್ಕೆ ಏನೇನೊ ಹೇಳಿದ್ದೀರಿ, ಇಲ್ಲಿ ಮಜಾ ನೋಡಿ ಕಳೆದ ವರ್ಷದ್ದು ಹೇಳುತ್ತೇನೆ ಅಲ್ಪಸಂಖ್ಯಾತರ ಸಮುದಾಯ ನಿರುದ್ಯೋಗ ಯುವಜನರಿಗೆ ಸಣ್ಣಪುಟ್ಟ ಉದ್ಯಮದಲ್ಲಿ ತೊಡಗುವವರಿಗೆ ಬಡ್ಡಿ ಸಹಾಯಧನ ಯೋಜನೆ ಜಾರಿಗೊಳಿಸುವ ಬಗ್ಗೆ, ಪ್ರಗತಿಯಲ್ಲಿದೆ. ಇದು ಅಲ್ಪಸಂಖ್ಯಾತರ ನಿರುದ್ಯೋಗಿ ಯುವಕರಿಗೆ ಮಾಡಿದ ಮೋಸ ಈ ವರ್ಷವೂ ಅದನ್ನೇ ಹೇಳುವುದಕ್ಕೆ ಹೊರಟಿದ್ದೀರಿ. ಇದನ್ನೆಲ್ಲಾ ಓಟಿಗಾಗಿ ಸುಮ್ಮನೆ ಹೇಳಲಾಗಿದೆ ಈ ಸಾರಿ ಆಯವ್ಯಯದಲ್ಲಿ ಏನು ಹೇಳಿದ್ದಾರೆ ಅದೆಲ್ಲಾ ರಾಜಕೀಯ ಬಜೆಟ್ ಅದು ಆಗುವುದಲ್ಲ. ನೀವೇ ಅಧಿಕಾರಕ್ಕೆ ಬಂದರೂ ಮಾಡುವುದಕ್ಕೆ ಸಾಧ್ಯವಿಲ್ಲ. ನಂತರ ಕರ್ನಾಟಕ ಹಣಕಾಸು ನಿಗಮದಿಂದ ಸಣ್ಣಪುಟ್ಟ ಉದ್ಯಮದಲ್ಲಿ ತೊಡಗುವ ಯುವಕರ ಸಾಲಕ್ಕೆ ಶೇಕಡ 3ರಷ್ಟು ಬಡ್ಡಿ ಸಹಾಯಧನವನ್ನು [illegible] ಬಗ್ಗೆ,

ಪ್ರಗತಿಯಲ್ಲಿದೆ ಎಲ್ಲವನ್ನು ಅದೇಗೀತಿಯಾಗಿ ಹೇಳಿದ್ದೀರಿ ಈ ರೀತಿಯಾಗಿ ಏತಕ್ಕೆ ಹೇಳುತ್ತೀರಿ? ನೀವು ಕೊಟ್ಟಿರುವ ಆಯವ್ಯಯ ಪುಸ್ತಕವನ್ನೇ ತೆಗೆದುಕೊಂಡು ಹೇಳುತ್ತಿದ್ದೇನೆ ಇದನ್ನೆಲ್ಲಾ ಹೇಳುತ್ತಾ ಹೋದರೆ ಎಲ್ಲವೂ ಬೋಗಸ್, ಒಂದು ಒಳ್ಳೆಯದು ಸಿಗುವುದಿಲ್ಲ. ಈ ವರ್ಷದು ಅದಕ್ಕಿಂತ ಹೆಚ್ಚಾಗಿ ಚುನಾವಣೆಯ ಆಯವ್ಯಯ ನಾಳೆ ವರ್ಷವೆಲ್ಲಾ ಮುಗಿದರೂ ಕೂಡ ಹತ್ತು ಮಂದಿಗೆ ಹೆಣ್ಣು ಮಕ್ಕಳಿಗೆ ನೀವು ಅಡಿಗೆ ಅನಿಲವನ್ನು ಕೊಟ್ಟಿರುವುದಿಲ್ಲ. ನಂತರ ಮುಂದಿನ ಆಯವ್ಯಯದಲ್ಲಿ ಪ್ರಗತಿಯಲ್ಲಿದೆ ಎಂದು ಬರೆಯುವುದು ದುರ್ದೈವದಿಂದ ಮಾನ್ಯ ಖರ್ಗೆಯವರು ಆರಿಸಿ ಬಂದು ಈ ರಾಜ್ಯದ ಮುಖ್ಯಮಂತ್ರಿಯಾದರೂ ಇದನ್ನು ನೀವು ಮಾಡುವುದಕ್ಕಾಗುವುದಿಲ್ಲ. ಅವರು ಮುಖ್ಯಮಂತ್ರಿಯಾಗಲೆಂದು ನಾನು ಬಹಳ ಸಂತೋಷ ಪಡುತ್ತೇನೆ. ಬೇರೆಯವರಿಗಿಂತ ಬಹಳ ಶುದ್ಧರಿದ್ದೀರಿ ಅವರ ಬಜೆಟ್ ಏನೆಂದರೆ, ಮಾನ್ಯ ಖರ್ಗೆಯವರಿಗೆ ಪಜೀತಿ ಬಂದಿದೆ, ಆ ಬಳ್ಳಾರಿ ಮಂದಿಗೆ ಈ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ತೆಗೆದದ್ದು ಯೋಗ್ಯವೇ ಎಂದು ಕೇಳಿದೆ ಎಲ್ಲರೂ ಸುಮ್ಮನೆ ಕುಳಿತುಕೊಂಡಿರುತ್ತಾರೆ ಅದನ್ನು ತೆಗೆದದ್ದು ಬರಾಬರಿಯೆಂದು ನೀವು ಊರಿಗೆ ಹೋಗಿ ಮಾನ್ಯ ಖರ್ಗೆಯವರು 7–8 ಸಾರಿ ಆರಿಸಿ ಬಂದಿದ್ದೀರಿ ಏಕೆಂದರೆ ಅಲ್ಲಿ ಜನರಿಗೆ ಕೆಲಸ ಮಾಡಿದ್ದೀರಿ ಇದನ್ನು ತೆಗೆಸಿದ್ದೇವೆಂದರೆ, ನಿಮಗೆ ನೋವಿದೆ ಅದನ್ನು ಹೇಳುವುದಕ್ಕೆ ತಯಾರಿಲ್ಲ. ಏನು ಮಾಡುವುದು ನಾವು ಅನ್ನುತ್ತೇವೆ. ನೀವು ಇಲ್ಲಿ ಕುಳಿತುಕೊಂಡಿದ್ದರೆ ಆ ರೀತಿಯಾಗಿ ಮಾತನಾಡುತ್ತಿದ್ದಿ. ನಮ್ಮ ಸರ್ಕಾರ ಇದನ್ನೇನಾದರೂ ತೆಗೆದುಬಿಟ್ಟದ್ದರೆ ನಿಮ್ಮ ಕೈಯಿಂದ ಬಹಳಷ್ಟು ಮಾತುಗಳನ್ನು ಕೇಳಬೇಕಾಗಿತ್ತು. ನಾವು ಬಾಳ್ವೆ ಮಾಡುವುದು ಕಷ್ಟಯಿತ್ತು. ಹಿರಿಯಸಚಿವರಾಗಿ ತಾವು ಸುಮ್ಮನೆ ಕುಳಿತಿದ್ದೀರಿ ನೋಡಿ. 38 ಕೋಟಿ ರೂಪಾಯಿ ಇದ್ದುದ್ದನ್ನು ತೆಗೆದು ಉತ್ತರಕರ್ನಾಟಕ ಅಭಿವೃದ್ಧಿ ಮಂಡಳಿ ಮಾಡುತ್ತೇವೆಂದು ಹೇಳಲಾಗಿದೆ ಯಾರನ್ನು ಅಧ್ಯಕ್ಷರನ್ನು ಮಾಡುತ್ತೀರಿ, ಮುಖ್ಯಮಂತ್ರಿಗಳ ಸಹಿ ಮಾಡಿಸಿ ಯಾರಾದರೂ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ಇನ್ನೇನು ಮೂರು ದಿವಸಗಳಲ್ಲಿ ಸರ್ಕಾರ ಹೋಗುತ್ತದೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ** :– ಅದಕ್ಕೆ ಸಮತೋಲನ ಅಭಿವೃದ್ಧಿ ಎಂದು ಅದಕ್ಕೆ ಹೆಸರನ್ನು ಕೊಟ್ಟಿದ್ದಾರೆ 5 ಕೋಟಿ ರೂಪಾಯಿ ಅದಕ್ಕೆ ಪ್ರಾವಿಷನ್ ಮಾಡಿದ್ದಾರೆ ಇದರಲ್ಲಿ ದಕ್ಷಿಣ ಹಾಗೂ ಉತ್ತರ ಕರ್ನಾಟಕ ಎರಡೂ ಸೇರಿಸಿದ್ದಾರೆ. ಇದೊಂದು ದೊಡ್ಡ ದುರಂತ ತಾವೆಲ್ಲಾ ಹಿರಿಯರಿದ್ದು, ನಮ್ಮ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರದ್ದು ಮಾಡುತ್ತೇವೆಂದರೆ ಇದಕ್ಕಿಂತ ದೊಡ್ಡ ದುರಂತ ಮತ್ತೇನೂ ಇಲ್ಲವೆಂದು ಹೇಳಬೇಕಾಗುತ್ತದೆ.

**ಶ್ರೀ ಎಸ್.ಎಸ್. ಪಾಟೀಲ್** :– ನನ್ನ ಕೇಳಿದರೆ, ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ಇಟ್ಟು ಆ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಹಿಂದುಳಿದ ದೃಷ್ಟಿಯಿಂದ ನೋಡಿದರೆ ಅದನ್ನು ಇಡಬೇಕು. ತಾವು ಒದಗಿಸಿರುವ 5 ಕೋಟಿ ರೂಪಾಯಿಗಳು ಸಿಬ್ಬಂದಿಯ ವೆಚ್ಚಕ್ಕೆ ಸಾಕಾಗುವುದಿಲ್ಲ. ಇಲ್ಲಿ ಸುಮ್ಮನೆ ಆಯವ್ಯಯುವನ್ನು ಹಂಚಿತೋರಿಸಬೇಕೆಂದು ಹೇಳಿದ್ದೀರಿ, ಇಲ್ಲಿಂದ ಅಲ್ಲಿಗೆ ಹಾಕಿ ಅಲ್ಲಿಂದ ಇಲ್ಲಿಗೆ ಹಾಕಿ ಏನೇನೋ ಮಾಡಿ ತೋರಿಸಿದ್ದೀರಿ. ಅದನ್ನು ಯಾವ ಮಹಾನುಭಾವ ಈ ಆಯವ್ಯಯವನ್ನು ಬರೆದಿದ್ದಾನೋ ಗೊತ್ತಿಲ್ಲ. ಇವರು ತೆರಿಗೆಯೇ ಹಾಕಿಲ್ಲವಂತೆ ಹೇಳಿ, ನೀವು ತೆರಿಗೆ ಹಾಕಿಲ್ಲವೆ? ನೀವು ಹಾಕಿರುವ ತೆರಿಗೆ 900–1000 ಕೋಟಿರೂಪಾಯಾಗುತ್ತದೆ.

ಮತ್ತೆ ತಾವು ಈ ಸದನದ ಘನತೆ ಗೌರವವನ್ನು ಕಡಿಮೆ ಮಾಡಿದ್ದೀರಿ, ಅಧ್ಯಕ್ಷರು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಸದನ ನಡೆಯುವ ಪೂರ್ವದಲ್ಲಿ ಇವರು ತೆರಿಗೆಯನ್ನು ಹೆಚ್ಚಿಗೆ ಮಾಡಿದ್ದಾರೆ. ಬಜೆಟ್ ಮಂಡಿಸುತ್ತಾರೆ. ಹೇಗಿದ್ದರೂ ಚುನಾವಣೆ ಬರುತ್ತದೆಂದು, ಅಲ್ಲಿ ತೆರಿಗೆ ಹೆಚ್ಚಿಗೆ ಮಾಡಿ, ಆಯವ್ಯಯದಲ್ಲಿ ಇಲ್ಲವೆಂದು ಹೇಳುತ್ತಾರೆ. ಇದಕ್ಕಿಂತ ಮೋಸ ಮತ್ಯಾವುದು ಬೇಕು? ಹೇಳಿ?

ಛೇರ್ಮನ್ :- ತಾವು ತಮ್ಮ ಚರ್ಚೆಯನ್ನು ಮುಗಿಸುತ್ತೀರಾ?

ಶ್ರೀ ಎಸ್.ಎಸ್. ಪಾಟೀಲ್ :- ಇದು ಇನ್ನೂ ಪೀಠಿಕೆ, ಬೇಕಾದರೆ ನಾಳೆ ಮುಂದುವರೆಸುತ್ತೇನೆ.

ಛೇರ್ಮನ್ :- ಸದನವನ್ನು ಈಗ ಮುಂದೂಡುತ್ತಿದ್ದೇನೆ ಪುನಃ ಸದನವು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸಂಜೆ 5.59 ನಿಮಿಷಕ್ಕೆ ಸಭೆಯು ಮುಂದೂಡಲ್ಪಟ್ಟು ಪುನಃ ನಾಳೆ ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರಲು ನಿಶ್ಚಯಿಸಲಾಯಿತು)

---

(† ಈ ಚಿಹ್ನೆಯುಳ್ಳ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ